
ಪುಸ್ತಕ ಪ್ರಪಂಚ

ಸೆಪ್ಟೆಂಬರ್ ೧೯೯೯



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೯ ಸಂಚಿಕೆ ೧೨ ಸೆಪ್ಟೆಂಬರ್ ೧೯೯೯

ಪರಿವಿಡಿ

ಮುಖಪುಟ ಚಿತ್ರ : ಸಚಿನ್ ತೆಂಡುಲ್ಕರ್

PUSTAKA PRAPANCHA : Monthly

Published and printed by Karnataka State Adult Education Council, Mysore-6. Price : Rupees Ten

ಬಿಡಿಪ್ರತಿ : ರೂ. ೧೦

ವಾರ್ಷಿಕ ಚಂದಾ : ರೂ. ೧೦೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೬೦೦

ಸಂಸ್ಥೆಗೆ : ರೂ. ೯೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು–೫೭೦ ೦೦೬


ಸೆಪ್ಟೆಂಬರ್ ೫–ಶಿಕ್ಷಕರ ದಿನ



ಡಾ॥ ರಾಧಾಕೃಷ್ಣನ್ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತತ್ವಶಾಸ್ತ್ರದ ಉಪನ್ಯಾಸಕರಾಗಿದ್ದರು. ಈ ಸಂದರ್ಭದಲ್ಲೇ ರಾಧಾಕೃಷ್ಣನ್ ಅವರು ಕಲ್ಕತ್ತ ವಿಶ್ವವಿದ್ಯಾನಿಲಯದ ಉನ್ನತ ಹುದ್ದೆಗೆ ನೇಮಕವಾಗಿರುವ ಆದೇಶ ಬಂತು. ಮೈಸೂರು ಕ್ರಾಫರ್ಡ್ ಭವನದಲ್ಲಿ ಅವರಿಗೆ ಬೀಳ್ಕೊಡುವ ಸಮಾರಂಭ ನಡೆಯಿತು. ಸಮಾರಂಭ ಮುಕ್ತಾಯದ ಅನಂತರ ರೈಲು ನಿಲ್ದಾಣಕ್ಕೆ ರಾಧಾಕೃಷ್ಣನ್ ಅವರನ್ನು ಕರೆದೊಯ್ಯಲು ಕುದುರೆಗಳನ್ನು ಕಟ್ಟಿದ್ದ 'ಸಾರೋಟ್' ಸಿದ್ಧವಾಗಿತ್ತು. ಇದನ್ನು ನೋಡಿದ ಅವರ ವಿದ್ಯಾರ್ಥಿ ಸಮೂಹ ಕಟ್ಟಿದ್ದ ಕುದುರೆಗಳನ್ನು ಬಿಚ್ಚಿ, ತಾವೇ ಹೆಗಲು ಕೊಟ್ಟು 'ಸಾರೋಟ್' ಎಳೆದು ರೈಲು ನಿಲ್ದಾಣಕ್ಕೆ ತಂದರು. ಇಂಥ ಸಂದರ್ಭ ಕಂಡು ನೆರೆದಿದ್ದ ಅಭಿಮಾನಿಗಳ ಕಣ್ಣಲ್ಲಿ ನೀರು ಹನಿಯಿತು.

ಆದರ್ಶ ಶಿಕ್ಷಕರನ್ನು ವಿದ್ಯಾರ್ಥಿಗಳು ಹೇಗೆ ಕಾಣುತ್ತಾರೆ ಎಂಬುದಕ್ಕೆ ಇದೊಂದು ನಿದರ್ಶನ.

ಸೆಪ್ಟೆಂಬರ್ ೮–ಅಂತರರಾಷ್ಟ್ರೀಯ ಸಾಕ್ಷರತಾ ದಿನ



ಭಾರತ ದೇಶದ ಸಂಪೂರ್ಣ ಸಾಕ್ಷರತೆ ನಮ್ಮ ಸಾಮೂಹಿಕ ಜವಾಬ್ದಾರಿ.

ನಾವು ನಮ್ಮ ಪ್ರಯತ್ನಗಳನ್ನು ತೀವ್ರಗೊಳಿಸೋಣ.

ಶ್ರೀ ಮುರಳಿ ಮನೋಹರ ಜೋಶಿ
ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರು

ಶ್ರೀ ಅಟಲ್ ಬಿಹಾರಿ ವಾಜಪೇಯಿ
ಪ್ರಧಾನ ಮಂತ್ರಿಗಳು

ಕಾರ್ಗಿಲ್-ಯುದ್ಧದ ಕಥೆ

೧೯೪೭ ರಲ್ಲಿ ದೇಶ ವಿಭಜನೆಯಾಗುತ್ತಿದ್ದಂತೆ ತಲೆಯೆತ್ತಿದ ಕಾಶ್ಮೀರ ಸಮಸ್ಯೆ ದಿನದಿಂದ ದಿನಕ್ಕೆ, ಮಾಸದಿಂದ ಮಾಸಕ್ಕೆ ಉಲ್ಬಣಗೊಳ್ಳುತ್ತಿದೆ, ಜಟಿಲವಾಗುತ್ತಿದೆ, ವಿಷಮವಾಗುತ್ತಿದೆ. ಇಂಥ ವಿಷಮ ಪರಿಸ್ಥಿತಿಗೆ ಮುಖ್ಯ ಕಾರಣ ಪೂರ್ವಗ್ರಹ ಪೀಡಿತವೂ ಮಾತ್ಸರ್ಯ ಪ್ರೇರಿತವೂ ಪ್ರತಿಷ್ಠಾಹಂಕಾರ ಸಂಭ್ರಮಿತವೂ ಆದ ಜಗತ್ತಿನ ಪ್ರಬಲ ರಾಷ್ಟ್ರಗಳೆಷ್ಟು ಕಾರಣವೋ, ಪಾಕಿಸ್ತಾನದ ಅವ್ಯವಸ್ಥಿತ ಭೀಕರ ದಾರಿದ್ರ್ಯ ಮಯ ಗೊಂದಲದ ಅನಾಯಕತ್ವದ ಪರಿಸ್ಥಿತಿಯೂ ಅಷ್ಟೇ ಕಾರಣವೆನ್ನಬೇಕು. ಇವು ಗಳಿಗಿಂತ ಮಿಗಿಲಾದ ಮತ್ತೊಂದು ಕಾರಣವೂ ಉಂಟು. ಶತಶತಮಾನಗಳ ಅನ್ಯಾಯ ಅಧರ್ಮಗಳ ಫಲರೂಪದ ಶಾಪವೆಂಬಂತೆ ತಾಂಡವವಾಡುತ್ತಿರುವ ನಿರಕ್ಷರತೆ ಜಾತೀಯತೆಗಳ ಪರಿಣಾಮವೆಂಬಂತಿರುವ ಅಜ್ಞಾನ ಅನೈಕ್ಯಗಳು ಭರತಖಂಡವನ್ನು ದುರ್ಬಲಗೊಳಿಸಿರಲಾಗಿ, ಯಾವ ರಾಷ್ಟ್ರವೂ ಅದರ ಹಿರಿಮೆ ಶಕ್ತಿ ಸಾಮರ್ಥ್ಯಗಳನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ. ದೇಶದ ಭದ್ರತೆಯನ್ನು ರಕ್ಷಿಸುವಲ್ಲಿ ಪೋಖ್ರಾನ್ ಕ್ಷಿಪಣಿ ಪ್ರಯೋಗಗಳಿಗಿಂತ, ಸೈನಿಕ ಶಕ್ತಿಗಿಂತ, ಅಕ್ಷತವೂ ದೋಷವಿವರ್ಜಿತವೂ ಆದ ಏಕೀಭಾವ ಜನ ಮನಸ್ಸಿನಲ್ಲಿ ಬಲವಾಗಿ ನೆಲೆಯೂರಬೇಕು.

ಔಚಿತ್ಯ ವಿವೇಕವಿಲ್ಲದೆ, ಕಾಶ್ಮೀರ ಸಮಸ್ಯೆಯನ್ನು ಎಲ್ಲ ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಹಾಗೂ ಇಸ್ಲಾಮಿ ಸಮ್ಮೇಳನಗಳಲ್ಲಿ ಪದೇ ಪದೇ ಎತ್ತುವ ಮೂಲಕ ಪಾಕಿಸ್ತಾನ ತನ್ನ ಹಕ್ಕನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ. ಆ ಸಮಸ್ಯೆ ಯಾವಾ ಗಲೂ ಜೀವಂತವಾಗುಳಿಯಬೇಕು, ಉಳಿದರೆ ಮಾತ್ರ ಪಾಕಿಸ್ತಾನವನ್ನು ಕುಣಿಸ ಬಹುದು, ಉಳಿಯದೆ ಇಂಡಿಯಾ ಪರವಾಗಿ ಬಗೆಹರಿಯುವುದಾದರೆ, ಅದು ಪ್ರಬಲ ರಾಷ್ಟ್ರವಾಗುತ್ತದೆಂಬ ದುರ್ಬುದ್ಧಿ ಹಾಗೂ ಕುಹಕ ವರ್ತನೆ ಹಲವು ರಾಷ್ಟ್ರಗಳ, ಮುಖ್ಯವಾಗಿ ಅಮೆರಿಕೆಯ ಹೂಟವಾಗಿದೆ. ಏಷ್ಯಾದಲ್ಲಿ ತನಗೊಂದು ನೆಲೆ ಬೇಕು, ಅಂಥ ನೆಲೆ ಬೇರೆ ರಾಷ್ಟ್ರಗಳಲ್ಲಿ ಸಿಗಲಾರದೆಂಬ ಕಾರಣಕ್ಕಾಗಿ, ಪಾಕಿಸ್ತಾನವನ್ನದು ಓಲೈಸುತ್ತಿದೆ. ಯುದ್ಧೋದ್ಯಮದ ದುಸ್ಸಾಹಸದಿಂದಾಗಿ ಈಗಾಗಲೇ ಮೂರು ಸಲ ಭಾರತೀಯ ಸೈನ್ಯದಿಂದ ಬಲವಾದ ಪೆಟ್ಟು ತಿಂದು ವಾಪಸಾದ ಪಾಕಿಸ್ತಾನ ಸೈನ್ಯ ಹಸಿಗಾಯ ಮಾಯುವ ಮುನ್ನವೇ ವಂಚನೆಯ ದುಷ್ಕಾರ್ಯದಲ್ಲಿ ತೊಡಗಿದೆ. ಮೊದ ಲಿಂದಲೂ ಅತಿಕ್ರಮಣಕಾರರು ಭಾರತಕ್ಕೆ ನುಗ್ಗಿ ಅಮಾಯಕ ಜನರನ್ನು ನಿಷ್ಕರುಣೆ ಯಿಂದ ಕೊಲೆಗೈಯುತ್ತಿದ್ದರು. ಈ ಸಲ ಆಫ್ಘಾನಿಸ್ತಾನದಲ್ಲಿ ತಯಾರಾದ ಮುಜಾಹಿದ್ದೀನ್ ಪಡೆಯನ್ನು ಸ್ವಾತಂತ್ರ್ಯ ವೀರರ ಹೆಸರಿನಲ್ಲಿ, ತಮ್ಮ ಸೈನ್ಯದ ರಕ್ಷೆ ಯಲ್ಲಿ ನಮ್ಮ ದೇಶದೊಳಗೆ ನುಗ್ಗಿಸಿದ್ದು ಅಕ್ಷಮ್ಯ ಅಪರಾಧ. ಐಎಸ್ಐ ಅಂಥ

ಗೂಢಚಾರ ಪಡೆಯನ್ನು ಸೃಷ್ಟಿಸುವ, ಅದನ್ನು ಆಗದ ದೇಶಗಳಿಗೆ ಕಳಿಸಿ ಸಂಚು ಹೂಡುವ ಹೇಯ ಕಾರ್ಯ ಇಂಡಿಯಾಕ್ಕೆ ಗೊತ್ತಿಲ್ಲ. ಈ ಐಎಸ್‌ಐ ಗುಪ್ತದಳ ಇಂಡಿಯಾ ದೇಶದಲ್ಲೆಲ್ಲ ಸೇರಿಕೊಂಡಿದೆಯೆಂಬ ಸುದ್ದಿ ಜಗಜ್ಜಾಹೀರಾಗಿದೆ. ಅದರ ಯಶಸ್ಸಿಗೆ ಇಲ್ಲಿಯ ಪಾಕ್ ಏಜೆಂಟರೆ ಕಾರಣರೆಂಬುದು ನಮ್ಮ ಗುಪ್ತದಳಕ್ಕೆ ಗೊತ್ತಿಲ್ಲವೆ? ಗೊತ್ತಿದ್ದರೆ, ಅವರನ್ನು ಬೇಟೆಯಾಡಿ ಬಹಿರಂಗಗೊಳಿಸಬೇಕಾದ್ದು ನಮ್ಮ ದಳದ ಧರ್ಮವಲ್ಲವೆ? ಹತ್ತು ವರ್ಷದಿಂದ ವೀರಪ್ಪನ್‌ನನ್ನು ಹಿಡಿಯಲಾರ ದವರು ದುಷ್ಟ ಪಾಕಿಗಳನ್ನು ಓಡಿಸುವುದು ಸಾಧ್ಯವೆ? ಎಂಬ ಸಂದೇಹವಿದ್ದರೂ ನಮ್ಮ ಸೈನ್ಯದ ಸಾಮರ್ಥ್ಯ ಶ್ಲಾಘ್ಯಾರ್ಹವಾದದ್ದು. ಕಾಶ್ಮೀರ ಯಾವ ರಾಷ್ಟ್ರಕ್ಕೆ ಸೇರಬೇಕೆಂಬುದಕ್ಕೆ ಜನಮತ ಪಡೆಯಬೇಕೆಂಬುದರ ಅರ್ಥವೇನು? ಅಂಥ ಹೇಳಿಕೆಯ ಹಿಂದಿರುವ ಧ್ವನಿಯನ್ನೂ ಅರ್ಥಛಾಯೆಗಳನ್ನೂ ಇಂಡಿಯಾದ ರಾಜಕೀಯ ಪಕ್ಷ ಗಳು ಚುನಾವಣೆಗಳನ್ನು ಮರೆತು ಸ್ಪಷ್ಟವಾಗಿ ಗ್ರಹಿಸಬೇಕಾಗಿದೆ.

ಪ್ರಧಾನಿ ವಾಜಪೇಯಿಯವರ ಬಸ್ ಸೌಹಾರ್ದ ಪ್ರಯಾಣ ನಡೆಯುತ್ತಿರ ವಾಗಲೇ ಲಾಹೋರ್ ಒಪ್ಪಂದದ ಘೋಷಣೆ ಜಗತ್ತಿನಾದ್ಯಂತ ಅನುರಣಿಸುತ್ತಿ ದ್ದಾಗಲೇ ಪಾಕಿಸ್ತಾನೀ ಸೈನ್ಯ ಮತ್ತು ಅತಿಕ್ರಮಣಕಾರರು ಅಂತ ರಾಷ್ಟ್ರೀಯ ನಿಯಂತ್ರಣ ರೇಖೆಯನ್ನು ದಾಟಿ ನಮ್ಮ ದೇಶದೊಳಗೆ ನುಗ್ಗಿದ್ದರೆಂಬುದ ನಮ್ಮ ಸರ್ಕಾರಕ್ಕೆ ಕೀರ್ತಿ ತರದ ಹಾಸ್ಯಾಸ್ಪದ ಸಂಗತಿ. ೧೯೯೯ ರ ಜನವ ಒಂದರಂದೇ ನಿಯಂತ್ರಣ ರೇಖೆಯ ಬಳಿ ಪಾಕ್ ವಿಮಾನ ಹಾರಾಡುತ್ತಿತ್ತೆಂಬ ಸುದ್ ಯನ್ನು ದೆಹಲಿಗೆ ರವಾನಿಸಲಾಗಿತ್ತಂತೆ. ದಂಡನಾಯಕರ ಮೇಲೆಯೂ ಅಧಿಕಾ ಚಲಾಯಿಸುವ ಅಧಿಕಾರಿಗಳಾಗಲಿ, ಸರ್ಕಾರದ ಯಂತ್ರವಾಗಲಿ ಆ ಸುದ್ದಿಯನ ಬದಿಗೆ ಒತ್ತರಿಸುತ್ತಾರೆ. ಪಾಕಿಗಳ ಇಚ್ಛೆಯಂತೆ ದೇಶವನ್ನು ವಿಭಜನೆ ಮಾಡಿ ಬ್ರಿಟಿಷರೇ ನಿಷ್ಕರ್ಷಿಸಿದ ನಿಯಂತ್ರಣ ರೇಖೆಯನ್ನು ಪಾಕಿಸ್ತಾನ ಸರ್ಕಾರ ಒಪ್ಪ ತ್ತಿಲ್ಲ. ಅದನ್ನು ಶ್ರೀನಗರ ಜಮ್ಮುಗಳ ಕಡೆಗೆ ಸರಿಸಬೇಕಂತೆ. ಮುಂದಿನ ನಾಲ ತಿಂಗಳಲ್ಲಿ ೮೦೦ ಪಾಕಿ ಸೈನಿಕರು ಮತ್ತು ಕೂಲಿ ಸಿಪಾಯಿಗಳು ಕಾರ್ಗಿಲ ಬಟಾಲಿಕ್, ದ್ರಾಸ್, ಮಾಷ್ಕೋಹ ವಲಯಗಳ ಮಂಜು ಹಾಸಿದ ನಿರ್ಜನ ಪ್ರದೇ ಗಳನ್ನು ಆಕ್ರಮಿಸಿಕೊಳ್ಳುತ್ತಾರೆ.

ಕಾರ್ಗಿಲ್ ಲಡಕ್ ಪ್ರದೇಶದ ಒಂದು ಜಿಲ್ಲೆ. ದ್ರಾಸ್ ಬಟಾಲಿಕ್ ಅ ನೆಶೆಯ ತಾಲ್ಲೂಕು ಕೇಂದ್ರಗಳು. ಆ ಭಾಗ ೮೦೦೦ ಅಡಿಗಿಂತಲೂ ಎತ್ತರವಾಗಿ ಪರ್ವತಗಳಂತು ೧೭೦೦೦ ಅಡಿ ಎತ್ತರದವು. ಜನಸಂಖ್ಯೆ ಒಂದು ಲಕ್ಷವಿದ್ದರೆ ಹೆಚ ಬಹುಭಾಗ ಮುಸ್ಲಿಮರು; ಹಿಂದೂ ಬೌದ್ಧ ಕ್ರಿಶ್ಚಿಯನ್ನರೂ ಇದ್ದಾರೆ. ವರ್ಷ ಹಲವು ತಿಂಗಳು ಹಿಮ ಸುರಿಯುತ್ತದೆ; ಮಂಜು ಮುಸುಕಿರುತ್ತದೆ ಜೂನ್ ಮ ಆಕ್ಟೋಬರ್ ತಿಂಗಳಲ್ಲಿ ಮಾತ್ರ ಎರಡೂ ಕಡೆಯ ಸೈನ್ಯಗಳು ಗಸ್ತು ತಿರುಗುತ್ತ ನಿಯಂತ್ರಣ ರೇಖೆಯ ಆಜುಬಾಜುಗಳಲ್ಲಿ. ಚಳಿಗಾಲದಲ್ಲಿ ಆ ರೇಖೆಯಿಂದ ಹಿಂ

ಸರಿಯುತ್ತವೆ. ಈ ಸಲದ ಚಳಿಗಾಲದಲ್ಲಿ ಪಾಕಿಗಳು ವಾಪಸಾಗದೆ, ಇಂಡಿಯಾದ ಸೈನ್ಯ ಹಿಂದಕ್ಕೆ ಸರಿದ ಕೂಡಲೇ ನಿಯಂತ್ರಣ ರೇಖೆಯನ್ನು ದಾಟಿ ಕಾಶ್ಮೀರದ ಕಡೆಗೆ ಎಂಟು–ಹತ್ತು ಕಿ. ಮೀ. ಒಳಗೆ ಪ್ರವೇಶಿಸುತ್ತಾರೆ; ಸಿಮೆಂಟ್ ಗೂಡಾರಗಳನ್ನು ನಿರ್ಮಿಸುತ್ತಾರೆ. ಕಳ್ಳತನದಿಂದ ಕಾಶ್ಮೀರದೊಳಗೆ ನುಸುಳಿ, ಅದನ್ನು ಆಕ್ರಮಿಸಿ ಕೊಳ್ಳಬೇಕೆಂದು ಹವಣಿಸುತ್ತಾರೆ. ಸುಮಾರು ೫೫೫ ಕಿ. ಮೀ. ವಿಸ್ತಾರದ ಇಂಡಿಯಾದ ಭೂಭಾಗವನ್ನು ವಶಪಡಿಸಿಕೊಳ್ಳುತ್ತಾರೆ. ಈ ಹಿನ್ನೆಲೆಯಲ್ಲಿ ನೋಡಿ ದಾಗ ಬಸ್ ಪ್ರಯಾಣವೊಂದು ಪ್ರಹಸನದಂತೆ, ಲಾಹೋರ್ ಒಪ್ಪಂದವೊಂದು ಕಪ್ಪು ಗುಳಿಯಂತೆ ತೋರದಿರಲಾರದು. ಪಾಕಿಗಳ ಅಕ್ರಮ ಪ್ರವೇಶ ಶುರುವಾಗಿ ಆ ವೇಳೆ ಗಾಗಲೆ (೨೨–೨–೯೯) ಎರಡು ತಿಂಗಳಾಗಿದ್ದರೂ ಇಂಡಿಯಾ ಸರ್ಕಾರಕ್ಕೆ ಅದರ ಸುಳುಹು ಗೊತ್ತಿಲ್ಲದಿದ್ದುದೇ ಆಶ್ಚರ್ಯ. ಪಾಕಿಸ್ತಾನದ ಪ್ರಧಾನಿ ಮುಸುಕುನಗೆ ಯೊಂದಿಗೆ ವಾಜಪೇಯಿಯವರನ್ನು ಆಲಿಂಗಿಸಿಕೊಂಡಿರಬೇಕೆಂದು ತೋರುತ್ತದೆ.

ಮೇ ಆರರಂದು ಬೆಳಗ್ಗೆ ೧೧ ಗಂಟೆ ಸಮಯದಲ್ಲಿ ಇಂಡಿಯಾ ಸರ್ಕಾರಕ್ಕೆ ಪಾಕಿಗಳ ಒಳನುಸುಳು ಗೊತ್ತಾದಾಗ, ಅವರಾಗಲೇ ಆಯಕಟ್ಟಿನ ಜಾಗಗಳನ್ನು ಆಕ್ರಮಿಸಿಕೊಂಡಿದ್ದರು. ಮಿತ್ರ ಪಕ್ಷಗಳ ಪ್ರೇಮಕಲಹದಲ್ಲಿ, ಪಕ್ಷ ಪ್ರತಿ ಪಕ್ಷಗಳ ಪರಸ್ಪರ ನಿಂದೆಯಲ್ಲಿ, ರಾಜಕೀಯ ಚದುರಂಗದಾಟದಲ್ಲಿ ನಿರತರಾಗಿದ್ದ ಮಂತ್ರಿಗಳಿಗೆ ಪಾಕಿಗಳ ಒಳನುಸುಳು ಗೊತ್ತಾಗಲಿಲ್ಲವೆಂದು, ಗೊತ್ತಾದಾಗ ಅದನ್ನು ಹಗುರವಾಗಿ ತೆಗೆದುಕೊಂಡರೆಂದು ತೋರುತ್ತದೆ ; ಪಾಕಿಸ್ತಾನದಲ್ಲಿ ಸೇನೆ ಪ್ರಜಾಪ್ರಭುತ್ವದ ಮೇಲೆ ಸವಾರಿ ಮಾಡುತ್ತದೆ ದಿಟ. ಆದರೂ ಪಾಕಿ ಸೇನೆಯ ಮತ್ತು ಕೂಲಿ ಸಿಪಾಯಿಗಳ ಕಾರ್ಗಿಲ್ ಕಾರ್ಯಾಚರಣೆ ಪ್ರಧಾನಿ ನವಾಜ್ ಷರೀಫರಿಗೆ ಗೊತ್ತಿರಲಿಲ್ಲವೆಂದು ಸಾರ್ವ ಜನಿಕವಾಗಿ ರಕ್ಷಣಾಮಂತ್ರಿಗಳು ಹೇಳಿಕೆ ನೀಡಿದ್ದು ಅವರ ಬೇಜವಾಬ್ದಾರಿತನವನ್ನು ಸೂಚಿಸುತ್ತದೆ. ಅಂತೆಯೇ ಒಳನುಸುಳಿದ ಅಪರಾಧಿಗಳಿಗೆ ವಾಪಸಾಗಲು ರಕ್ಷಣೆ ನೀಡುವುದಾಗಿ ಘೋಷಿಸಿದ ಮಂತ್ರಿಗಳ ವರ್ತನೆಯೂ ಸಂದೇಹಾಸ್ಪದವಾಗಿದೆ. ಕುಹಕ ಕುತಂತ್ರಗಳ ಮೂಲಕ ಬೇವಿವೇಕ ಬೇಜವಾಬ್ದಾರಿಯಿಂದಾಗಿ ಜಾರ್ಜ್ ಹಾಗೆ ವರ್ತಿ ಸಿರಬೇಕೇ ಹೊರತು ವಾಜಪೇಯಿಯವರನ್ನು ಕೆಳಗಿಳಿಸಿ, ತಾವು ಪ್ರಧಾನಿಯಾಗಲು ಕಾರ್ಗಿಲ್ ಪ್ರಕರಣವನ್ನು ಸರಿಯಾಗಿ ನಿರ್ವಹಿಸಲಿಲ್ಲವೆಂದು ಮಾಡಿರುವ ಟೀಕೆ (ಟಿ. ಕೆ. ಊಮೆನ್ ಅವರ Kargil in retrospect ಹಿಂದೂ ೨೩–೭–೯೯) ಯನ್ನು ಒಪ್ಪಲಾಗದು. ಅದೇನೇ ಇರಲಿ, ಸೈನ್ಯ ಮತ್ತು ಗೂಢಚಾರ ವಿಭಾಗದ ನಡುವಣ ಹೊಂದಾಣಿಕೆಯ ಅಭಾವ, ಪಾಕಿ ಪ್ರಧಾನಿಯ ವಿಶ್ವಾಸದ್ರೋಹ, ಬಸ್ ಪ್ರಹಸನದ ಸಂತೃಪ್ತಿ ಮತ್ತು ಆಲಸ್ಯ, ಅಧಿಕಾರಿಶಾಹಿಯ ನಿರ್ಲಕ್ಷ್ಯ ಈ ದುರಂತಕ್ಕೆ ಕಾರಣವೆನ್ನುವುದರಲ್ಲಿ ಸಂದೇಹವಿಲ್ಲ. ಜನವರಿ ತಿಂಗಳಲ್ಲಿಯೇ ಒಳನುಸುಳುಕಾರರನ್ನು ನಿಗ್ರಹಿಸಿದ್ದರೆ, ನಮ್ಮ ಕಡೆಯ ಸಾವಿರಾರು ಸಾವು ನೋವುಗಳನ್ನು ಮಕ್ಕಳನ್ನು ಕಳೆದುಕೊಂಡವರ, ವಿಧವೆಯರ ಮತ್ತು ತಬ್ಬಲಿಗಳ ದುಃಖವನ್ನು ತಪ್ಪಿಸಬಹುದಿತ್ತು.

ಕೆಲವು ಅಧಿಕಾರಿಗಳ ನಿರ್ಲಕ್ಷ್ಯ, ಭಯ, ಅನಿರ್ಧಾರ ದೌರ್ಬಲ್ಯ, ನಿರ್ಬುದ್ಧಿ, ಆಲಸ್ಯ ದಿಂದಾಗಿ ಎಷ್ಟೊಂದು ಅನಾಹುತವಾಗುತ್ತದೆಯೆಂಬುದಕ್ಕೆ ಈ ಪ್ರಕರಣವೇ ಸಾಕ್ಷಿ.

೧೭೦೦೦ ಅಡಿ ಎತ್ತರದ ಪರ್ವತ ಶಿಖರದ ಆಯಕಟ್ಟಿನ ಪ್ರದೇಶದಿಂದ ಮದ್ದು ಗುಂಡುಗಳನ್ನು ಸಿಡಿಸುವ ಪಾಕಿ ಸೈನಿಕರಿಗೆ ೮೦೦೦ ಅಡಿ ಕೆಳಗಿನ ಜಾಗದಿಂದ ನಮ್ಮ ವರು ಸವಾಲೆಸೆಯುವುದು ಮಹಾಕಷ್ಟವೆಂಬುದು ಸಾಮಾನ್ಯರಿಗೂ ಅರ್ಥವಾಗುತ್ತದೆ. ಈ ವಿಚಾರದಲ್ಲಿ ನಮ್ಮ ಸೈನಿಕರ ಧೈರ್ಯ ಸಾಹಸಗಳನ್ನು ಮೆಚ್ಚಬೇಕಾದ್ದೇ. ಮುಂಜಾಗ್ರತೆ ಇಲ್ಲದೇ ಮುಂದಿನ ಎಲ್ಲ ಸಮಸ್ಯೆಗಳಿಗೆ ಕಾರಣವಾಯಿತೆಂಬುದನ್ನು ಮರೆಯಲಾಗದು.

ಒಂದು ಮಾತಂತೂ ನಿಜ. ವಾಜಪೇಯಿಯವರ ಸಹನೆ ಸಂಯಮದಿಂದಾಗಿ, ಕುಶಾಗ್ರಮತಿ ಜಸ್ವಂತಸಿಂಗರಂಥ ವಿದೇಶೀ ವ್ಯವಹಾರ ಸಚಿವರ ರಾಜತಾಂತ್ರಿಕತೆ ಯಿಂದಾಗಿ, ಅಂತರರಾಷ್ಟ್ರೀಯ ಸಹಾನುಭೂತಿ ಇಂಡಿಯಾದ ಪರವಾಗಿದೆ; ಪಾಕಿಸ್ತಾನ ಒಂಟಿತನದ ಅಸಹಾಯಕತೆಯನ್ನನುಭವಿಸಬೇಕಾಗಿದೆ. ಆದರೆ ಸಂಯಮವನ್ನು ಹೇಡಿ ತನವೆಂದು ತಿಳಿದರೆ, ಅಸಹಾಯಕತೆಯನ್ನು ನಗದೀಕರಿಸಿಕೊಳ್ಳುವುದಾದರೆ ಲಾಭ ಏಕಪಕ್ಷೀಯವಾಗಿರುತ್ತದೆಂದು ಊಹಿಸಬಹುದಾಗಿದೆ.

ಕಾರ್ಗಿಲ್ ಯುದ್ಧ ಪೂರ್ವಸ್ಥಿತಿಯನ್ನೂ, ಉಗಮ ರೀತಿಯನ್ನೂ, ಯುದ್ಧ ಕಾಲದ ಪರಿಸ್ಥಿತಿಯ ನಿಜಸ್ವರೂಪವನ್ನೂ ತಿಳಿಯಲು ರಾಷ್ಟ್ರದ ಜನ ಕಾತರರಾ ದ್ದಾರೆನ್ನುವುದರಲ್ಲಿ ಸಂಶಯವಿಲ್ಲ. ಸಂಸತ್ ಬೆಂಬಲವಿಲ್ಲದ ಉಸ್ತುವಾರಿ ಸರ್ಕಾ ತೆಗೆದುಕೊಳ್ಳುವ ನಿರ್ಣಯಗಳ ಬಗ್ಗೆ ವಿರೋಧ ಪಕ್ಷಗಳು ಸಂಶಯ ವ್ಯಕ್ತಪಡಿ ದ್ದಲ್ಲದೆ, ರಾಜ್ಯಸಭೆಯನ್ನು ಕರೆದು, ಪರಿಸ್ಥಿತಿಯನ್ನು ಪರಿಚಯಿಸಿಕೊಡಬೇಕೆಂದ ಕೇಳಿದ್ದು ತಪ್ಪಲ್ಲ. ಈಗ ಚುನಾಯಿತ ಜನಪ್ರತಿನಿಧಿಗಳೆಂದರೆ ರಾಜ್ಯಸಭೆಯ ಸದಸ್ಯರ ಮತ್ತು ರಾಷ್ಟ್ರಪತಿಗಳು. ರಾಷ್ಟ್ರಪತಿಗಳು ಸೈನ್ಯದ ವರಿಷ್ಠ ದಂಡನಾಯಕರಾದರೂ ಪ್ರಧಾನಿಗಿರುವ ಅಧಿಕಾರ ಅವರಿಗಿಲ್ಲ. ಆಳುವ ಪಕ್ಷ ರಾಜ್ಯಸಭೆಯಲ್ಲಿ ಅಲ್ಪಸಂಖ್ಯಾ ವಾಗಿರುವುದರಿಂದ, ಅದನ್ನು ಕರೆದು ಎದುರಿಸುವ ಧೈರ್ಯ ಅದಕ್ಕಿಲ್ಲ. ಕರೆಯದಿದ್ದ ರಾಜ್ಯಸಭೆಗೆ ಅಪಚಾರ ಮಾಡಿದಂತಾಗುವುದೆ ಎಂಬ ವಿಷಯದಲ್ಲಿ ಕಾನೂನು ಪಂಡಿತರ ಚಕಾರವೆತ್ತಿಲ್ಲ. ಸಭೆ ನಡೆದಿದ್ದರೆ, ಸಂಗ್ರಾಮ ರಹಸ್ಯಗಳು ಬಯಲಾಗಿ, ವಿರೋ ಗಳಿಗೆ ಅನುಕೂಲವೂ ನಮ್ಮ ಕಡೆಗೆ ಅನಾನುಕೂಲವೂ ಆಗುತ್ತಿತ್ತೆಂಬ ಸರ್ಕಾರ ಅಳುಕಿನಲ್ಲಿ ಸಾಕಷ್ಟು ಅರ್ಥವಿದೆ. ಅದೇನೇ ಇರಲಿ, ಬಾಹ್ಯ ತುರ್ತುಪರಿಸ್ಥಿತಿ ಘೋಷಣೆಯ ಆವಶ್ಯಕತೆ ಇಲ್ಲದಿರೋಣದರಿಂದ, ಯುದ್ಧ ಮೇರೆ ಮೀರಿ ಬಿಗಡಾ ಸಿಲ್ಲವೆಂಬುದೂ ಎಲ್ಲ ಪಕ್ಷಗಳೂ ಒಕ್ಕೊರಲಿನಿಂದ ಸೈನ್ಯಾಚರಣೆಯನ್ನು ಮೆಚ್ಚಿದಾ ರೆಂಬುದೂ ದೇಶದ ಮೂಲೆ ಮೂಲೆಗಳಿಂದ ಅನಾಹೂತವಾಗಿ ಸಂತ್ರಸ್ತ ಕ್ಷೇಮನಿಧಿ ಹಣದ ಪ್ರವಾಹ ಹರಿದು ಬರುತ್ತಿದೆಯೆಂಬುದೂ ಸಂತೋಷದ ವಿಷಯ.

ಕಾರ್ಗಿಲ್ ಯುದ್ಧ ಅಟಲ ಸರ್ಕಾರದ ಗಂಭೀರ ವೈಫಲ್ಯವೆಂದು ಕೆಲವು ಪತ್ರಿಕೆಗಳು ಘೋಷಿಸಿದ್ದುಂಟು. ಕೇವಲ ಪ್ರಾತಿನಿಧಿಕವಾಗಿ ೧೧-೭-೯೯ ನೆಯ ದಿನಾಂಕದ 'ಪ್ರಪಂಚ'ದಿಂದ ಕೆಲವು ಮಾತುಗಳನ್ನಿಲ್ಲಿ ಉದ್ಧರಿಸಲಾಗಿದೆ : ಪಾಕಿಸ್ತಾನದ ದುಷ್ಕರ್ಮಿಗಳ ವಿರುದ್ಧ ನಮ್ಮ ವೀರಯೋಧರು ಕಾರ್ಗಿಲ್ ಕದನಭೂಮಿಯಲ್ಲಿ ಕಲಿತನದಿಂದ ಕಾದುತ್ತಿದ್ದಾರೆ....ಅವರ ವೀರೋಚಿತ ಹೋರಾಟದ ಬಗೆಗೆ ತ್ಯಾಗ ಬಲಿದಾನಗಳ ಬಗೆಗೆ ಎರಡು ಅಭಿಪ್ರಾಯಗಳಿಲ್ಲ. ಆದರೆ ಸರ್ಕಾರವು ತೋರಿರುವ ನಿಷ್ಕಾಳಜಿಯ ಬಗೆಗೆ ಹೇಳುವುದು ಬಹಳಷ್ಟು ಇದೆ. ಪಾಕಿಸ್ತಾನದ ಅತಿಕ್ರಮಣಕಾರರು ನಿಯಂತ್ರಣ ರೇಖೆಯನ್ನು ದಾಟಿ, ಕಾಶ್ಮೀರದ ನೂರಾರು ಕಿಲೋಮೀಟರ್ ಪ್ರದೇಶದಲ್ಲಿ ಬಂದು, ಬಂಕರ್ ಕಟ್ಟಿಕೊಂಡು ತಳವೂರಿ ಕುಳಿತರೆನ್ನುವ ಬಗೆಗೆ ಸರಕಾರವು ಹೇಳುವುದೇನಿದೆ ?....ತನ್ನ ವಿರುದ್ಧ ಟೀಕೆ ಬರಬಾರದೆನ್ನುವ ಉದ್ದೇಶದಿಂದಲೇ ಅದು ರಾಜ್ಯಸಭೆಯನ್ನು ಸೇರಿಸಲು ಹಿಂದೇಟು ಹಾಕತೊಡಗಿದೆ.' ಇಂಥ ಅಭಿಪ್ರಾಯಗಳನ್ನು ಸರಕಾರ ಮಾನ್ಯ ಮಾಡಿದ್ದರೆ ಅದರ ಗೌರವ ಪ್ರತಿಷ್ಠೆಗಳು ಹೆಚ್ಚುತ್ತಿದ್ದುವು ಮಾತ್ರವಲ್ಲ, ಯುದ್ಧದ ಜವಾಬ್ದಾರಿಯಲ್ಲಿ ದೇಶವೂ ಪಾಲ್ಗೊಂಡತಾಗುತಿತ್ತು. ಇಲ್ಲಿ ಸರ್ಕಾರ ಮುಗ್ಗರಿಸಿದೆಯೆನ್ನಬಹುದಾದರೂ, ಎಲ್ಲ ಪಕ್ಷಗಳು ಸೇರಿಕೊಂಡಂತೆ ಇಡೀ ದೇಶ ಆಳುವ ಸರ್ಕಾರಕ್ಕೆ ಎಲ್ಲ ವಿಧದ ಬೆಂಬಲ ಸಹಕಾರ ನೀಡಬೇಕಾದ್ದು ಧರ್ಮ.

ಕಾರ್ಗಿಲ್ ಕಲಹಕ್ಕೆ ಕೊನೆಯುಂಟೆ ಎಂಬ ಪ್ರಶ್ನೆ ಅನೇಕ ಭಾರತೀಯರನ್ನು ಸಂದೇಹಕ್ಕೆಡೆ ಮಾಡಿದೆ. ಕಾಶ್ಮೀರದಿಂದ ಉಗ್ರವಾದಿಗಳನ್ನು ಸಂಪೂರ್ಣವಾಗಿ ಉಚ್ಚಾಟಿಸಲಾಗಿದೆಯೆಂದು ವಾಜಪೇಯಿಯವರನ್ನು ಹೊಗಳಿ ಅಟ್ಟಕ್ಕೇರಿಸಿದ ಮಂದಿ ಈಗ ಆತ್ಮವಿಮರ್ಶೆ ನಡೆಸಬೇಕಾದಂಥ ಭಯಾನಕ ಸುದ್ದಿ ಕಾಶ್ಮೀರ ಕಣಿವೆಯಿಂದ ಬರುತ್ತಿದೆ. ಕಾರ್ಗಿಲ್ ಯುದ್ಧ ಕೊನೆಗೊಂಡಿದೆಯೆಂದು ಜಂಭ ಕೊಚ್ಚಿಕೊಂಡ ಬಳಿಕವೂ ಭಾರತೀಯ ಜವಾನರು ನಿರಂತರ ಉಗ್ರಗಾಮಿಗಳ ದಾಳಿಗಳಿಗೆ ಬಲಿಯಾಗುತ್ತಿದ್ದಾರೆ....ಉಗ್ರವಾದಿಗಳೆನ್ನಲಾಗುವ ಈ ವಿಭಾಗವನ್ನು ಧರ್ಮಯೋಧರು-ಮುಜಾಹಿದರೆಂದು ಇದಿರು ಭಾಗವು ಪರಿಗಣಿಸುತ್ತಿದೆ. ಅದರಲ್ಲಿ ಕಾಶ್ಮೀರಿಗಳಿದ್ದಾರೆ, ಪಾಕಿಸ್ತಾನಿಗಳಿದ್ದಾರೆ, ಆಫ್ಘಾನಿಸ್ತಾನಿಗಳಿದ್ದಾರೆ, ಸುಡಾನಿಗಳಿದ್ದಾರೆ....ಅರಬ್ ರಾಷ್ಟ್ರೀಯರೂ ಇರುವ ಸಾಧ್ಯತೆಯಿದೆ.' ಎಂದು ಮಂಗಳೂರಿನ ೨೨/೨೮-೮-೯೯ ನೆಯ ದಿನಾಂಕದ (ಸಂಪುಟ ೨೨, ಸಂಚಿಕೆ ೨೧) ವಾರಪತ್ರಿಕೆ ಬರೆದಿದೆ. ಈ ಸಂಗತಿ ನಿಜವಾದರೆ, ಮುಂದೆ ಭೀಕರ ಪರಿಸ್ಥಿತಿ ಕಾದಿದೆಯೆಂದೇ ಹೇಳಬೇಕು. ಮುಜಾಹಿದರನ್ನು ಪಾಕಿ

ಸ್ತಾನ ಸರ್ಕಾರ ಅಂಕೆಯಲ್ಲಿಟ್ಟುಕೊಳ್ಳಲು ಸಾಧ್ಯವಾಗಲಾರದೆಂದೂ ಅಲ್ಲಿ ಅರಾಜಕತೆ ತಲೆದೋರಬಹುದೆಂದೂ ಸ್ಪಷ್ಟಪಡಿಸಬೇಕಾಗಿದೆ. ಈ ಬಗೆಗಿನ ಸತ್ಯಸಂಗತಿಗಳನ್ನು ಇಂಡಿಯಾ ಸರ್ಕಾರ ಜನತೆಯ ಗಮನಕ್ಕೆ ತರಬೇಕಾದ್ದು ಅತ್ಯಗತ್ಯ. ಇಂಥದೇ ಮುಜಾಹಿದರ ಗುಂಪು ಜಗತ್ತಿನ ಬೇರೆಡೆಗಳಲ್ಲಿ,ಇದೆ ತಾನೆ ರಷ್ಯಾದ ಉತ್ತರ ಕಾಕಾಸಸ್ ಪ್ರದೇಶದಲ್ಲಿ ಎಂಥ ದುಷ್ಕಾರ್ಯದಲ್ಲಿ ತೊಡಗಿದೆಯೆಂಬುದನ್ನು ಗಮನಿಸಿದಾಗ, ಜನತೆ ಯನ್ನು ಅಜ್ಞಾನದ ಅಂಧಕಾರದಲ್ಲಿರಿಸುವುದು ಒಳಿತಲ್ಲ.

ಪಾಕಿಸ್ತಾನದ ಬರ್ಬರರು ಅಮಾನುಷ ರೀತಿಯಲ್ಲಿ ಆರು ಮಂದಿ ಭಾರತೀಯ ಸೈನಿಕರ ಅಂಗಾಂಗಗಳನ್ನು ಛಿದ್ರವಿಚ್ಛಿದ್ರಗೊಳಿಸಿದರೂ, ಸಾವಿರಾರು ಮಂದಿ ಸತ್ತರೂ ಗಾಯಗೊಂಡರೂ, ನಚಿಕೇತರಂಥ ಗಾಯಗೊಂಡ ಯೋಧರು ಮತ್ತೆ ಯುದ್ಧ ಭೂಮಿಗೆ ತೆರಳುವುದಾಗಿ ಮಾಡಿದ ಘೋಷಣೆ ನವಿರೇಳಿಸುವಂಥದು. ಅಮೆರಿಕಾ ಮೊದಲಾದ ರಾಷ್ಟ್ರಗಳು ಯುದ್ಧ ನಿಲ್ಲಿಸುವಂತೆ ಕರೆ ಕೊಟ್ಟರೂ, ಜುಲೈ ಹದಿನೇಳ ರೊಳಗಾಗಿ ಪಾಕಿಸ್ತಾನೀ ಸೈನ್ಯ ನಿರ್ಗಮಿಸಬೇಕೆಂದು ರಕ್ಷಣಾಮಂತ್ರಿ ಕರೆ ಕೊಟ್ಟರೂ ಪಾಕಿಸ್ತಾನಕ್ಕಿನ್ನೂ ವಿವೇಕ ಮೂಡಿಲ್ಲ. ೧೦-೮-೯೯ ರಂದು ಪಾಕಿಸ್ತಾನದ ಅಟ್ಲಾಂಟಿಕ್ ಬೇಹು ವಿಮಾನ ಗುಜರಾತಿನ ಕಛ್ ಪ್ರದೇಶದಲ್ಲಿ ಸುತ್ತಾಡುತ್ತಾ ವಾಯುಗಡಿಯನ್ನುಲ್ಲಂಘಿಸಿದಾಗ ಭಾರತೀಯ ಸೈನ್ಯ ಅದನ್ನು ಹೊಡೆದು ಉರುಳಿಸಿ ದ್ದುಂಟು. ಅದರೊಳಗಿನ ಸೇನಾ ಬೇಹುಗಾರರೆಲ್ಲರೂ ಸ್ವರ್ಗ ಸೇರಿದರು. ೧೯೯೧ ರಲ್ಲಾದ ಯಾವುದೋ ಒಪ್ಪಂದದಂತೆ, ಬೇಹುಗಾರಿಕೆ ವಿಮಾನವನ್ನು ಪೂರ್ವ ಸೂಚನೆಯಿಲ್ಲದೆಯೆ ಹೊಡೆಯಬಾರದಂತೆ. ಭಾರತೀಯ ವಿಮಾನಗಳು ಸುತ್ತುವರಿದು ಅದನ್ನು ಕೆಳಗಿಳಿಸಬೇಕಾಗಿತ್ತಂತೆ. ಭಾರತದ ವಾಯುಗಡಿಯನ್ನುಲ್ಲಂಘಿಸಿದ್ದು ಪಾಕಿ ಸ್ತಾನದ ತಪ್ಪಾದಗೂ ಆದನ್ನು ಹೊಡೆದುರುಳಿಸಿದ ಭಾರತೀಯ ಸೈನ್ಯ ದೊಡ್ಡ ತಪ್ಪು ಮಾಡಿದೆಯೆಂದು ಅಮೆರಿಕ ಆಪಾದಿಸುತ್ತಿದೆ. ಅಮೆರಿಕೆಯ ಪಕ್ಷಪಾತ ದೃಷ್ಟಿ ಇದ್ದದ್ದೇ. ನಿಷ್ಕಾರಣವಾಗಿ ಭಾರತಕ್ಕೆ ಸೈನ್ಯ ನುಗ್ಗಿಸಿದ್ದು ಪಾಕಿಸ್ತಾನದ ಮೊದಲ ತಪ್ಪಾದರೂ ಅದರಿಂದಾಗಿ ಭಾರತ ಅಪಾರ ಜನನಷ್ಟ ಆರ್ಥಿಕನಷ್ಟವನ್ನನುಭವಿಸಬೇಕಾದರೂ, ಭಾರತವನ್ನು ದೂಷಿಸುವ ಜನ ಕ್ರೂರಿಗಳೇ ಸರಿ.

ಭಾರತದಲ್ಲಿ ಏಕತೆ ಮೂಡಿ ಅಂತಸ್ಸತ್ವ ಅಧಿಕಗೊಂಡಾಗ ಮಾತ್ರ ಅದಕ್ಕೆ ಸರ್ವಮಾನ್ಯತೆ ದೊರಕೀತು ; ಇದೇ ಪರಿಸ್ಥಿತಿ ಮುಂದುವರಿದದ್ದಾದರೆ ಯಾರೂ ಈ ರಾಷ್ಟ್ರವನ್ನು ಲಕ್ಷಿಸುವುದಿಲ್ಲ. ಅಂಥ ಸಂದರ್ಭದಲ್ಲಿ ಕಾರ್ಗಿಲ್ ಹಗರಣ ಮತ್ತೆ ಮತ್ತೆ ಮರುಕಳಿಸುವುದಂತು ಖಂಡಿತ.

ಕೊನೆಯದಾಗಿ ಎರಡು ಮಾತು ಅತ್ಯವಶ್ಯ ಎನಿಸುತ್ತದೆ. ಅಟ್ಲಾಂಟಿಕ್ ವಿಮಾನ ವಿನಾಶದ ಪ್ರಯುಕ್ತ ಪಾಕಿಸ್ತಾನ ನಷ್ಟಭರ್ತಿಗಾಗಿ ಇಂಡಿಯಾದ ಮೇಲೆ ದಾವಾ ಹೂಡಿದರೆ ಆಶ್ಚರ್ಯವಾಗದು. ಅಂಥ ಪರಿಸ್ಥಿತಿಗೆ ಸರ್ಕಾರ ಅಣಿಯಾಗಬೇಕಾಗಿದೆ- ನಮ್ಮ ಸೈನ್ಯವನ್ನು ಆಧುನಿಕೋಪಕರಣಗಳಿಂದ ಸಜ್ಜುಗೊಳಿಸುವುದು, ಯುದ್ಧ ತಂತ್ರ ಯಂತ್ರ ಸಾಧನಗಳ ಬಗ್ಗೆ ನಿರಂತರವಾಗಿ ಸಂಶೋಧನೆ ನಡೆಯಲು ವ್ಯವಸ್ಥೆ ಮಾಡಬೇಕಾದ್ದು, ಸೈನ್ಯದ ಕೆಲವು ತುಕಡಿಗಳಿಗಾದರೂ ಪರ್ವತ ಯುದ್ಧದಲ್ಲಿ ತರಬೇತಿ ನೀಡಬೇಕಾದ್ದು, ಸೈನ್ಯ ಸದಾ ಸಜ್ಜಾಗಿರಬೇಕಾದ್ದು ನಾಡಿನ ಪ್ರಪ್ರಥಮ ಆಗತ್ಯವೆಂದು ಸರ್ಕಾರ ತಿಳಿಯಬೇಕಾಗಿದೆ. ಅಷ್ಟೇ ಅಲ್ಲ, ಸೈನ್ಯದ ವಿಷಯದಲ್ಲಿ ರಾಜಕೀಯ ನುಸುಳಬಾರದೆಂದೂ, ಸೈನಿಕರು ಜೀತದಾಳುಗಳಲ್ಲ, ದೇಶರಕ್ಷಕರು ಎಂಬುದನ್ನು ಗಮನಿಸಿ, ಅವರನ್ನು ಸದಾ ಹುರುಪಿನಲ್ಲಿಡಬೇಕೆಂಬುದನ್ನು ಒತ್ತಿ ಹೇಳಬೇಕಾಗಿದೆ. ನಿರಂತರ ಜಾಗರೂಕತೆ ಸ್ವಾತಂತ್ರ್ಯ ರಕ್ಷಣೆಗಾಗಿ ಸ್ವತಂತ್ರ ರಾಷ್ಟ್ರ ತೆರಬೇಕಾದ ಬೆಲೆಯೆಂಬುದನ್ನು ಸರ್ಕಾರ ನಾಯಕವರ್ಗ ಮತ್ತು ಪ್ರಜಾವರ್ಗ ಸದಾ ನೆನಪಿನಲ್ಲಿರಿಸಿಕೊಳ್ಳಬೇಕಾಗಿದೆ.

ದೇಜಗೌ

———

ನಿರಾಳ ಆಟಗಾರ—ಸಚಿನ್ ತೆಂಡುಲ್ಕರ್

ಗೋಪಾಲ ಆಶ್ರಿತ
೭-೫-೪೨, 'ರಮಾನಿಲಯ'
ಜವಾಹರನಗರ, ರಾಯಚೂರು-೫೮೪೧೦೧

೧೯೯೮ರ ನವೆಂಬರ್ ೧೩ರಂದು ಶಾರ್ಜಾದಲ್ಲಿ ಕೊಕಾಕೊಲಾ ಕಪ್‌ನ ಅಂತಿಮ ಪಂದ್ಯ ಭಾರತ ಮತ್ತು ಜಿಂಬಾಬ್ವೆ ಮಧ್ಯೆ ನಡೆದಿತ್ತು. ಸ್ಟಾರ್ ಟಿ.ವಿಯಲ್ಲಿ 'ಶಾಟ್‌ಗನ್ ಶೂಟ್ಸ್' ಟಾಕ್ ಶೋದಲ್ಲಿ ಭಾಗವಹಿಸಿದ್ದ ಶಾಲಾ ಮಕ್ಕಳು ಏಕ ಕಂಠದಿಂದ ಸಚಿನ್ ತೆಂಡುಲ್ಕರ್ ತಮ್ಮ ನೆಚ್ಚಿನ ಕ್ರಿಕೆಟ್ ಪಟು ಎಂದು ಘೋಷಿಸಿದರು. ಅವರ ಈ ಆಯ್ಕೆ ಅರ್ಥಪೂರ್ಣವಾಗಿತ್ತು. ದೂರದರ್ಶನದಲ್ಲಿ ನೇರ ಪ್ರಸಾರವಾಗುತ್ತಿದ್ದ ಶಾರ್ಜಾ ಪಂದ್ಯದಲ್ಲಿ ತೆಂಡುಲ್ಕರ್ ಒಬ್ಬನೇ ಜಿಂಬಾಬ್ವೆ ಆಟಗಾರರ ಎಸೆತದ ಪ್ರಯತ್ನವನ್ನು ನಿಷ್ಫಲಗೊಳಿಸುತ್ತಿದ್ದ. ಜಿಂಬಾಬ್ವೆ ತಂಡ ೧೯೬ ರನ್‌ಗಳಿಗೆ ತನ್ನ ಎಲ್ಲ ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ಅದಕ್ಕೆ ಪ್ರತಿಯಾಗಿ ಯಶಸ್ವಿ ಜೋಡಿಯೆನಿಸಿಕೊಂಡ ತೆಂಡುಲ್ಕರ್ ಮತ್ತು ಸೌರವ ಗಂಗೂಲಿ ಸರಾಗವಾಗಿ ಆ ಮೊತ್ತಗಳಿಸಿ ಭಾರತಕ್ಕೆ ೧೦ ವಿಕೆಟ್ಟುಗಳ ವಿಜಯ ತಂದುಕೊಟ್ಟಿತು.

ಅಂದು ತೆಂಡುಲ್ಕರ್ ದೆವ್ವ ಮೆಟ್ಟಿ
ಕೊಂಡವನಂತೆ ಆಡಿದನು. ಅವನು ಕೇವ
೯೨ ಎಸೆತಗಳನ್ನು ಎದುರಿಸಿ ೧೨೪ ರನ್
ಗಳಿಸಿದ್ದನು. ೬ ಸಿಕ್ಸರ್‌ಗಳು ಮತ್ತು ೧
ಬೌಂಡರಿಗಳನ್ನು ಅವನ ಬ್ಯಾಟ್ ಗಳಿಸಿತ್ತು
ಒಂದು ದಿನದ ಪಂದ್ಯಗಳಲ್ಲಿ ಅವನು ತನ
೨೧ ನೆಯ ಶತಕವನ್ನು ಕೇವಲ ೭೧ ಬಾಲ
ಗಳನ್ನೆದುರಿಸಿ ಬಾರಿಸಿದ್ದನು. ಮೈದಾನ
ಬೇರೆ ಬೇರೆ ಮೂಲೆಗಳಿಂದ ಚೆಂಡು ಎತ್ತಿ
ಕೊಡುವ ಬಾಲಕರ ಕೆಲಸದಂತಾಗಿತ್ತ
ಕ್ಷೇತ್ರರಕ್ಷರ ಪಾತ್ರ. ಕೆಲವೊ ವೆ
ಮೈದಾನದ ಹೊರಗಿನಿಂದಲೂ ಚೆಂಡನ
ತರಬೇಕಾಗುತ್ತಿತ್ತು. ತೆಂಡುಲ್ಕರ್ 'ಪಂ
ಪುರುಷ', 'ಸರಣಿ ಪುರುಷ' ನಾದನಲ್ಲದ
ಅತಿಹೆಚ್ಚು ಸಿಕ್ಸರ್ (೮)ಗಳನ್ನು ಹೊಡೆ
ಹಾಗೂ ಅತಿರಭಸದ ೫೦ ಓಟ (೨೪ ಎಸ
ಗಳಲ್ಲಿ) ಗಳಿಸಿದ್ದ ಆಟಗಾರನಿಗೆ ನೀ
ಲಾಗುವ ಪ್ರಶಸ್ತಿಗಳನ್ನೂ ಗೆದ
ಕೊಂಡನು.

ಮೂಲ: ೧೯೯೯ರ ಜನವರಿ ತಿಂಗಳ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಲೇಖನ.

ತೆಂಡುಲ್ಕರನ ಪಾಲಿಗೆ ೧೯೯೮ ಒಂದು ಮರೆಯಲಾಗದ ವರ್ಷ. ವಿಶ್ವದ ಶ್ರೇಷ್ಠ ಸ್ಪಿನ್ನರ್ ಎನಿಸಿದ ಶಾರ್ನ್‌ವಾರ್ನ್ ಎಂಬವನನ್ನು ಟೆಸ್ಟ್ ಮತ್ತು ಒಂದು ದಿನದ ಸರಣಿಯಲ್ಲಿ ಪಳಗಿಸಿದನಲ್ಲದೆ, ತೆಂಡುಲ್ಕರ್ ೩೩ ಒಂದು ದಿನದ ಆಟಗಳಲ್ಲಿ ಅದ್ಭುತ ೧೮೯೪ ಓಟಗಳನ್ನು ಗಳಿಸಿದನು. ಇದರಲ್ಲಿ ೯ ಶತಕಗಳು ಹಾಗೂ ೭ ಅರ್ಧ ಶತಕಗಳಿವೆ. ಪ್ರತಿ ೧೦೦ ಎಸೆತಕ್ಕೆ ೧೦೨.೧೦ ಸರಾಸರಿಯಂತೆ ಓಟಗಳಿಸಿದನು. ಅವನ ಈ ರನ್ ಪಿಪಾಸೆ ಎರಡು ವರ್ಷಗಳ ಹಿಂದೆ ೧೧೬೧ ರನ್ ಗಳಿಸಿ ಸ್ಥಾಪಿಸಿದ್ದ ಅವನ ದಾಖಲೆಯನ್ನೇ ಅಳಿಸಿಹಾಕಿತು.

ತೆಂಡುಲ್ಕರ್ ಕ್ರೀಸ್ ಮೇಲಿದ್ದಾಗ ಬ್ಯಾಟ್ ಮಾಡುವುದು ಬಹಳ ಸರಳವೆನಿಸುತ್ತದೆ. ಅತಿಶ್ರಮವಿಲ್ಲದೆ ಆಡುವಂಥ ವ್ಯಕ್ತಿಯಾಗಿ ಅವನು ಕಾಣುತ್ತಾನೆ. ಆದರೆ ತೆಂಡುಲ್ಕರನ ಈ ಸಾಧನೆಗಳ ಹಿಂದೆ ಸತತ ಅಭ್ಯಾಸ ಧೃಡನಿರ್ಧಾರಗಳಲ್ಲದೆ ಅವನಲ್ಲಿನ ಅದ್ಭುತ ಕೌಶಲ್ಯ ಅಡಗಿವೆ. ಅವನಲ್ಲಿನ ಮೇಧಾಶಕ್ತಿ ದೈವದತ್ತವಾಗಿ ಬಂದಿದೆಯಾದರೂ, ಇದು ಸರಳವಾಗಿಬರಲಿಲ್ಲ. ಮುಂಬಯಿಯ ಒಂದು ಮಧ್ಯಮವರ್ಗದ ಕುಟುಂಬದಲ್ಲಿ ಜನಿಸಿದ ತೆಂಡುಲ್ಕರನಿಗೆ ಎಳೆ ವಯಸ್ಸಿನಲ್ಲಿಯೇ ಕ್ರಿಕೆಟ್ ಹುಚ್ಚು ಹಿಡಿಯಿತು. ಅವನು ಅವಕಾಶ ಸಿಕ್ಕಾಗಲೆಲ್ಲ ಆಡಹತ್ತಿದನು. ಹೆಸರಾಂತ ಕ್ರಿಕೆಟ್ ತರಬೇತುದಾರ ರಮಾಕಾಂತ ಅಚರೇಕರ್ ಈ ಯುವಕನ ಪ್ರತಿಭೆಯನ್ನು ಗುರುತಿಸಿದರಲ್ಲದೆ ಅವನಿಗೆ ಆಡಲು ಹೆಚ್ಚೆಚ್ಚು ಅವಕಾಶ ಒದಗಿಸಿದರು. ಕೆಲವೊಮ್ಮೆ ಅವನು ಒಂದೇ ದಿನದಲ್ಲಿ ಎರಡೆರಡು ಪಂದ್ಯಗಳನಾಡುತ್ತಿದ್ದುದುಂಟು. ಆದರೂ ಅವನ ದಾಹ ಇಂಗುತ್ತಿರಲಿಲ್ಲ. ಶಾರದಾಶ್ರಮ ಇಂಗ್ಲಿಷ್ ಪ್ರೌಢಶಾಲೆಯ ಪರವಾಗಿ ಆಡಿದ ಒಂದು ಪಂದ್ಯದಲ್ಲಿ ತೆಂಡುಲ್ಕರ್ ಮತ್ತು ವಿನೋದ ಕಾಂಬ್ಳಿ ಜೋಡಿ (ಔಟಾಗದೆ) ೬೬೪ ರನ್‌ಗಳನ್ನು ಸೇರಿಸಿ ಒಂದು ದಾಖಲೆ ಸ್ಥಾಪಿಸಿತು.

ಬಲಾಢ್ಯ ಮುಂಬಯಿ ತಂಡದಲ್ಲಿ ಸೇರ್ಪಡೆಯಾಗುವುದು ಸಾಮಾನ್ಯ ವಿಷಯವಾಗಿರಲಿಲ್ಲ. ಆದರೆ ತೆಂಡುಲ್ಕರನಿಗೆ ಇದೊಂದು ಸಮಸ್ಯೆಯಾಗಲೇ ಇಲ್ಲ. ತನ್ನ ೧೫ನೆಯ ವಯಸ್ಸಿನಲ್ಲಿ ಅವನು ಮುಂಬಯಿ ತಂಡದ ಪರವಾಗಿ ಆಡಿದನು. ಇದಾಗಿ ಕೆಲವೇ ತಿಂಗಳುಗಳಲ್ಲಿ ೧೯೮೯ ರಲ್ಲಿ ಪಾಕಿಸ್ತಾನಕ್ಕೆ ತೆರಳಲಿದ್ದ ರಾಷ್ಟ್ರದ ತಂಡಕ್ಕೆ ಅವನನ್ನು ಆಯ್ಕೆ ಮಾಡಲಾಯಿತು. ಟೆಸ್ಟ್ ಕ್ರಿಕೆಟ್‌ನಲ್ಲಿ ತೆಂಡುಲ್ಕರ್‌ನ ಪಾದಾರ್ಪಣೆ ಅಷ್ಟು ಸರಳವಾಗಿರಲಿಲ್ಲ. ಬಿರುಸಿನ ಎಸೆತಕ್ಕೆ ಪ್ರಸಿದ್ಧನಾಗಿರುವ ವಾಸೀಮ್ ಅಕ್ರಮನ ಬೌನ್ಸರ್‌ನಿಂದ ಅವನಿಗೆ ಪೆಟ್ಟಾಯಿತು. ಆದರೆ ಈ ಎಳೆಯ ಭಾರತೀಯ ಇಷ್ಟರಿಂದ ಧೃತಿಗೆಡಲಿಲ್ಲ. ಅನಂತರದ ಪಂದ್ಯದಲ್ಲಿ ೫೯ ಓಟಗಳನ್ನು ಗಳಿಸಿದ. ಪ್ರಜ್ವಲಿಸುವ ಒಂದು ಹೊಸ ತಾರೆಯ ಜನನವಾಗಿತ್ತು.

ಅಂದಿನಿಂದ ತೆಂಡುಲ್ಕರ್ ಒಂದು ಸತತ ಯಶದ ದಂತಕಥೆಯಾಗಿದ್ದಾನೆ. ಆದರೆ ಆಗಾಗ ಮುಗ್ಗರಿಸಿದ್ದುಂಟು. ಡಿಸೆಂಬರ್ ೮೯ ರಲ್ಲಿ ಪಾಕಿಸ್ತಾನದ ವಿರುದ್ಧ ಗುಜರಾನವಾಲಾದಲ್ಲಿ ಅವನು ಆಡಿದ ಮೊದಲನೆಯ ಅಂತರರಾಷ್ಟ್ರೀಯ ಒಂದು ದಿನದ ಪಂದ್ಯದಲ್ಲಿ ಅವನು ಸೊನ್ನೆಗೆ ಔಟಾದನು. ಮಾರ್ಚ್ ೧೯೯೦ ರಲ್ಲಿ ನ್ಯೂಜಿಲೆಂಡ್

ವಿರುದ್ಧ ಡ್ಯುನೆಡಿನ್ನಲ್ಲಿ (ಅವನಾಡಿದ ಎರಡನೆಯ ಪಂದ್ಯ) ಒಂದು ದಿನದ ಪದ್ಯದಲ್ಲಿ ಕೂಡಾ ಇದು ಮರುಕಳಿಸಿತು. ಆದರೆ ಇಂದು ಕೇವಲ ೨೫ ವರ್ಷದ ವಯಸ್ಸಿನ ತೆಂಡುಲ್ಕರ್ ೨೦೭ ಒಂದು ದಿನದ ಅಂತರ ರಾಷ್ಟ್ರೀಯ ಪಂದ್ಯಗಳಲ್ಲಿ ೨೧ ಶತಕಗಳನ್ನು ಬಾರಿಸಿ ೭೭೨೮ ಓಟಗಳನ್ನು ಗಳಿಸಿರುವನು. ಭಾರತದ ಈ ಕ್ರೀಡಾಕಲಿಯ ಶತಕಗಳ ಮೊತ್ತ ೬೦ಕ್ಕೆ ತಲುಪಿದರೆ ಆಶ್ಚರ್ಯ ಪಡಬೇಕಾಗಿಲ್ಲವೆಂದು ಹೆಸರಾಂತ ಕ್ರಿಕೆಟ್ ವೀಕ್ಷಕ ರಿಚಿಬೆನೋ ಅಭಿಪ್ರಾಯ ಪಟ್ಟಿದ್ದಾನೆ. ಟೆಸ್ಟ್ ಪಂದ್ಯಗಳಲ್ಲಿ ಕೂಡಾ ಇವನ ದಾಖಲೆ ಸಾಕಷ್ಟು ಪ್ರಭಾವಪೂರ್ಣವಾಗಿದೆ—೬೨ ಪಂದ್ಯ (೧೬ ಶತಕಗಳು) ಗಳಲ್ಲಿ ೪೫೫೩ ಓಟಗಳನ್ನು ಗಳಿಸಿದ್ದು, ೫೪.೦೩ ಸರಾಸರಿಯಾಗಿದೆ.

ಕ್ರೀಸ್‌ನಲ್ಲಿರುವಾಗ ಅವನನ್ನು ಗಮನಿಸಬೇಕು. ಅವನ ತಂತ್ರ ಸಾಕಷ್ಟು ಪರಿಪೂರ್ಣವಾಗಿರುತ್ತದೆ. ಸ್ವಲ್ಪ ಕುಳ್ಳ ಎನಿಸಿದರೂ ಅವನ ತೋಳು ಮತ್ತು ಮುಂಗೈಗಳು ಸಾಕಷ್ಟು ಶಕ್ತಿಯುತವಾಗಿವೆ. ಅವನು ತಳ್ಳಿದ ಚೆಂಡುಕೂಡಾ ರಭಸದಿಂದ ಸೀಮಾರೇಖೆಯೆಡೆಗೆ ಸಾಗುತ್ತದೆ. ಕ್ರಿಕೆಟ್ ಪುಸ್ತಕದಲ್ಲಿನ ಎಲ್ಲ ಹೊಡೆತಗಳನ್ನು ಅವನು ಆಡಬಲ್ಲ. ಒಂದು ದಿನದ ಆಟಗಳಲ್ಲಿ ಪುಸ್ತಕದಲ್ಲಿರದ ಕೆಲವು ಹೊಡೆತಗಳನ್ನೂ ಅವನು ಬಾರಿಸಬಲ್ಲ. ೧೯೯೦ರ ದಶಕದಲ್ಲಿ, ಒಂದು ದಿನದ ಆಟಗಳಲ್ಲಿ ಬಹಳ ಚಮತ್ಕಾರಿಕ ಬದಲಾವಣೆಗಳಾಗಿವೆ.

ಮೊದಲಿನ ೧೫ ಓವರಗಳಲ್ಲಿ ಕ್ಷೇತ್ರ ರಕ್ಷಣೆಯಲ್ಲಿನ ಕೆಲವು ಕಟ್ಟು, ಪಾಡುಗಳಲ್ಲಿ ಬೌಲರ್‌ಗಳು ಚೆಂಡೆಸೆಯಬೇಕಾಗುತ್ತದೆ. ಈ ಅವಕಾಶಗಳನ್ನು ಬಳಸಿಕೊಂಡು ಬ್ಯಾಟ್ಸ್‌ಮನ್ನಗಳು ಬಹಳ ತೀವ್ರಗತಿಯಲ್ಲಿ ಓಟಗಳನ್ನು ತೆಗೆಯುತ್ತಾರೆ. ಶ್ರೀಲಂಕಾದ ಉತ್ಸಾಹೀ ಪ್ರಾರಂಭದ ಜೋಡಿಯಾದ ಸನೆತ್ ಜಯಸೂರ್ಯ ಮತ್ತು ರಮೇಶ ಕಲುವಿತರಣ ಎಲ್ಲ ತೆರನಾದ ಚೆಂಡೆಸೆತಗಳನ್ನು ಜಜ್ಜಿ ಎಷ್ಟೋಸಲ ಮೊದಲಿನ ೧೫ ಓವರ್‌ಗಳಲ್ಲಿ ೭೫ ರಿಂದ ೧೦೦ ಓಟಗಳನ್ನು ಗಳಿಸಿದ್ದಾರೆ. ಭಾರತೀಯ ಚಿಂತನ ಚಿಲುಮೆ ಸಚಿನ್ ತೆಂಡುಲ್ಕರನನ್ನು ಪ್ರಾರಂಭದಾಟಗಾರನೆಂದು ಬಡ್ತಿ ನೀಡುವ ಕಠಿಣನಿರ್ಣಯ ತೆಗೆದುಕೊಂಡಿತು. ಅದರಂತೆ ೧೯೯೪ರ ಮಾರ್ಚ್‌ನಲ್ಲಿ ಆಕ್‌ಲ್ಯಾಂಡಿನಲ್ಲಿ ನ್ಯೂಜಿಲ್ಯಾಂಡ್ ವಿರುದ್ಧ ಪ್ರಾರಂಭದಾಟಗಾರನಾಗಿ ಆಡಲು ಪ್ರಾರಂಭಿಸಿದನು. ಎಳೆಯ ಸಚಿನ್ ಈ ಸವಾಲನ್ನು ಹರ್ಷದಿಂದ ಸ್ವೀಕರಿಸಿದನೆನ್ನುವಂತೆ ೪೯ ಚೆಂಡುಗಳನ್ನೆದುರಿಸಿ ೮೨ ಓಟಗಳನ್ನು ಗಳಿಸಿದನು. ಅಂದಿನಿಂದ ಅವನು ನಮ್ಮ ಪ್ರಮುಖ ಪ್ರಾರಂಭದಾಟಗಾರನಾಗಿದ್ದಾನೆ.

ಮೊದಲಿನಿಂದಲೂ ಭಾರತದ ಬ್ಯಾಟ್ಸ್‌ಮನ್ನರು ಸಪ್ಪೆಪ್ರಾಣಿಗಳೆಂದು ಪ್ರಸಿದ್ಧರು. ಆದರೆ ತೆಂಡುಲ್ಕರ್ ಮತ್ತು ಅಜರುದ್ದೀನರ ಆಗಮನ ಈ ಆರೋಪವನ್ನು ಅಳಿಸಿಹಾಕಿದೆ. ಎಲ್ಲ ಮಹಾನ್ ಆಟಗಾರರಂತೆ ತೆಂಡುಲ್ಕರ್ ರನ್ನುಗಳನ್ನು ಗಳಿಸುವದಲ್ಲದೆ, ಎದುರಾಳಿ ಬೌಲರಗಳ ಬೆವರಿಳಿಸಿ ಅವರು ಶರಣಾಗತರಾಗುವಂತೆ ಮಾಡಬಲ್ಲವನಾಗಿದ್ದಾನೆ. ಶಾರ್ಜಾದಲ್ಲಿ ನಡೆದ ಕೊಕಾ-ಕೊಲಾ ಕಪ್ ಸರಣಿಯ ಮೊದಲ ಸುತ್ತಿನ ಪಂದ್ಯದಲ್ಲಿ ಜಿಂಬಾಬ್ವೆಯ ಹೆನ್ರಿಒಲೊಂಗಾ ತನ್ನ ಬಿರುಸಿನ ಎಸೆತದಿಂದ ತೆಂಡುಲ್ಕರನನ್ನು ಪೇಚಿಗೀಡುಮಾಡಿ,ಅವನು ವಿಕೆಟ್‌ಕೀಪರ್

ನಿಗೆ ಕ್ಯಾಚಿತ್ತು ೧೧ ರನ್ನುಗಳಿಗೆ ಔಟಾಗುವಂತೆ ಮಾಡಿದ್ದನು. ಅಂತಿಮ ಪಂದ್ಯ ಬಂತು. ಒಲೊಂಗಾನ ಕೈಯಿಂದ ಬಂದ ಎಸೆತಗಳನ್ನು ಥಳಿಸಿ ಕ್ರೀಡಾಂಗಣದ ಎಲ್ಲ ದಿಕ್ಕುಗಳಿಗೆ ಕಳಿಸಿದನು. ಒಲಾಂಗಾ ತನ್ನ ಎರಡನೆಯ ಓವರಿನಲ್ಲಿ ೧೨ ರನ್ನುಗಳನ್ನು, ನಾಲ್ಕನೆಯ ಓವರಿನಲ್ಲಿ ೧೬ ರನ್ನುಗಳನ್ನು ಕೊಟ್ಟನು. ಅವನು ಎಸೆದ ಮೊದಲನೆಯ ನಾಲ್ಕು ಓವರುಗಳಲ್ಲಿ ೪೧ ರನ್ನುಗಳನ್ನಿತ್ತನಲ್ಲದೆ ಅಂದು ಅವನು ಎಸೆದ ೬ ಓವರ್‌ಗಳಲ್ಲಿ ಒಂದು ವಿಕೆಟ್ಟನ್ನೂ ಪಡೆಯದೆ ೫೦ ರನ್ನುಗಳನ್ನಿತ್ತಿದ್ದನು. ತೆಂಡುಲ್ಕರ್ ಮುಯ್ಯಿ ತೀರಿಸಿದ್ದನು. ಪಂದ್ಯದ ನಂತರ ಪತ್ರಕರ್ತರ ಜೊತೆ ಮಾತಾಡುತ್ತ "ಒಲಾಂಗಾ ಒಬ್ಬ ಅಂತರ ರಾಷ್ಟ್ರೀಯ ಮಟ್ಟದ ಬೌಲರ್. ಅವನ ಪಾಲಿನ ಒಳ್ಳೆಯ ದಿನದಂದು ಅವನು ನನ್ನನ್ನು ಔಟ್ ಮಾಡಬಹುದು. ಆದರೆ ನನ್ನ ಪಾಲಿನ ಒಳ್ಳೆಯ ದಿನದಂದು ನಾನು ಮುಯ್ಯಿ ತೀರಿಸಬಲ್ಲೆ" ಎಂದು ಹೇಳಿದನು. ಈ ದಾಳಿಯಲ್ಲಿ ವ್ಯಕ್ತಿಗತ ವೈಷಮ್ಯವಿರಲಿಲ್ಲ !

ಕ್ರಿಕೆಟ್ಟಿನ ಆಟದ ಹೆಚ್ಚಿನ ಭಾಗವೆಲ್ಲ ನಡೆಯುವುದು ಮನಸ್ಸಿನಲ್ಲಿ. ಒಬ್ಬ ಆಟಗಾರನ ಆತ್ಮವಿಶ್ವಾಸದ ವೈಖರಿಯನ್ನು ಪ್ರದರ್ಶನದಲ್ಲಿ ಕಾಣಬಹುದು. ಸರ್ ಡೊನಾಲ್ ಬ್ರಾಡಮನ್ನನಿಗೆ ತಾನು ವಿಶ್ವದ ಶ್ರೇಷ್ಠ ಬ್ಯಾಟ್ಸಮನ್ ಆಗುವ ಯೋಗ್ಯತೆ ಇದೆ ಎಂಬುದರ ಬಗ್ಗೆ ಗಾಢ ವಿಶ್ವಾಸವಿತ್ತು. ಎಂತಲೇ ಹೊಸ ಆಟಗಾರರಲ್ಲಿ ತೆಂಡಲ್ಕರನ ಆಟದ ವೈಖರಿಯಲ್ಲಿ ತಾನು ಯೌವನದಲ್ಲಿ ಆಡಿದ್ದ ತನ್ನ ವೈಖರಿ ನೆನಪಿಗೆ ತರುತ್ತಿತ್ತೆಂದು ಹೇಳಿದ್ದು ಈ ಯುವಕನ ಆಟಕ್ಕೆ ದೊರೆತ ಮನ್ನಣೆ. ಡಾನನ ೯೦ ನೇ ಹುಟ್ಟುಹಬ್ಬದ ಸಮಾರಂಭಕ್ಕೆ ತೆಂಡುಲ್ಕರನನ್ನು ವಿಶೇಷ ಆಹ್ವಾನಿತನನ್ನಾಗಿ ಬರಮಾಡಿಕೊಳ್ಳಲಾಯಿತು. ಈ ವಿಶೇಷ ಸ್ಥೈರ್ಯವಿರುವುದರಿಂದಲೇ ೧೯೯೩ ರಲ್ಲಿ ಕಲ್ಕತ್ತಾದಲ್ಲಿ ನಡೆದ ಹೀರೊಕಪ್ ಸೆಮಿಫೈನಲ್ ಉಪಾಂತ್ಯ ಪಂದ್ಯದ ಕೊನೆಯ ಓವರಿನ ಚೆಂಡೆಸೆತಕ್ಕೆ ಮುಂದಾದನು. ತಾನೊಬ್ಬ ನಿಯಮಿತ ಬೌಲರನಲ್ಲವೆಂಬುದು ತೆಂಡಲ್ಕರನಿಗೂ ಗೊತ್ತಿತ್ತು. ಆದರೂ ಅವನು ಅಂದು ಕೊನೆಯ ಓವರಿನಲ್ಲಿ ಕೇವಲ ೩ ರನ್ನುಗಳನ್ನಿತ್ತು ದ. ಆಫ್ರಿಕಾದ ತಂಡಕ್ಕೆ ಗೆಲ್ಲಲು ಅವಶ್ಯವಿದ್ದ ೬ ರನ್ನುಗಳು ದೊರೆಯದಂತೆ ತಡೆದನು. ಇದರಿಂದಾಗಿ ಭಾರತ ೩ ರನ್ನುಗಳ ಅಂತರದಿಂದ ಗೆದ್ದಿತು. ಆಗ ಅವನ ವಯಸ್ಸು ಕೇವಲ ೨೧ !

ಚೆಂಡೆಸೆತದಲ್ಲಿ ಕೂಡಾ ತೆಂಡುಲ್ಕರ್ ಯಶಸ್ವಿಯಾಗಿಸಿಕೊಳ್ಳಲು ಕಾರಣ ಅವನು ಬ್ಯಾಟ್ಸಮನ್ನರನ್ನು ಔಟ್ ಮಾಡಬೇಕೆಂದು 'ಯೋಚಿಸುವುದು ಮತ್ತು ಅದರಂತೆ ಬ್ಯಾಟ್ಸ್‌ಮನ್ನರಿಗೆ ಅನಿರೀಕ್ಷಿತವಾಗಿ ಲೆಗ್ ಬ್ರೇಕ್ ಮತ್ತು ಅಫ್ ಬ್ರೆಕ್‌ಗಳನ್ನು ಆಗಾಗ ಬೌನ್ಸರ್‌ಗಳನ್ನು ಎಸೆಯುವುದು ?

ಇಂದು ಈ ಪುಟ್ಟ ಭಾರತೀಯ ಕ್ರಿಕೆಟ್ ವಿಶ್ವದ ಚಕ್ರಾಧಿಪತಿ. ಆಟದ ಮಹಾ ಪಂಡಿತರು ಮತ್ತು ಅವನ ಸಮಕಾಲೀನರು ಈ ಕ್ಷೇತ್ರದಲ್ಲಿ ಅವನೇ ಶ್ರೇಷ್ಠನೆಂಬುದನ್ನು ಒಪ್ಪಿದ್ದಾರೆ. "ಸಚಿನ್ ಸರ್ವಶ್ರೇಷ್ಠ, ಹೋಲಿಸಲಿಕ್ಕೆ ಇನ್ನೊಂದು ಹೆಸರಿಲ್ಲ." ಎಂದು ಶ್ರೀಲಂಕಾದ ಹೆಸರಾಂತ ಬ್ಯಾಟ್ಸಮನ್ ಸನತ್ ಜಯಸೂರ್ಯ ಹೇಳಿದ್ದಾನೆ. ಇತ್ತೀಚಿನವರೆಗೆ 'ಶ್ರೇಷ್ಠತೆ'ಯ ಪಟ್ಟಕ್ಕೆ

ನಿಕಟ ಸ್ಪರ್ಧಿಯಾಗಿದ್ದ ವೆಸ್ಟ್ ಇಂಡಿಯನ್ಸ್ ನಾಯಕ ಬ್ರಿಯಾನ್ ಲಾರಾ "ನಾವೆಲ್ಲ ಹುಲು ಮಾನವರು....ಆದರೆ ಸಚಿನ್ ಮಾತ್ರ ವಿಶಿಷ್ಟ ಎಂದು ಹೇಳಿದ್ದಾನೆ. ದ.ಆಫ್ರಿಕಾದ ಮಾಜಿ ಮಹಾನ್ ಆಟಗಾರ ಬ್ಯಾರಿರಿಚರ್ಡ್ಸ್ "ನನ್ನ ಪಟ್ಟಿಯಲ್ಲಿ ಸಚಿನ್ ಮೊದಲನೆಯ ಹೆಸರು. ಇಂದು ಬೌಲರ್‌ಗಳನ್ನು ಪಳಗಿಸುವುದು ಇತರರಿಗೆ ಆಗುತ್ತಿಲ್ಲ....ಅವನು ಆಡುವುದು ಮನರಂಜನೆಗಾಗಿ, ನನ್ನ ದೃಷ್ಟಿಯಲ್ಲಿ ಇದೇ ಅತ್ಯುತ್ತಮ ಅಂಶ. ಅವನ ಬುದ್ಧಿ ಪರಿಪಕ್ವವಾಗಿದ್ದು ಎಂಥ ಒತ್ತಡದ ಪರಿಸ್ಥಿತಿಯಲ್ಲೂ ಅವನು ಹೊಂದಿಕೊಳ್ಳಬಲ್ಲವನಾಗಿದ್ದಾನೆ" ಎಂದು ಅಭಿಪ್ರಾಯ ಪಟ್ಟಿದ್ದಾನೆ. ಯಾವುದನ್ನೂ ಸಾಮಾನ್ಯವಾಗಿ ಒಪ್ಪದ ಆಸ್ಟ್ರೇಲಿಯಾದ ಮಾಜಿ ನಾಯಕ ಇಯಾನ್ ಚಾಪೆಲ್ ಕೂಡಾ, ಆಸ್ಟ್ರೇಲಿಯಾದ ಬೌಲರ್‌ಗಳ ತೇಜೋವಧೆ ಸಚಿನ್‌ಗಿಂತ ಬೇರಾರೂ ಮಾಡಲಸಾಧ್ಯವೆಂಬುದು ಖಚಿತವಾಯಿತೆಂದಿದ್ದಾರೆ. ಅಂತರ ರಾಷ್ಟ್ರೀಯ 'ಕ್ರಿಕೆಟ್‌ನಲ್ಲಿ ೩೧ ಪಂದ್ಯ ಶ್ರೇಷ್ಠ ಪ್ರಶಸ್ತಿ ಪಡೆದು ದಾಖಲೆ ಸ್ಥಾಪಿಸಿದ್ದ ವೆಸ್ಟ್ ಇಂಡೀಸಿನ ಮಹಾನ್ ಆಟಗಾರ ವಿವಿಯನ್ ರಿಚರ್ಡ್ಸ್ ಕೂಡಾ ಈ ಭಾರತೀಯನನ್ನು ಶ್ರೇಷ್ಠನೆಂದು ಕರೆದಿದ್ದಾನೆ. ರಿಚರ್ಡ್ಸ್‌ರ ದಾಖಲೆಯನ್ನು ತೆಂಡುಲ್ಕರ್ ಇತ್ತೀಚೆಗೆ ಮುರಿದು ಹೊಸ ದಾಖಲೆ ಸ್ಥಾಪಿಸಿರುವನು. ಹೆಸರಾಂತ ನಿಯತ್ಕಾಲಿಕ 'ವಿಸ್ಡನ್' ನಲ್ಲಿ ಓದುಗರು ಆಯ್ಕೆಮಾಡಿದ ವಿಶ್ವ ತಂಡದಲ್ಲಿ ಈ ಏಕೈಕ ಭಾರತೀಯನ ಹೆಸರು ಸೇರಿದೆ.

ಇಂಥ ಕ್ರಿಕೆಟ್ ಪ್ರತಿಭೆ ಮತ್ತು ವಿವೇಚನೆ ಇರುವ ಸಚಿನ್ ತೆಂಡುಲ್ಕರ್ ಭಾರತದ ತಂಡಕ್ಕೆ ನಾಯಕನಾಗಬೇಕಿತ್ತು. ಆದರೆ ಈ ಗೌರವ ಸಂದಿದಾಗ, ಆಶೋತ್ತರಗಳು ಪೂರೈಸಲಿಲ್ಲ. ಬಹುಶಃ ನಾಯಕತ್ವ ಬಂದಾಗ ಅವನು ಬಹಳ ಸಣ್ಣ ವಯಸ್ಸಿನವನಾಗಿದ್ದಿರಬೇಕು. ೫೪ ಒಂದು ದಿನದ ಪಂದ್ಯಗಳಲ್ಲಿ ನಮ್ಮ ತಂಡ ಕೇವಲ ೧೭ ರಲ್ಲಿ ಗೆಲುವು, ೩೧ ರಲ್ಲಿ ಸೋಲು ಅನುಭವಿಸಿತು. ಅವನ ನಾಯಕತ್ವದಲ್ಲಿ ಆಡಿದ ೧೭ ಟೆಸ್ಟ್ ಪಂದ್ಯಗಳಲ್ಲಿ ೩ ರಲ್ಲಿ ಗೆಲುವು, ೪ ರಲ್ಲಿ ಸೋಲು, ಉಳಿದ ೧೦ ರಲ್ಲಿ ಡ್ರಾದಲ್ಲಿ ಕೊನೆಗೊಂಡವು. ಆದರೆ ತೆಂಡುಲ್ಕರ್ ಇದರಿಂದ ವಿಚಲಿತನಾಗಲಿಲ್ಲ. ಈ ನಾಯಕತ್ವ ತನಗೆ ಆನಂದ ತಂದಿತು. ಆದರೆ ಬಹಳಷ್ಟು ಸಲ ದೈವ ತನಗೆ ಸಹಾಯ ಮಾಡಲಿಲ್ಲವೆಂದು ಹೇಳಿದನು. ನಾಯಕನಾಗಿದ್ದಾಗಲು ಅವನು ಚೆನ್ನಾಗಿಯೇ ಆಡಿ ಓಟಗಳನ್ನು ಗಳಿಸಿದ್ದುಂಟು. ಅಜರುದ್ದೀನ್ ಮತ್ತೆ ನಾಯಕನಾದಾಗ ಅವನು ನಿಷ್ಕ್ರಿಯನಾಗಲಿಲ್ಲ. ಅಜರುದ್ದೀನ್ ತನ್ನ ೩೦೦ ನೆಯ ಒಂದು ದಿನದ ಅಂತರ ರಾಷ್ಟ್ರೀಯ ಪಂದ್ಯವಾಡಿದ ಸಮಯದಲ್ಲಿ ತೆಂಡುಲ್ಕರ್ ಒಂದು ಶತಕ ಬಾರಿಸಿ ಆ ಶತಕವನ್ನು ತನ್ನ ನಾಯಕನಿಗೆ ಅರ್ಪಿಸಿದನು! ಭಾರತದಲ್ಲಿ ಚಿಕ್ಕವರು ದೊಡ್ಡವರೆಲ್ಲರೂ ಸಚಿನ್ ತೆಂಡುಲ್ಕರನನ್ನು ಮೆಚ್ಚುತ್ತಾರೆ. ಸಚಿನ ತೆಂಡುಲ್ಕರ್ ಈ ಆಟದ ಸರ್ವಶ್ರೇಷ್ಠ ಬ್ಯಾಟ್ಸ್‌ಮನ್!

ಬೇರೆ ಬೇರೆ ಯುಗದ ಆಟಗಾರರ ಜೊತೆ ಹೋಲಿಸುವುದು ಯಾವಾಗಲೂ ಕಠಿಣ. ಸರ್ ಡೊನಾಲ್ಡ್ ಬ್ರಾಡಮನ್ ಆಡಿದ್ದು ಕೇವಲ ಬಲಾಢ್ಯ ಎದುರು ತಂಡ

ಗಳಾಗಿದ್ದ ಇಂಗ್ಲೆಂಡ್, ದ. ಆಫ್ರಿಕಾ ವೆಸ್ಟ್‌ಇಂಡೀಸ್ ಮತ್ತು ಭಾರತ (ಒಂದು ಸಲ ಮಾತ್ರ) ಆದರೂ ಅವನು ಪ್ರತಿ ೩ ಇನ್ನಿಂಗ್ಸಿಗೆ ಒಂದರಂತೆ ಶತಕ ಬಾರಿಸಿದನು. ಇದು ಅಸಾಧಾರಣ ತನ್ಮಯತೆ: ಸರ್ ಗಾರಫೀಲ್ಡ್ ಸೋಬರ್ಸ್ ಈ ಆಟದಲ್ಲಿನ ಸರ್ವಶ್ರೇಷ್ಠ ಆಲ್‌ರೌಂಡರ್ ಎಂಬುದರ ಬಗ್ಗೆ ಎರಡು ಅಭಿಪ್ರಾಯವಿಲ್ಲ. ಆತನ ದಾಖಲೆಗಳು (೮೦೦ ಕ್ಕಿಂತಲೂ ಹೆಚ್ಚು ರನ್ನುಗಳು ೨೫೦ ವಿಕೆಟ್ಟುಗಳು ೧೦೦ ಕ್ಕಿಂತಲೂ ಹೆಚ್ಚು ಕ್ಯಾಚುಗಳು) ದಿಗ್ಭ್ರಮೆಗೊಳಿಸುವಂಥವು.

ತೆಂಡುಲ್ಕರ್ ಈ ಶ್ರೇಷ್ಠರ ಪಂಕ್ತಿಗೆ ಸೇರಲು ಯೋಗ್ಯನಾಗಿದ್ದಾನೆ, ಅಲ್ಲದೆ ಈತ ಇನ್ನೂ ವಯಸ್ಸಿನಲ್ಲಿ ಚಿಕ್ಕವನಾಗಿರುವುದರಿಂದ, ಈ ಆಟದ ಎಲ್ಲ ದಾಖಲೆಗಳನ್ನು ಮುರಿಯಲು ಸಾಧ್ಯವಿದೆ. ಇಂದು ಈತ ಭಾರತೀಯ ಕ್ರಿಕೆಟ್ಟಿನ ಸರ್ವಶ್ರೇಷ್ಠ ಬ್ಯಾಟ್ಸ್‌ಮನ್. ವಿಜಯ್ ಮರ್ಚೆಂಟ್ ಮತ್ತು ಸುನಿಲ್ ಗವಾಸ್ಕರರಿಗೆ ಹೆಚ್ಚೆಚ್ಚು ರನ್ ಗಳಿಸಬೇಕೆಂಬ ದಾಹವಿರುತ್ತಿತ್ತು. ಅವರ ತಂತ್ರಗಳಲ್ಲಿ ದೋಷವೇ ಇರುತ್ತಿರಲಿಲ್ಲ. ಆದರೆ ತೆಂಡುಲ್ಕರ್ ತನ್ನ ಕೌಶಲ್ಯ ಮತ್ತು ಧೃಡತೆಯ ಮೂಲಕ ಬೌಲರ್‌ಗಳನ್ನು ಹತ್ತಿಕ್ಕಿ ತನ್ನ ಸಾಮರ್ಥ್ಯ ಪ್ರದರ್ಶಿಸುವಲ್ಲಿ ಮಾತ್ರ. ಆ ಹಳೆಯ ಹಿರಿಯರನ್ನು ಹಿಂದೆ ಹಾಕಿರುವನು. ಮರ್ಚೆಂಟ್ ಮತ್ತು ಗವಾಸ್ಕರರು ಗಳಿಸಿದ ಶತಕಗಳಿಂದ ಭಾರತದ ತಂಡ ವಿಜಯಿಯಾದದ್ದು ಕಡಿಮೆ. ಯಾಕೆಂದರೆ ಎಷ್ಟೋ ಸಲ ಶತಕಗಳನ್ನು ಬಹಳ ಮಂದಗತಿಯಲ್ಲಿ ಬಾರಿಸಲಾಗುತ್ತಿತ್ತು. ಆದರೆ ತೆಂಡುಲ್ಕರ್ ಎದುರಾಳಿಗಳು ತಮ್ಮ ಕೈಚಳಕ ತೋರಿಸುವ ಮೊದಲೇ, ತನ್ನ ಆಕ್ರಮಣಕಾರಿ ಹೊಡೆತಗಳಿಂದ ಅವರ ಉತ್ಸಾಹ ಕುಗ್ಗಿಸಿ ತಂಡ ಗೆಲ್ಲುವಂತೆ ಮಾಡುತ್ತಾನೆ. ಅವನು ಕ್ರೀಸ್‌ನಲ್ಲಿರುವರೆಗೆ, ಭಾರತೀಯರು ಸಪ್ಪೆ ಪ್ರಾಣಿ ಎಂಬ ಆರೋಪ ಅರ್ಥಹೀನವಾಗಿರುತ್ತದೆ. ಈ ಆಟದ ಪ್ರತಿಯೊಬ್ಬ ಹೆಸರಾಂತ ಬೌಲರನ ಎಸೆತಗಳನ್ನು ಅವನು ಅರ್ಥಮಾಡಿಕೊಂಡಿರುವನಲ್ಲದೆ, ಅವುಗಳನ್ನು ಹೇಗೆ ಧ್ವಂಸ ಮಾಡಬೇಕೆಂಬುದನ್ನು ಅವನು ಯೋಜಿಸಿಕೊಂಡಿರುವನು. ಈ ರೀತಿ ಯೋಚಿಸಿಕೊಂಡದ್ದು ಕೆಚ್ಚಿನಿಂದ ಆಡುವುದರಿಂದಲೇ ಅವನು, ೧೯೯೮ರಲ್ಲಿ ಆಸ್ಟ್ರೇಲಿಯ ತಂಡ ಭಾರತದ ಪ್ರವಾಸ ಕೈಗೊಂಡಾಗ, ಹೆಸರಾಂತ ಲೆಗ್‌ಸ್ಪಿನ್ನರ್ ಶಾನ್‌ವಾರ್ನನ ಮೇಲೆ ತನ್ನ ಪ್ರಭುತ್ವ ಸಾಧಿಸಿದ್ದು. ತನ್ನ ಚೆಂಡೆಸೆತಕ್ಕೆ ತೆಂಡುಲ್ಕರನಿಂದ ಸ್ವೀಕರಿಸಿದ್ದನ್ನು ಶಾನ್‌ವಾರ್ನ್ ಎಂದೂ ಮರೆಯಲಾರ. ತೆಂಡುಲ್ಕರನ ಯಶಸ್ವಿಗೆ ಅಡ್ಡದಾರಿಗಳಿರಲಿಲ್ಲವಾದ್ದರಿಂದ, ಯಶಸ್ಸು ಅವನ ತಲೆ ತಿರುಗಿಸಿಲ್ಲ. ತೆಂಡುಲ್ಕರ್ ಮುಂಬಯಿಯ ಉಪನಗರ ಪೂರ್ವ ಬಾಂದ್ರಾದಲ್ಲಿ ಸರಳ ಹಾಗೂ ಶಾಂತ ಜೀವನ ಸಾಗಿಸುತ್ತಿರವನು. ಇವನ ಹೆಂಡತಿ ಅಂಜಲಿ ಮತ್ತು ಪುಟ್ಟ ಮಗಳು ಸಾರಾ. ದೂರದರ್ಶನ ಪರದೆಯ ಮೇಲೆ ರೂಪದರ್ಶಿಯಾಗಿಯೂ ಮೆರೆಯುತ್ತಿದ್ದಾನೆ ಸಚಿನ್ ತೆಂಡುಲ್ಕರ್. ಇವನ ಈಗಿನ ಗತಿಯನ್ನು ಗಮನಿಸಿದರೆ ಮುಂದೊಂದು ದಿನ ಕ್ರಿಕೆಟ್ಟಿನ ಎಲ್ಲ ದಾಖಲೆ ಪುಸ್ತಕಗಳನ್ನು ಮತ್ತೆ ಬರೆಯಬೇಕಾಗಬಹುದು.

ಸ್ವಾತಂತ್ರ್ಯದ ಮೂರ್ತಿ

ಟಿ. ಎಸ್. ಲಲಿತ

೭೦೩, ಮೊದಲ ಮಹಡಿ, ೧೭ ನೇ ಮೇನ್
ಸರಸ್ವತೀಪುರ, ಮೈಸೂರು—೫೭೦೦೦೯

ಫ್ರಾನ್ಸ್‌ನ ಸಣ್ಣ ಹಳ್ಳಿಯೊಂದರಲ್ಲಿ ರೂಪುಗೊಂಡು, ಅಮೆರಿಕದ ನ್ಯೂಯಾರ್ಕ್ ಬಂದರಿನಲ್ಲಿ ಶತಮಾನಕ್ಕೂ ಹಿಂದೆ ಸ್ಥಾಪನೆಗೊಂಡ ವಿಗ್ರಹ 'ಸ್ಟಾಚ್ಯು ಆಫ್ ಲಿಬರ್ಟಿ' ಅಮೇರಿಕನ್ನರ ಸ್ವಾತಂತ್ರ್ಯದ ಪ್ರತೀಕ, ವಿಶ್ವದಾದ್ಯಂತ ಸ್ವಾತಂತ್ರ್ಯ ಇಚ್ಛಿಸುವವರ, ಲಕ್ಷಾಂತರ ಗಡಿಪಾರುಗೊಂಡವರ ತಾಯಿ ಎನಿಸಿತು. ತಾಮ್ರದ ಹಾಳೆ ಹಾಗೂ ಕಬ್ಬಿಣದ ತೊಲೆಗಳಿಂದ ಕಟ್ಟಲ್ಪಟ್ಟು, ರಕ್ಷಣೆ ಹಾಗೂ ಪ್ರೇರಣೆ ಬಯಸಿದವರು, ಆ ಪ್ರತಿಮೆಯಲ್ಲಿ ಆತ್ಮವಿದೆ ಎಂದು ಕಂಡುಕೊಂಡಿದ್ದಾರೆ.

ಒಂದು ಲಕ್ಷ ಫ್ರೆಂಚರು ಶ್ರಮಪಟ್ಟು ಗಳಿಸಿದ ಹಣವನ್ನು ಪ್ರತಿಮೆಯ ನಿರ್ಮಾಣಕ್ಕಾಗಿ ಕೊಟ್ಟರೆ, ಒಂದು ಲಕ್ಷದ ಇಪ್ಪತ್ತು ಸಾವಿರ ಅಮೆರಿಕನ್ನರು ಅದಕ್ಕೆ ತಕ್ಕ ಪೀಠ ಕಟ್ಟಲು ದಾನ ಕೊಟ್ಟಿದ್ದಾರೆ. ಲಕ್ಷಾಂತರ ವಲಸೆಗಾರರಿಗೆ, ಜ್ಯೋತಿ ಹಿಡಿದ ಪ್ರತಿಮೆಯ ಕೈನ ಸ್ವಾಗತ ಅವರ ಮಾನಸಿಕ ಸ್ಥೈರ್ಯವನ್ನು ಹೆಚ್ಚಿಸಿದೆ.

೧೮೬೫ರ ಒಂದು ಬೇಸಗೆಯ ಸಂಜೆ ಫ್ರಾನ್ಸಿನ ಪುಟ್ಟಹಳ್ಳಿ ಗ್ಲಾಟಿಗ್ನಿಯಲ್ಲಿ ಮೊದಲಬಾರಿಗೆ ಪ್ರತಿಮೆಯ ವಿಚಾರ ಮೂಡಿಬಂತು. ಕಾನೂನು ಪ್ರೊಫೆಸರ್ ಎಡೋರ್ಡ್ ರೆನಿ ಲೆಫೆಬ್ರಿಡಿ ಲೆಬೋಲೆ ಅಮೇರಿಕನ್ ಸಂವಿಧಾನದ ಅಧ್ಯಯ ಮಾಡುತ್ತಿದ್ದ. ಹೆಚ್ಚು ಹೆಚ್ಚು ಅದರ ಬಗ್ಗೆ ಅಭ್ಯಸಿಸಿದಂತೆ, ತನ್ನ ದೇಶದಲ್ಲೂ ಅದೆ ಬಗೆಯ ಪ್ರಜಾಪ್ರಭುತ್ವ ಸ್ಥಾಪಿಸು ಬಯಕೆ ಅವನಿಗೆ.

ರಾಷ್ಟ್ರಗಳ ನಡುವೆ ಕೃತಜ್ಞತೆಯ ಬ ಮಾತುಕತೆ ನಡೆಯಿತು. ಇತರ ಯೂರೋಪಿಯನ್ ದೇಶಗಳಿಗಿಂ ಅಮೇರಿಕಕ್ಕೆ ಫ್ರಾನ್ಸಿನ ಬಗ್ಗೆ ಹೆಚ ಆಸ್ಥೆ. ಅಮೇರಿಕ ಸದ್ಯದಲ್ಲೇ ತ ಕ್ರಾಂತಿಯ ಶತಮಾನೋತ್ಸವವ ಆಚರಿಸಲಿದೆ. ಆದ್ದರಿಂದ ಸ್ವಾತಂತ್ರ್ ನೆನಪಿನಲ್ಲಿ, ಅಮೇರಿಕಾದಲ್ಲಿ ನಮ್ಮೆರ ರಾಷ್ಟ್ರಗಳ ಸಹಕಾರದೊಂದಿಗೆ ಸ್ಮಾ ವೊಂದನ್ನು ಸ್ಥಾಪಿಸಿದರೆ ಅದು ಅರ್ಥವ ದೀತು ಎಂದ ಲೆಬೋಲೆ.

ಮೂಲ : ರೀಡರ್ಸ್ ಡೈಜೆಸ್ಟ್‌ನಿಂದ ಸಂಗ್ರಹ.

೧೮ ರ ಹರೆಯದ ಬಾರ್ತೋಲ್ಡಿ ಒಬ್ಬ ಶಿಲ್ಪಿ. ಫ್ರಾನ್ಸಿನಲ್ಲಿ ಅಲ್ಲೋಲ ಕಲ್ಲೋಲ ಪರಿಸ್ಥಿತಿ. ೧೮೭೦–೭೧ರ ಫ್ರಾಂಕೋ ಪ್ರಷ್ಯನ್ ಯುದ್ಧದಲ್ಲಿ ಸೋಲನುಭವಿಸಿದ ನೆಪೋಲಿಯನ್ ಗಡಿಪಾರಾಗಿದ್ದ. ಸರ್ಕಾರ ದುರ್ಬಲವಾಗಿತ್ತು. ಅಮೆರಿಕ ಸಂಯುಕ್ತ ಸಂಸ್ಥಾನದ ರೀತಿ ಪ್ರಜಾಪ್ರಭುತ್ವ ಸ್ಥಾಪಿಸುವುದು ಹೇಗೆಂದು ಫ್ರೆಂಚ್ ಜನತೆ ಯೋಚಿಸುತ್ತಿತ್ತು.

೧೮೭೧ ರಲ್ಲಿ ಲಬೋಲೆ ಹಾಗೂ ಬಾರ್ತೋಲ್ಡಿ ಮತ್ತೆ ಭೇಟಿಯಾದರು. ಅಮೇರಿಕಾದ ಶತಮಾನೋತ್ಸವಕ್ಕೆ ಇನ್ನು ಕೇವಲ ೫ ವರ್ಷಗಳಿವೆ. ಸ್ಮಾರಕ ಈಗ ಸ್ಥಾಪಿಸಿದಲ್ಲಿ ಅದು ಫ್ರೆಂಚ್ ಜನರಲ್ಲೂ ಪ್ರಜಾಪ್ರಭುತ್ವದ ಭಾವನೆಗಳನ್ನು ಆಳವಾಗಿಸುತ್ತದೆಯಲ್ಲವೆ? ವಿಗ್ರಹ ಸ್ಥಾಪಿಸಲು ಒಪ್ಪಿಗೆ ಸಿಕ್ಕಿತು. ಬಾರ್ತೋಲ್ಡಿ ತನ್ನ ಖರ್ಚಿನಲ್ಲೇ ಅಮೆರಿಕಕ್ಕೆ ಹೋಗಿ, ಅಮೆರಿಕನ್ನರಿಗೆ ವಿವರಿಸಿ, ಅವರು ಇದಕ್ಕೆ ಆರ್ಥಿಕ ಸಹಾಯಮಾಡಲು ಮನವೊಲಿಸಬೇಕೆಂದುಕೊಂಡ.

ಜೂನ್‌ನಲ್ಲಿ ಅಮೆರಿಕಕ್ಕೆ ಬಂದ ಬಾರ್ತೋಲ್ಡಿ, ಬಂದರಿನ ಅಧ್ಭುತ ಸ್ಥಿತಿ ಹಾಗೂ ಬಿರುಸಿನ ವ್ಯಾಪಾರದಿಂದ ಆಕರ್ಷಿತನಾದ. ಅವನ ಹಡಗು 'ಅಪ್ಪರ್ ಬೇಗೆ ಬಂದಾಗ ಒಂದು ದ್ವೀಪ ಕಂಡ. ಅಮೆರಿಕಕ್ಕೆ ಬರುವ ಎಲ್ಲ ಹಡಗುಗಳೂ ಆ ಮೂಲಕವೇ ಹೋಗಬೇಕು, ಸ್ಮಾರಕ ಸ್ಥಾಪಿಸಲು ಅತ್ಯುತ್ತಮ ತಾಣ, ಈ 'ಬೆಡ್‌ಲೋ' ದ್ವೀಪವೆಂದು ನಿರ್ಧರಿಸಿದ ಬಾರ್ತೋಲ್ಡಿ. ಸರ್ಕಾರಕ್ಕೆ ಸೇರಿದ ಈ ದ್ವೀಪ ಎಲ್ಲ ರಾಜ್ಯಗಳಿಗೂ ಸೇರಿದಂತೆ ಎಂದು ಬರೆದ.

ಕಂಡುದನ್ನು ಹಾಗೆಯೇ ಚಿತ್ರಿಸಿದ ಬಾರ್ತೋಲ್ಡಿ ಹಿನ್ನೆಲೆಯಲ್ಲಿ ಮನ್‌ಹಟ್ಟನ್‌ನ ಮಂಜು ಕವಿದ ವಾತಾವರಣ. ಹಡ್ಸನ್ ನದಿ, ಬ್ರೂಕ್ಲಿನ್ ಬ್ರಿಡ್ಜ್ ಬಂದರಿನ ನಡುವೆಯೇ ಸಾಕಾರವಾಗಬೇಕಿದ್ದ ಅದ್ಭುತ ಗಾತ್ರದ ಸ್ತ್ರೀ ಪ್ರತಿಮೆಯ ಕನಸು ಕಂಡ. ಇದುವರೆಗೂ ಕಟ್ಟಿದ್ದ ಎಲ್ಲ ಪ್ರತಿಮೆಗಳಿಗಿಂತ ಇದು ದೊಡ್ಡದಾಗಬೇಕಿತ್ತು.

ಇವನ ಮಡದಿ ಜೀನ್ ಎಮಿಲಿ ಬಾಅದಕ್ಕೆ ರೂಪದರ್ಶಿ ಎಂದು ಕೆಲವರೆಂದರೆ ಅವನ ತಾಯಿಯ ಹೋಲಿಕೆ ಅದರಲ್ಲಿ ಹೆಚ್ಚಿದೆ ಎನ್ನುತ್ತಾರೆ ಮತ್ತೆ ಕೆಲವರು. ಪ್ರತಿಮೆಯ ಎಡಗೈ ೪–೭–೧೭೭೬ರ ಸ್ವಾತಂತ್ರ್ಯ ಘೋಷಣೆಯ ಫಲಕ ಹಿಡಿದಿರಬೇಕು. ಸ್ತ್ರೀ ದಾಸ್ಯದ ಮುರಿದ ಬೇಡಿಗಳನ್ನು ತುಳಿಯುತ್ತ ಮುಂದುವರಿದಂತೆ, ಧರಿಸಿದ ಕಿರೀಟದ ೭ ಕಿರಣಗಳು, ೭ ಸಮುದ್ರ ಹಾಗೂ ೭ ಖಂಡಗಳಲ್ಲಿ ಸ್ವಾತಂತ್ರ್ಯದ ಪ್ರಭಾವ ಹರಡುವಂತಿರಬೇಕು ಎಂದುಕೊಂಡ ಬಾರ್ತೋಲ್ಡಿ.

ಬಾರ್ತೋಲ್ಡಿಯ ಸ್ಟುಡಿಯೋದಲ್ಲಿ ಇದವರೆಗೂ ಲಿಬರ್ಟಿ ಕೇವಲ ಒಂದು ಮಣ್ಣಿನ ಪ್ರತಿಮೆಯಾಗಿತ್ತು. ಬೃಹದಾಕಾರದ ಈ ಪ್ರತಿಮೆಯನ್ನು ಹಳೆಯ ಪದ್ಧತಿಯಂತೆ ಲೋಹದಲ್ಲಿ ಎರಕ ಹೊಯ್ಯುವುದು ಅಸಾಧ್ಯ. ಅದನ್ನು ನಿಲ್ಲಿಸುವುದಿರಲಿ ಬಿಡಿ ಬಿಡಿ ಭಾಗಗಳನ್ನು ಹಡಗಿನಲ್ಲಿ ಕಳಿಸುವುದೂ ಕಷ್ಟ.

ಪ್ರತಿಮೆಯನ್ನು ೪೬ ಮೀಟರ್‌ಗಳೆತ್ತರ ಮಾಡುವ ಧೈರ್ಯದ ನಿರ್ಧಾರಮಾಡಿದ ಬಾರ್ತೋಲ್ಡಿ. ಈ ಪ್ರಮಾಣಕ್ಕನುಸಾರವಾಗಿ, ಅದರ ಸೊಂಟವೇ ೧೧ ಮೀಟರ್,

ಮೂಗು ಒಂದುಕಾಲು ಮೀಟರ್, ತೋರು ಬೆರಳು ಎರಡುವರೆ ಮೀಟರ್ ಇರಬೇಕು. ಪ್ರತಿಮೆ ಎಷ್ಟು ಭಾರ ತೂಗಬಹುದೆಂದು ಲೆಕ್ಕವೇ ಇಲ್ಲ. ಈ ಕಾರ್ಯಕ್ಕೆ ಸರಿಯಾದ ಕಾರ್ಯಾಗಾರ ಪ್ಯಾರಿಸ್‌ನ ಮಾಂಡ್ಯೂಟ್ ಮತ್ತು ಬೆಕೆಟ್. ಬುದ್ಧಿವಂತರಾದ ಕಾರ್ಮಿಕರನ್ನು ಸೇರಿಸಿದ ಬಾರ್ತೋಲ್ಡಿ.



ಪ್ರತಿಮೆಯನ್ನು ಆಧರಿಸಬಲ್ಲ ಪೀಠ ತಯಾರಿಸಲು ಅತ್ಯುತ್ತಮ ಶಿಲ್ಪಿ ಯುಗೀನ್ ಇಮ್ಯಾನ್ಯುಯಲ್ ವಯೊಲೆಟ್ ಲಿ–ಡಕ್ ಅನ್ನು ಗೊತ್ತುಮಾಡಿದ್ದು ಬಾರ್ತೋಲ್ಡಿಯ ಮುಂದಿನ ಕೆಲಸ. ಬಾರ್ತೋಲ್ಡಿ ಪ್ರತಿಮೆಯನ್ನು ರೂಪಿಸುವತ್ತ ಮನಕೊಟ್ಟರೆ, ಲೆಬೋಲೆ, ಅದಕ್ಕಾಗಿ ಹಣಕಾಸಿನ ವ್ಯವಸ್ಥೆ ಮಾಡತೊಡಗಿದ. ತನ್ನ ಅಧ್ಯಕ್ಷತೆಯಲ್ಲಿ

ಫ್ರಾಂಕೋ ಅಮೆರಿಕನ್ ಸಂಸ್ಥೆಯನ್ನು ಸ್ಥಾಪಿಸಿದ.

ಸಂಸ್ಥೆ ಬ್ಯಾಂಕ್ ಖಾತೆ ತೆರೆದು, ಪ್ಯಾರಿಸ್ಸಿನ ಅತ್ಯುತ್ತಮ ಜಾಗದಲ್ಲೊಂದು ಆಫೀಸು ಸ್ಥಾಪಿಸಿ, ೧೮೭೫ ರ ಸೆಪ್ಟೆಂಬರ್ ೨೮ ರಂದು ಜನತೆಗೆ ಮೊದಲ ನಿವೇದನಾ ಪತ್ರ ಮುದ್ರಿಸಿತು. ಅಮೆರಿಕದ ನಮ್ಮ ಸ್ನೇಹಿತರಿಗೆ ಪ್ರೀತಿಯ ಕಾಣಿಕೆಯಾಗಿ ಈ ಪ್ರತಿಮೆ ನೀಡುತ್ತೇವೆ. ಅಮೆರಿಕನ್ನರು, ಆ ಪ್ರತಿಮೆ ನಿಲ್ಲಿಸುವ ಪೀಠದ ಖರ್ಚನ್ನು ಭರಿಸಬೇಕೆಂದು ಹೇಳಿ, ಕಾಣಿಕೆ ಎಷ್ಟೇ ಅಲ್ಪ ಮೊತ್ತದ್ದಾದರೂ ಸ್ವೀಕರಿಸುತ್ತೇವೆಂದ.

ಪ್ರೋತ್ಸಾಹ ಉತ್ತೇಜಕವಾಗಿತ್ತು. ಲೋಹದ ವ್ಯಾಪಾರಿಯೊಬ್ಬ ಪ್ರತಿಮೆಗೆ ಬೇಕಾದ ತಾಮ್ರ ಕೊಡಲು ಒಪ್ಪಿದ. ಮೊದಲು ಹಣ ಹರಿದುಬಂತು. ಅನಂತರ ಆವೇಗ ತಗ್ಗಿತು. ಪ್ರತಿಮೆಗೆ ಹಣ ಸಾಲದೆ ಅರ್ಧಕ್ಕೇ ನಿಲ್ಲುವುದೇನೋ ಎನಿಸಿತು. ಮತ್ತೊಂದು ಹೊಸ ಯೋಜನೆಯ ಪ್ರಕಾರ, ಫ್ರೆಂಚ್ ವ್ಯಾಪಾರಿಗಳು, ತಮ್ಮ ಪದಾರ್ಥಗಳೊಂದಿಗೆ, ಈ ಪ್ರತಿಮೆಯ ಗುರುತು ಒಳಸಿಕೊಳ್ಳುವ ಅವಕಾಶ ನೀಡಲೊಪ್ಪಿದ. ಮತ್ತೊಮ್ಮೆ ವ್ಯಾಪಾರಿ ವರ್ಗದವರಿಂದ ಹಣ ಸಹಾಯ ಒದಗಿತು.

೧೮೭೬ರಲ್ಲಿ ಸಂಸ್ಥೆ ಪ್ರತಿಮೆಯ ಕೆಲ ಭಾಗವನ್ನಾದರೂ ಶತಮಾನೋತ್ಸವದ ಸಮಯಕ್ಕೆ ಬಳುವಳಿಯಾಗಿ ಕಳಿಸಬೇಕೆಂದು ನಿರ್ಧರಿಸಿತು. ಬೇಗನೆ ಕೆಲಸ ನಡೆದು ಸ್ವಾತಂತ್ರ್ಯದ ದೀಪ ಹಿಡಿದ ದೊಡ್ಡ ಕೈಯನ್ನು, ಫಿಲಡೆಲ್ಫಿಯಾಗೆ ಆಗಸ್ಟ್‌ನಲ್ಲಿ ಕಳಿಸಿತು. ಅದು ಶತಮಾನೋತ್ಸವದ, ಅತ್ಯಂತ ಜನಪ್ರಿಯ ಪ್ರದರ್ಶಿಕೆ ಎನಿಸಿತು. ಪ್ರೇಕ್ಷಕರು ಏಣಿಯ ಮೂಲಕ ಹತ್ತಿ ದೀಪದ ಬಳಿ ಬರಬಹುದಿತ್ತು. ಅಲ್ಲಿಂದ ಪ್ರದರ್ಶನದ ಸುತ್ತಲಜಾಗದ ದೃಶ್ಯ ಕಾಣುತ್ತಿತ್ತು. ಪ್ರದರ್ಶನಮುಗಿದಾಗ, ಕೈ ಹಾಗೂ ದೀಪವನ್ನು ನ್ಯೂಯಾರ್ಕ್‌ನಲ್ಲಿ ಪ್ರದರ್ಶಿಸಿ, ಪ್ಯಾರಿಸ್‌ಗೆ ಹಿಂತಿರುಗಿಸಲಾಯ್ತು. ವಿಗ್ರಹದ ಬಗ್ಗೆ ಜನರ ಕುತೂಹಲ ಕೆರಳಿದ್ದೂ ಅಲ್ಲದೆ, ಆ ಸಂದರ್ಭದಲ್ಲಿಷ್ಟು ಹಣ ಸೇರಿತು.

೧೮೭೮ ರ ಸಾರ್ವಜನಿಕ ಪ್ರದರ್ಶನದ ವೇಳೆಗೆ ವಿಗ್ರಹದ ತಲೆ ಮತ್ತು ಭುಜ ತಯಾರಿಸುವತ್ತ ಬಾರ್ತೋಲ್ಡಿಯ ಗಮನ ಹರಿಯಿತು. ವಿಗ್ರಹದ ಕಣ್ಣಿನ ಅಗಲವೇ ೭೬ ಸೆಂಮೀಟರ್‌ಗಳು. ೫೦ ಜನ ಕೆಲಸಗಾರರು, ಹಗಲು ರಾತ್ರಿ ತಾಮ್ರ ಕುಟ್ಟಿ ಹದಮಾಡುತ್ತಿದ್ದರು. ತಲೆಯ ಮೇಲಿನ ಕಿರೀಟದ ಭಾಗದಲ್ಲಿ ಓಡಾಡುತ್ತಿದ್ದರೆ ಆಲೆಮನೆಯ ಕಬ್ಬಿನರಸ ಕುದಿಸುವ ದೊಡ್ಡ ಕಡಾಯಿಯಂತೆ ಕಾಣುತ್ತಿತ್ತು ಆ ಜಾಗ. ವಿಗ್ರಹದ ತಲೆ ಸಿದ್ಧವಾದಾಗ, ಅದನ್ನು ೧೩ ಕುದುರೆಗಳನ್ನು ಕಟ್ಟಿದ ಗಾಡಿಯಲ್ಲಿ ಪ್ರದರ್ಶನದ ಸ್ಥಳಕ್ಕೆಳೆದು ತರಲಾಯ್ತು. ಹಾದಿಯುದ್ದಕ್ಕು ನಿಂತ ಜನರ ಹರ್ಷೋದ್ಗಾರ ಗಗನ ಮುಟ್ಟಿತು.

೧೮೭೮ ರ ಕೊನೆಗೆ ಪ್ರದರ್ಶನ ಮುಗಿದಾಗ ಇನ್ನೂ ಹಣದ ಕೊರತೆ. ಹಿಂದೆಗೆಯದ ಬಾರ್ತೋಲ್ಡಿ, ಪ್ರತಿಮೆಯ ಉಳಿದ ಭಾಗದ ಕೆಲಸ ಮುಂದುವರಿಸಿದ. ೧೮೭೯ರ ಲಾಟರಿ ಎರಡು ಲಕ್ಷ ಫ್ರಾಂಕ್ ಗಳಿಸಿಕೊಟ್ಟಿತು. ಪೀಠ ತಯಾರಿಸಲು ಗೊತ್ತಾದ ಲಿ ಡಕ್ ಇದ್ದಕ್ಕಿದ್ದಂತೆ ನಿಧನನಾದ.

ನ್ಯೂಯಾರ್ಕ್‌ನ, ದಡಕ್ಕಪ್ಪಳಿಸುವ ಅಟ್ಲಾಂಟಿಕ್‌ನ ಬಿರುಗಾಳಿಯಲ್ಲಿ ವಿಗ್ರಹವನ್ನು ಭದ್ರವಾಗಿ ಹಿಡಿದು ನಿಲ್ಲಿಸುವಂಥ ಹಂದರ ತಯಾರಿಕೆಗಾಗಿ ಆಯ್ಕೆಯಾಗಿದ್ದು, ಸವಾಲೆದುರಿಸಲು ಸಿದ್ಧನಿದ್ದ ಏಕೈಕ ಇಂಜಿನಿಯರ್ ಗುಸ್ಟೇವ್ ಐಫಲ್ (ಐಫಲ್ ಟವರ್ ನಿರ್ಮಾತೃ) ಲೋಹದ ಕೆಲಸದಲ್ಲೀತ ನಿಷ್ಣಾತ.

ಐಫೆಲ್ ಬುದ್ಧಿವಂತ. ಹೊಸ ವಿಧಾನವನ್ನಳವಡಿಸಿ, ಕೆಲಸ ಮುಗಿಸಲೇಬೇಕೆಂಬ ಪಣತೊಟ್ಟ. ಆತನ ಕೈಚಳಕವಿಲ್ಲದಿದ್ದಲ್ಲಿ, ಪ್ರತಿಮೆ ಇಂದು ಇಷ್ಟು ಸುಭದ್ರವಾಗುಳಿಯುತ್ತಿರಲಿಲ್ಲ. ಮುಂದೆ ಈ ವಿಧಾನವನ್ನನುಸರಿಸಿ ಸ್ಕೈಸ್ಕ್ರೇಪರ್‌ಗಳು ರಚಿತವಾದವು. ತಾಮ್ರದ ಪಟ್ಟಿಗಳು ಒಂದರ ಭಾರವನ್ನೊಂದು ಹೊರದಂತೆ ವಿಗ್ರಹದ ಹಂದರ ರಚಿತವಾಗಿದೆ. ಪ್ರತಿಮೆ ದೃಢವಾಗಿ ನಿಂತೇ ನಿಲ್ಲುವುದೆಂಬ ಆತ್ಮ ವಿಶ್ವಾಸ ಐಫಲ್‌ಗೆ.

೧೮೮೩ ರಲ್ಲಿ ನಿಧನನಾದ ಲೆಬೋಲೆಯ ಸ್ಥಾನ ತುಂಬಿದ, ಸುಯೆಜ್ ಕಾಲುವೆ ಕಟ್ಟಿದ ಖ್ಯಾತಿಯ ಫರ್ಡಿನೆಂಡ್-ಡಿ-ಲೆಸೆಪ್ಸ್ ಕೆಲಸ ಮುಂದುವರಿಯಿತು. ಕಬ್ಬಿಣದ ಅಸ್ಥಿಪಂಜರದ ಪ್ರತಿಮೆಗೆ ತೆಳುವಾದ ತಾಮ್ರದ ತಗಡು ಹೊದೆಸಲಾಯ್ತು. ಜುಲೈ ವೇಳೆಗೆ ಪ್ರತಿಮೆ ಸೊಂಟದವರೆಗೂ ತಯಾರಾಯ್ತು. ಬಾರ್ತೋಲ್ಡಿ ಕೆಲಸಗಾರರಿಗೆ ಪ್ರತಿಮೆಯ ಒಳಭಾಗದಲ್ಲಿಯೇ ಒಂದು ಪಾರ್ಟಿ ಏರ್ಪಡಿಸಿದ. ಪ್ರತಿಮೆ ಎತ್ತರದ ಮನೆಗಳ ಛಾವಣಿಯ ಎತ್ತರವನ್ನು ಮೀರಿ ನಿಂತಿತು.

ಪ್ಯಾರಿಸ್‌ನಲ್ಲಿ ಪ್ರತಿಮೆ ಪೂರ್ಣಗೊಳ್ಳುವ ವೇಳೆಗೆ, ಅಮೇರಿಕನ್ ಸಮಿತಿ ನ್ಯೂಯಾರ್ಕ್‌ನಲ್ಲಿ ಪೀಠನಿರ್ಮಾಣಕ್ಕಾಗಿ ನಿಧಿ ಕೂಡಿಸತೊಡಗಿತು. ಪ್ರಮುಖ ಲೇಖಕರ ಬರೆಹಗಳನ್ನು ಅದಕ್ಕಾಗಿ ಹರಾಜು ಮಾಡಲಾಯ್ತು. ವಾರ್ಡ್ ದ್ವೀಪದಲ್ಲಿ ಬಂದಿಳಿದ ನಿರಾಶ್ರಿತರ ಬವಣೆ ಕಂಡ ಕವಯಿತ್ರಿ ಎಮ್ಮಾ ಲಾಜರೆಸ್ ಕವನವೊಂದನ್ನು ರಚಿಸಿದಳು. ಕೀಳು ವರ್ಗದವರ ಜೀವನಕ್ಕೆ ಹೊಸ ಭರವಸೆ ತರುವ ಚಾರಿತ್ರಿಕ ಶಕ್ತಿ ಎನಿಸಿತು ಪ್ರತಿಮೆ. ಅವಳು ರಚಿಸಿದ ಗೀತೆಯನ್ನು ಪೀಠದ ಫಲಕದ ಮೇಲೆ ಕೆತ್ತಲಾಯ್ತು. ಪ್ರತಿಮೆಯಷ್ಟೇ ಗೀತೆಯೂ ಪ್ರಖ್ಯಾತವಾಯ್ತು. ಆದರೆ ಸ್ಥಾಪಿತವಾದ ಪ್ರತಿಮೆಯನ್ನು ನೋಡಲು ಉಳಿದಿರಲಿಲ್ಲ. ಎಮ್ಮಾ, ಕ್ಯಾನ್ಸರಿನಿಂದ ತನ್ನ ೩೮ನೇ ವರ್ಷದಲ್ಲಿಯೇ ತೀರಿಕೊಂಡಳು.

೧೮೮೪ರ ಜೂನ್‌ನಲ್ಲಿ ಪ್ರತಿಮೆಯ ಕೆಲಸ ಪೂರ್ಣಗೊಂಡಾಗ, ಜುಲೈ ೪ರಂದು ಸನೆಟ್ ಗಾಥಿಯರ್‌ನ ಪ್ರಾಂಗಣ ಸಿಂಗಾರಗೊಂಡಿತು. ಪ್ರಮುಖ ವ್ಯಕ್ತಿಗಳು ಲೇಡಿ ಲಿಬರ್ಟಿಯ ಪ್ರತಿಮೆಯ ಸುತ್ತ ನಿಂತಾಗ ಬ್ಯಾಂಡ್ 'ಲಾ ಮರ್ಸೇಲ್ಸ್' ನುಡಿಸಿತು. ಫ್ರಾನ್ಸನ್ನು ಪ್ರತಿನಿಧಿಸಿ, ಪ್ರತಿಮೆಯನ್ನು ಅಮೇರಿಕದ ಜನತೆಗೆ ಅರ್ಪಿಸಿ ಇದು "ಅಮೇರಿಕಾ ಹಾಗೂ ಫ್ರಾನ್ಸಿನ ಗೆಳೆತನದ ಸಂಕೇತವೆಂದು ನಂಬುತ್ತೇವೆ" ಎಂದ ಬಾರ್ತೋಲ್ಡಿ.

೧೮೮೫ರ ಹೊಸ ವರ್ಷದ ದಿನಾಚರಣೆಯಂದು, ಪ್ರತಿಮೆ ಹಡಗಿನಲ್ಲಿ ಅಮೇರಿಕಕ್ಕೆ ಪ್ರಯಾಣಿಸಲು ಸಿದ್ಧವಾಯ್ತು. ಪ್ರತಿಮೆಯನ್ನು ಬಿಡಿ, ಬಿಡಿ ಭಾಗಗಳನ್ನಾಗಿಸಿ ಅವಕ್ಕೆ ಕ್ರಮಾಂಕ ಕೊಟ್ಟು, ಇನ್ನೂರಕ್ಕೂ ಹೆಚ್ಚು ಕ್ರೇಟ್‌ಗಳಲ್ಲಿ ತುಂಬಲಾಯ್ತು.

ಕೆಲವಂತೂ ಮೂರು ಟನ್ನಿನವರೆಗೂ ತೂಗಿದವು. ಫ್ರೆಂಚ್ ಯುದ್ಧ ನೌಕೆ 'ಇಸೆರೆ' ಮೇ ೨೧ರಂದು ಈ ಪೆಟ್ಟಿಗೆಗಳನ್ನು ಹೊತ್ತು ಹೇಲಿತು. ಜೂನ್ ೧೭ಕ್ಕೆ ನ್ಯೂಯಾರ್ಕ್ ಬಂದರು ತಲುಪಿ, ೨ ದಿನದ ಅನಂತರ ಬೆಡ್‌ಲೋ ದ್ವೀಪಕ್ಕೆ ಹೊರಟಿತು. ಅಮೆರಿಕದ ನೌಕಾದಳದ ನಾಲ್ಕು ನೌಕೆಗಳು ಮೇಯರ್ ಮತ್ತಿತರ ಅಧಿಕಾರಿಗಳೊಂದಿಗೆ ಮುಂದೆ ಸಾಗಿದವು. ಬ್ಯಾಂಡ್ ವಾದನ, ನೌಕಾ ಸೈರನ್, ಗನ್ ಸೆಲ್ಯೂಟ್ ಹಾಗೂ ಹರ್ಷೋದ್ಗಾರ ಮಾಡುತ್ತಿದ್ದ ಜನರ ಗೌಜಿನಿಂದ ಮನ್‌ಹಟನ್ ದ್ವೀಪ ತುಂಬಿತು. ಪ್ರತಿಮೆಗಿನ್ನು ಪೀಠ ತಯಾರಾಗದ್ದು ಕೊರತೆಯಾಗಿತ್ತು.

೧೮೭೭ರಲ್ಲಿ ಪೀಠಕ್ಕಾಗಿ ಶುರುವಾದ ನಿಧಿ ಸಂಗ್ರಹಣ ಕಾರ್ಯ ಕುಂಠಿತಗೊಂಡಿತ್ತು. ೧೮೮೩ರಲ್ಲಿ ಎಂಜಿನಿಯರ್ ಚಾರ್ಲ್ಸ್ ಪಾಮೆರಾಯ್ ಸ್ಟೋನ್ ಬೆಡೆಲೋ ದ್ವೀಪವನ್ನು ಒಂದು ಕಾರ್ಯಾಗಾರವಾಗಿ ಪರಿವರ್ತಿಸಿದ. ೧೦೦ ಜನ ಸ್ಥಳದಲ್ಲೇ ತಂಗಿದರು. ಜೂನ್‌ನಲ್ಲಿ ಫೌಂಡೇಶನ್ ಮುಗಿದು ೧೬.೧ ಮೀಟರ್ ಎತ್ತರವಿದ್ದು ೨೪,೦೦೦ ಬ್ಯಾರಲ್ ಸಿಮೆಂಟ್ ಹಾಗೂ ಶೇಖರವಾಗಿದ್ದ ಹಣವನ್ನು ನುಂಗಿತ್ತು.

೧೮೮೪ರ ಜುಲೈ ೪ರಂದು ಲಿಬರ್ಟಿ ಪ್ರತಿಮೆಯನ್ನು ಪ್ಯಾರಿಸ್, ಅಮೆರಿಕಕ್ಕೆ ಒಪ್ಪಿಸಿದಾಗ, ಪೀಠಕ್ಕೆ ಕೇವಲ ೩ ಸಾಲು ಕಲ್ಲು ಕಟ್ಟುವಷ್ಟು ಹಣ ಖಾತೆಯಲ್ಲಿತ್ತು. ಕೆಲಸ ನಿಂತಿತು. ಇಪ್ಪತ್ತೇಳೂವರೆ ಮೀಟರ್ ಇರಬೇಕಾದ ಪೀಠದಕ್ಷೇಗ ಕೇವಲ ನಾಲ್ಕೂವರೆ ಮೀಟರ್ ಎತ್ತರ ಕಟ್ಟಿ ಮುಗಿದಿತ್ತು.

ಪತ್ರಕರ್ತ ಜೋಸೆಫ್ ಪುಲಿಟ್ಜರ್‌ನ ಮೂಲಕ, ಆಶಾ ಕಿರಣವೊಂದು ತೂರಿ ಬಂತು. ಧಾನ್ಯ ವ್ಯಾಪಾರಿ, ಹಂಗರಿಯನ್ ಜ್ಯೂ ತಂದೆಯ ಹಾಗೂ ಆಸ್ಟ್ರೀ ಜರ್ಮನ್ ಕ್ಯಾಥೋಲಿಕ್ ತಾಯಿಯ ಮಗನಾದ ಪುಲಿಟ್ಜರ್ ೧೮೬೧–೬೫ರ ಸಿವಿಲ್ ಯುದ್ಧದಲ್ಲಿ ಭಾಗವಹಿಸಿ ಯುದ್ಧಾನಂತರ, ಸೇಂಟ್ ಲೂಯಿಸ್‌ನಲ್ಲಿ ವರದಿಗಾರನಾಗಿ, ನ್ಯೂಯಾರ್ಕ್‌ಗೆ ಬಂದು 'ವರ್ಲ್ಡ್' ಪತ್ರಿಕೆಯನ್ನು ಕೊಂಡಿದ್ದ. ಪೀಠದ ಬಗೆಗಿನ ಹಣದ ಬಿಕ್ಕಟ್ಟಿನಿಂದ ಕಿರಿಕಿರಿಗೊಂಡಿದ್ದ. ೧೮೮೫ರ ಮಾರ್ಚ್ ೧೪ರಂದು 'ರಾಷ್ಟ್ರೀಯ ಅಪಮಾನ' ಎಂಬ ಶಿರೋನಾಮೆಯೊಂದಿಗೆ ಸಂಪಾದಕೀಯವೊಂದನ್ನು ಬರೆದ.

"ಫ್ರಾನ್ಸ್, ಇಂಥ ಭವ್ಯ ಪ್ರತಿಮೆಯನ್ನು ನಮಗೆ ಬಳುವಳಿಯಾಗಿತ್ತರೂ, ಅದಕ್ಕೊಂದು ಪೀಠವೊದಗಿಸಲು ನಾವು ಅಸಮರ್ಥರೆಂದರೆ ಶುದ್ಧ ಅವಮಾನ. ಲಕ್ಷಾಧಿಕಾರಿಗಳಿಗಾಗಿ ನಾವು ಕಾಯುವುದು ಬೇಡ. ಸಾಮಾನ್ಯ ಜನತೆ ಮುಂದೆ ಬಂದು ತಮ್ಮ ಕಿರುಕಾಣಿಕೆ ಅರ್ಪಿಸಲಿ" ಎಂದು ಬರೆದ. ಏಪ್ರಿಲ್ ೧೫ರ ವೇಳೆಗೆ ೨೫ ಸಾವಿರ ಡಾಲರ್ ಹಣ ಸಂಗ್ರಹವಾಯಿತು. "ವಿಶ್ವದ ಬಾರ್ತೋಲ್ಡಿ ಪೆಡೆಸ್ಟಲ್ ಫಂಡ್" ಶಿರೋನಾಮೆಯಡಿ ದಾನಿಗಳ ಪತ್ರ, ಅದಕ್ಕಾಗಿ ದುಡಿದ ಹುಡುಗ ಹುಡುಗಿಯರ ಪರಿಚಯ, ಶ್ರಮಿಸಿದ ಕಲಾಕಾರರು, ಶಾಲಾಮಕ್ಕಳು, ಬಡವರು, ಹಿರಿಯರು, ಎಲ್ಲರ ಬಗ್ಗೆ ಬರೆಯಿತು ವರ್ಲ್ಡ್. ಇತರ ಪತ್ರಿಕೆಗಳೂ ಹಿಂದುಳಿಯಲಿಲ್ಲ. ಇದೊಂದು ರಾಷ್ಟ್ರೀಯ ಚಳವಳಿಯ ರೂಪ ಪಡೆಯಿತು. ಲಿಬರ್ಟಿ ಅಮೆರಿಕನ್ನರೆಲ್ಲರ ಹೃದಯ ಗೆಲ್ಲುತ್ತಿದ್ದಳು.

ಪ್ರತಿಮೆಯ ಪೀಠಕ್ಕಾಗಿ ವಿಶ್ವದ ಕೊಡುಗೆ ಒಂದು ಲಕ್ಷ ಡಾಲರುಗಳೆಂದು, ಆಗಸ್ಟ್ ೧೧ರಂದು ಪ್ರಕಟಿಸಿತು ವರ್ಲ್ಡ್. ವಿಶೇಷವೆಂದರೆ, ಶೇಕಡ ೮೦ ಭಾಗ ಹಣ, ಕೇವಲ ೧ ಡಾಲರ್‌ಗಿಂತಲೂ ಕಡಿಮೆ ಕೊಟ್ಟವರಿಂದ ಸಂಗ್ರಹವಾಗಿತ್ತು! ವೇಗದ ಕೆಲಸ ನಡೆದು ಪೀಠದ ಕಡೆಯ ಕಲ್ಲುಚಪ್ಪಡಿ ೧೮೮೬ರ ಏಪ್ರಿಲ್ ೨೨ರಂದು ಇಡಲಾಯ್ತು.

ವರ್ಷದ ಹಿಂದೆ ಪೆಟ್ಟಿಗೆಯಲ್ಲಿಟ್ಟು ಪ್ಯಾಕ್ ಮಾಡಿದ ಪ್ರತಿಮೆಯ ಭಾಗಗಳನ್ನು ಬಿಚ್ಚಲಾಯ್ತು. ಅವನ್ನು ಕೂಡಿಸಲು ೧೨ ತಿಂಗಳು ಹಿಡಿಯಿತು. ಎರಡು ತಾಮ್ರದ ತಗಡುಗಳನ್ನು ಹೊಂದಿಸಿ, ಮೊದಲನೆಯದರಲ್ಲಿ ಬಾರ್ತೋಲ್ಡಿಯ ಹಾಗು ಎರಡನೆಯದರಲ್ಲಿ ಪುಲಿಟ್ಜರ್‌ನ ಹೆಸರನ್ನು ಕೆತ್ತಲಾಯ್ತು. ಕಡೆಯ ರಿವೆಟ್ ಹೊಡೆದಾಗ ಪ್ರತಿಮೆ ಸಮುದ್ರ ಮಟ್ಟದಿಂದ ಪಂಜಿನವರೆಗೆ ೯೨ ಮೀಟರ್‌ಗಳೆತ್ತರ ಏರಿತ್ತು. ಅಕ್ಟೋಬರ್ ೨೮ರಂದು ಅನಾವರಣದ ಸಮಾರಂಭ. ೨೮ರಂದು ಬಾರ್ತೋಲ್ಡಿ ಹಾಗೂ ಫರ್ಡಿನೆಂಡ್ ಡಿ ಲೆಸೆಪ್ಸ್‌ರನ್ನೊಳಗೊಂಡ 'ಲಾ ಬ್ರಿಟಾಗ್ನೇ' ಹಡಗು ಬೆಡಲೋ ದ್ವೀಪಕ್ಕೆ ಹೊರಟು ೨ಕ್ಕೆ ದ್ವೀಪ ತಲುಪಿತು. ಪ್ರತಿಮೆಯ ತಾಮ್ರದ ತಗಡು ಸೂರ್ಯನ ಬೆಳಕಿನಲ್ಲಿ ಹೊಳೆಯುತ್ತಿತ್ತು. ಪೀಠದ ಮೇಲೆ ಮೊದಲ ಬಾರಿಗೆ ಬಾರ್ತೋಲ್ಡಿ ಪ್ರತಿಮೆಯನ್ನು ಕಂಡಾಗ ಅದು ಅವನನ್ನು ಕೈಬೀಸಿ ಕರೆದಂತಾಯ್ತು. ಅವನ ಕನಸು ನನಸಾಗಿತ್ತು. ಸಂತಸ ಅಪಾರವಾಗಿತ್ತು.

೧೦-೩೦ಕ್ಕೆ ಅಧ್ಯಕ್ಷ ಗ್ರೋವರ್ ಕ್ಲೀವ್‌ಲ್ಯಾಂಡ್ ಹಾಗೂ ಅಮೆರಿಕದ ಅಧಿಕಾರಿ
ಗಳು ಬಾರ್ತೋಲ್ಡಿ ಹಾಗೂ ಡಿ.ಲೆಸೆಪ್ಸ್‌
ಅನ್ನು ಭೇಟಿಯಾಗಿ, "ನೀನಿಂದು ಅಮೆರಿಕ
ದಲ್ಲೇ ಹಿರಿಯ ವ್ಯಕ್ತಿ" ಎಂದು
ಬಾರ್ತೋಲ್ಡಿಗೆ ಅಭಿನಂದಿಸಿದರು. ಆ ಮೆರ
ವಣಿಗೆ ಅಮೆರಿಕದ ಇತಿಹಾಸದಲ್ಲೇ ಕಂಡ
ಅದ್ಭುತ ದೃಶ್ಯ. ೨೦ ಸಾವಿರ ಮಂದಿ
ಪಾಲ್ಗೊಂಡ ಐದೂವರೆ ಕಿ.ಮೀ. ಉದ್ದದ
ಮೆರವಣಿಗೆ. ಅಧಿಕಾರಿಗಳು, ಜಾರ್ಜ್
ವಾಷಿಂಗ್ಟನ್ ೮ ಕುದುರೆಗಳ ಸಾರೋಟ
ನಲ್ಲಿ ಬಂದ ಒಂದು ಅಪೂರ್ವ ದೃಶ್ಯ. ಹಾದಿ
ಕ್ರಮಿಸಲು ೩ ಘಂಟೆಗಳಿಗೂ ಮೀರಿದ
ಸಮಯ ಬೇಕಾಯ್ತು. ಅಧ್ಯಕ್ಷರು ಬೆಡಲೋ
ದ್ವೀಪಕ್ಕೆ ಕಾಲಿಟ್ಟಾಗ ಕುಶಾಲು ತೋಪು
ಗಳು ಹಾರಿದವು. ಬಾರ್ತೋಲ್ಡಿ ಪ್ರತಿಮೆ
ಯನ್ನು ಅನಾವರಣಗೊಳಿಸಿದ. ಬಂದರಿ
ನಲ್ಲಿದ್ದ ಪ್ರತಿಯೊಂದು ನಾವೆಯ ಕಫ್ತಾ
ನನೂ, ಇತರ ನಾವೆಯ ಸೈರನ್ ಶಬ್ದ
ದೊಂದಿಗೆ ಸ್ಪರ್ಧಿಸಿದ ಜಯಕಾರ ಗಗನ
ಮುಟ್ಟಿತು.

ಹಗಲು ಬೆಳಕಿನಲ್ಲಿ ಪ್ರತಿಮೆ ಅದ್ಭುತ
ವಾಗಿ ಕಾಣುತ್ತಿತ್ತು. ಸಂಜೆಯ ಹೊಂಗಿರಣ
ಗಳು ಪ್ರತಿಮೆಯ ಸುತ್ತ ಪ್ರಕಾಶಮಾನ
ವಾದ ಪ್ರಭಾವಳಿ ಮೂಡಿಸುತ್ತಿದ್ದವು
ರಾತ್ರಿಯ ಪ್ರಕಾಶ ಹಡಗು ಚಾಲಕರಿಗೆ ಅ
ಹೆಚ್ಚಿಸುವುದೆಂದು ಸ್ವಲ್ಪ ತಗ್ಗಿಸಲಾಯ್ತು
ಆದರೆ ಅದು ದಾರಿದೀಪವಾಗುವುದ
ಬದಲು ಮಿಣುಕು ಹುಳದ ಪ್ರಕಾಶದಂ
ಕಂಡಿತು. ೧೮೮೭-೧೮೯೨ರಲ್ಲಿ ಜ್ವಾಲೆಗ
ಬದಲಾವಣೆ ಆಯ್ತು. ೧೯೧೬ರಲ್ಲಿ ಮೌಂಟ
ರಷ್‌ಮೋರ್‌ನಲ್ಲಿ ವಾಷಿಂಗ್ಟನ್. ಜೆಫರ
ಸನ್, ಲಿಂಕನ್ ಹಾಗೂ ರೂಸ್‌ವೆಲ್ಟ್
ಮುಂತಾದ ಅಮೆರಿಕದ ಅಧ್ಯಕ್ಷರ ವ್ಯ

ಕಾರದ ತಲೆ ಕೆತ್ತಿದ ಶಿಲ್ಪಿ ಗಟ್ಸನ್ ಬೋರ್ಗ್ಲನ್ ಜ್ಯೋತಿಯನ್ನು ಸರಿಪಡಿಸಿದ. ಪ್ರೆಸಿಡೆಂಟ್ ವುಡ್ರೋ ವಿಲ್ಸನ್ 'ಮೇಫ್ಲವರ್' ಹಡಗಿನಿಂದ ಸ್ವಿಚ್ ಒತ್ತಿ ಜ್ಯೋತಿ ಹತ್ತಿಸಿದ.

೧೯೩೬ರಲ್ಲಿ ಫ್ರಾಂಕ್ಲಿನ್ ಡಿ ರೂಸ್‌ವೆಲ್ಟ್ ನೇತೃತ್ವದಲ್ಲಿ ಪ್ರತಿಮೆಯ ಸ್ಥಾಪನೆಯ ಅರ್ಧ ಶತಮಾನೋತ್ಸವ ಆಚರಣೆ ಆಯ್ತು. ಮತ್ತಷ್ಟು ಸುಂದರ ಸನ್ನಿವೇಶಗಳನ್ನು ಕಂಡಿದೆ 'ಲಿಬರ್ಟಿ'. ೧೯೭೬ರ ಜುಲೈ ೪ರಂದು ಅಮೆರಿಕದ ೨೦೦ನೆಯ ಹುಟ್ಟು ಹಬ್ಬ. ತಲೆಯ ಎರಡೂವರೆ ಟನ್ ತೂಕದ ೧೩ ಫ್ಲಡ್ ಲೈಟ್‌ನ ಕಿರಣಗಳಿಂದ ಪ್ರತಿಮೆ ಪ್ರಕಾಶಿಸಿತು.

ಕಾಲದ ಪ್ರಭಾವಕ್ಕೆ ಯಾವುದೂ ಹೊರತಲ್ಲ. ಪ್ರತಿಮೆಯ ಕೆಲವು ಭಾಗಗಳು ರಿಪೇರಿ ಕಂಡವು. ೧೯೮೦ರಲ್ಲಿ ಫ್ರೆಂಚ್ ಹಾಗೂ ಅಮೆರಿಕದ ಶಿಲ್ಪಿಗಳು, ಎರಡು ವರ್ಷಗಳವರೆಗೂ, ಪ್ರತಿಮೆಯ ಹೆಬ್ಬೆರಳಿನಿಂದ ಜ್ಯೋತಿಯ ತುಟ್ಟತುದಿಯವರೆಗೂ ಪರೀಕ್ಷಿಸಿದರು. ತಾಮ್ರದ ತಗಡಿನೊಳಗಿದ್ದ ಕಬ್ಬಿಣದ ಹಂದರ ತುಕ್ಕು ಹಿಡಿದಿತ್ತು. ೧೦೦ ವರ್ಷ ಹಿಂದಿನ ಐಫೆಲ್‌ನ ವಿನ್ಯಾಸವನ್ನು ಬದಲಿಸದೆ, ಕಬ್ಬಿಣದ ಬದಲಿಗೆ ಉಕ್ಕಿನ ಸರಳುಗಳನ್ನು ಬಳಸಲಾಯ್ತು. ಅದಕ್ಕಾಗಿ ಪ್ರತಿಮೆಯ ಸುತ್ತ ೩೦೦ ಟನ್ ಅಲ್ಯೂಮಿನಿಯಂ ಅಟ್ಟಣಿಗೆ ಕಟ್ಟಲಾಯ್ತು. ೧೯೮೪ರ ಜುಲೈ ೪ರಂದು ೧೦೦ ವರ್ಷದ ಜ್ಯೋತಿಯನ್ನು ರಿಪೇರಿ ಕೆಲಸಗಳಿಗಾಗಿ ಕೆಳಗಿಳಿಸಲಾಯ್ತು. ಅದಕ್ಕಾಗಿ ೧೦೦ ಮಿಲಿಯನ್ ಡಾಲರ್‌ಗಳ ನಿಧಿ ಸಂಗ್ರಹವಾಯ್ತು. ಶಾಲಾ ಮಕ್ಕಳೇ ೧.೪ ಮಿಲಿಯನ್ ಡಾಲರ್ ಸಂಗ್ರಹಿಸಿದ್ದರು. ಅಮೆರಿಕದ ಜನತೆಗೂ ಈ ಪ್ರತಿಮೆಗೂ ಅವಿನಾಭಾವ ಸಂಬಂಧವೇರ್ಪಟ್ಟಿದೆ. ಇದು ಜನತೆಯ ಸ್ವಾತಂತ್ರ್ಯದ ಭರವಸೆಯ ಸಂಕೇತ !



ಶಿಕ್ಷಣದ ಮೂಲಕ ಪುನರ್ನಿರ್ಮಾಣ :
ಪುನರ್ನಿರ್ಮಾಣದ ಮೂಲಕ ಶಿಕ್ಷಣ

—ಗಾಂಧೀಜಿ

ಆಫ್ರಿಕಾದ ಅನುಭವ

ಲಕ್ಷ್ಮೀನಾರಾಯಣ
ರಾಘವೇಂದ್ರ ದೇವಸ್ಥಾನದ ಹತ್ತಿರ
ರೈಲ್ವೆಸ್ಟೇಷನ್ ರಸ್ತೆ
ಕೆ. ಆರ್. ಸಾಗರ ೫೭೧ ೬೦೭
ಮಂಡ್ಯ ಜಿಲ್ಲೆ

ಕಂದಕದ ಅಂಚಿನಲ್ಲಿ ಬೆಳೆದಿದ್ದ ದಟ್ಟವಾದ ಗಿಡಗಂಟೆಗಳ ಪೊದರನ್ನು ನಾವು ಪ್ರವೇಶಿಸುತ್ತಿದ್ದಂತೆಯೇ 'ಗುರ್ರ್' ಎನ್ನುವ ಶಬ್ದ ಕೇಳಿಸಿತು—ಅದು ನೀವು ಎಂದೂ ಕೇಳಿರದ ಶಬ್ದ—ಪ್ರಪಂಚದ ಮೊಟ್ಟ ಮೊದಲ ಬೇಟೆಗಾರರನ್ನು ಎಚ್ಚರಿಸಿದ್ದಂತೆ ಹೊತ್ತು ಮಾಡುತ್ತಿದ್ದಂತೆಯೇ ಎಚ್ಚರಿಕೆಯ ಸದ್ದು ಹರಿದು ಬರುತ್ತಿತ್ತು ನಮ್ಮತ್ತ.

ಸಿಂಹಿಣಿಯೊಂದು ಕಪ್ಪನೆಯ ನೆರಳಿನಲ್ಲಿ ನಮ್ಮ ಕಡೆಗೆ ದೃಷ್ಟಿ ನೆಟ್ಟಿದ್ದುದನ್ನು ನಾವು ಗುರುತಿಸಿದೆವು. ಅದರ ಕಿವಿಗಳು ತಲೆಯ ಹಿಂಭಾಗಕ್ಕೆ ಮಡಿಚಿದ್ದವು. ಆಡ್ರಿನಾಲಿನ್ ನಮ್ಮ ಕೈಗಳಿಗೆ ಭಾರ ಹೇರಿದ್ದನು, ಜತೆಗೆ ಹೊಟ್ಟೆ ಬೇರೆ ಹಸಿದಿತ್ತು. ನಾವು ಮೆತ್ತಗೆ ಹಿಂದಕ್ಕೆ ಸರಿದೆವು. ಆದರೆ ನಮ್ಮ ಚಲನೆಯ ಶಬ್ದ ಅದರ ಗುರುಗುಟ್ಟುವಿಕೆಯನ್ನು ತೀವ್ರವಾಗಿಸಿತಲ್ಲದೆ ಇನ್ನೇನು ನಮ್ಮ ಮೇಲೆ ಅದು ಎಗರುವಂತಿತ್ತು. ನಾವು ನಿಶ್ಚಲವಾಗಿ ನಿಂತೆವು.

ಕೆಲವು ಕ್ಷಣಗಳ ನಂತರ ನಾವು ಮತ್ತೆ ಮೆಲ್ಲಗೆ ಕಂದಕದ ಹಿಂಭಾಗಕ್ಕೆ ನಿಧಾನವಾಗಿ ಬರಲಾರಂಭಿಸಿದೆವು. ಅದರ ಕಣ್ಣೋಟದಿಂದ ನಾವು ಮರೆಯಾದೊಡನೆ ನಮ್ಮ ವಾಹನವಾದ 'ಲ್ಯಾಂಡ್ ರೋವರ್'ನತ್ತ ವೇಗವಾಗಿ ಹೋಗಿ ಹತ್ತಿಕೊಂಡೆವು ಮತ್ತು ಯುಕ್ತಿಯಿಂದ ಸಿಂಹಿಣಿಯ ಹತ್ತಿರ ತಲುಪಿದೆವು. ತೊಂದರೆ ನೀಡುತ್ತಿದ್ದ ಇಬ್ಬರು ಮನುಷ್ಯರ ಬದಲಾಗಿ ವಾಹನವನ್ನು ನೋಡಿ ಸ್ವಲ್ಪ ಸಮಾಧಾನವಾಯಿತು.

ನಾನು ನನ್ನ ಕ್ಯಾಮರಾವನ್ನು ಸೆಟ್ ಮಾಡಿಕೊಳ್ಳುತ್ತಿದ್ದಂತೆ ಮಾರ್ಗದರ್ಶಿ 'ಹೆನ್ರಿಕ್ ನುಡೆಲ್ಲಾವು' ನನ್ನ ಭುಜವನ್ನು ತಟ್ಟಿ ಸಿಂಹಿಣಿಯ ಹಿಂಭಾಗದತ್ತ ಬೆರಳು ತೋರಿಸಿದ. ಕುತೂಹಲದಿಂದ ಕೂಡಿದ ಒಂದು ಪುಟ್ಟ ಮುಖ ಹುಲ್ಲಿನೊಳಗಿನಿಂದ ನಮ್ಮತ್ತ ನೋಡುತ್ತಿತ್ತು. ದೊಡ್ಡ ಕಿವಿಗಳು, ಕಿಡಿಕಾರುವ ಕಣ್ಣುಗಳು ಮತ್ತು ಹುಬ್ಬಿನ ಹತ್ತಿರ ಸುಕ್ಕುಗಟ್ಟಿದ ಸಿಂಹದ

೧೯೯೬ರ ಜನವರಿ ರೀಡರ್ಸ್ ಡೈಜೆಸ್ಟಿನಲ್ಲಿನ 'ವಿಲಿಯಂ ಟೇಲರ್' ಅವರ "ಮೈನ್ ಆಫ್ರಿಕನ ಎಕ್ಸ್‌ಪೀರಿಯನ್ಸ್" ಲೇಖನ.

ಮರಿ ಕಂಡಿತು. ನೈ ತುಂಬಾ ದಟ್ಟವಾದ ಕೂದಲಿದ್ದುದರಿಂದ ಅದು ಉಣ್ಣೆಯಿಂದ ಮಾಡಿದ ಚೆಂಡಿನಂತೆ ಕಾಣುತ್ತಿತ್ತು. ಕ್ಯಾಮರಾವನ್ನು ಕ್ಲಿಕ್ಕಿಸುತ್ತಿದ್ದಂತೆ ಪುಟ್ಟ ಪುಟ್ಟ ಮರಿಗಳು ಭಯದಿಂದ ಆಶ್ರಯಕ್ಕಾಗಿ ತಮ್ಮ ತಾಯಿಯ ಹಿಂದೆ ಬಚ್ಚಿಟ್ಟು ಕೊಂಡವು. ಬೆಕ್ಕಿನ ಮರಿಗಳಂತೆ ಕಾಣುತ್ತಿದ್ದ ಅವುಗಳೆಲ್ಲಾ ಸ್ವಲ್ಪ ಸಮಯದ ನಂತರ ಒಂದೊಂದಾಗಿ ತಾಯಿಯ ಮೇಲೇರಿ ಮೆತ್ತಗೆ ಶಬ್ದ ಮಾಡುತ್ತಾ ಹಾಲು ಕುಡಿಯಲಾರಂಭಿಸಿದವು.

ಇದು ಖ್ಯಾತ ಛಾಯಾಗ್ರಾಹಕ 'ಗೆರಾಲ್ಡ್ ಹಿಂಡೆ'ಯ ಸೆಪ್ಟೆಂಬರ್ ೪, ೧೯೯೧ರ ಫೀಲ್ಡ್ ನೋಟ್ ಬುಕ್ಕಿನ ಸಂಗ್ರಹಣೆ. ಗೆರಾಲ್ಡ್ ಮತ್ತು ನಾನು ಕಾಡಿನಲ್ಲಿ ಹಲವಾರು ಗಂಟೆಗಳ ಕಾಲ ಕಳೆದಿದ್ದೆವು. ಕಾಡಿನಲ್ಲಿ ಅವನು ತನ್ನ ಪುಸ್ತಕದಲ್ಲಿ ಏನೇನೋ ಬರೆದುಕೊಳ್ಳುತ್ತಿದ್ದ. ಆಗ ನಾನು ದಕ್ಷಿಣ ಆಫ್ರಿಕಾದ ಕ್ರೂಗರ್ ಅಭಯಾರಣ್ಯದ ಗಡಿಯಲ್ಲಿದ್ದ ೧೪,೦೦೦ ಹೆಕ್ಟೇರ್ ವಿಸ್ತೀರ್ಣವುಳ್ಳ 'ಮಾಲ ಮಾಲ' ಎಂಬ ಖಾಸಗಿ ಅಭಯಾರಣ್ಯದಲ್ಲಿ ಸೀನಿಯರ್ ರೇಂಜರ್ ಆಗಿದ್ದೆ.

ಮೈಥರಗುಟ್ಟುವಂಥ ಭಯಂಕರ ಪ್ರಾಣಿಗಳು ಇಲ್ಲಿವೆ—ಅತಿ ದೊಡ್ಡ ಪ್ರಾಣಿಗಳು, ತುಂಬಿ ತುಳುಕುವ ಸಣ್ಣ ಪುಟ್ಟ ಪ್ರಾಣಿಗಳು ಹಾಗೂ ಅತ್ಯಂತ ಕ್ರೂರವಾದ ಲೂಟಿಕೋರ ಪ್ರಾಣಿಗಳಿಂದ ಹಿಡಿದು ಎಲ್ಲಾ ಇವೆ. ನಾನು ಮಾಲ ಮಾಲ ಅರಣ್ಯದಲ್ಲಿದ್ದಾಗ ಪ್ರಾಣಿಗಳನ್ನು ಹಿಂಬಾಲಿಸುತ್ತಾ ಹಲವಾರು ಗಂಟೆಗಳನ್ನು ಕಳೆಯುತ್ತಿದ್ದೆ. ಅವರಲ್ಲಿಯೂ ಸಿಂಹಗಳನ್ನು ಹಿಂಬಾಲಿಸುತ್ತಾ ಆಫ್ರಿಕಾದ ದಟ್ಟ ಮೌನದಲ್ಲಿದ್ದ ಮಾಂತ್ರಿಕತೆ ಹಾಗೂ ಶಾಂತಿಯ ಅದ್ಭುತ ಶಕ್ತಿಯನ್ನು ಮಂತ್ರಮುಗ್ಧನಾಗಿ ಅನುಭವಿಸುತ್ತಿದ್ದೆ.

ಗೆರಾಲ್ಡ್‌ನ ಸಹಾಯದೊಂದಿಗೆ ನನ್ನ ಕೆಲವು ಮರೆಯಲಾಗದ ಅನುಭವಗಳನ್ನು ಹಂಚಿಕೊಳ್ಳುತ್ತೇನೆ.

೧೯೯೧ರ ಬೇಸಿಗೆಯಲ್ಲಿ ಮಾಲಮಾಲದಲ್ಲಿ ಸ್ವಲ್ಪವೂ ಮಳೆಯಿರಲಿಲ್ಲ. ಹುಲ್ಲು ಹಾಗೂ ಮರಗಿಡಗಳಲೂ ಸಂಪೂರ್ಣದಾಗಿ ಒಣಗಿಹೋಗಿತ್ತು. ಒಂದು ಬಯಲಿನಲ್ಲಿ ಹಾವಿನಂತೆ ಹರಿದು ಬರುತ್ತಿದ್ದ ಮ್ಲೋವತಿ ನದಿಗೆ ಅಡ್ಡಲಾಗಿ ಒಂದು ಅಣೆಕಟ್ಟೆಯನ್ನು ಕಟ್ಟಲಾಗಿತ್ತು. ಅಲ್ಲಿಗೆ ಮೈಲುಗಟ್ಟಲೆ ದೂರದಿಂದ ಅನೇಕ ಕ್ರೂರಪ್ರಾಣಿಗಳು, ಜೀಬ್ರಾ, ಘೇಂಡಾ ಮೃಗಗಳು ಮತ್ತು ಜಿರಾಫೆಯಂಥ ಪ್ರಾಣಿಗಳು ಸತತವಾಗಿ ನೀರು ಕುಡಿಯಲು ಬರುತ್ತಿದ್ದವು. ಆದ್ದರಿಂದ ಅದೊಂದು ಉತ್ತಮ ಸ್ಥಳವಾಗಿತ್ತು.

ಒಂದು ದಿನ ಗೆರಾಲ್ಡ್ ಮತ್ತು ನಾನು ನಮ್ಮ ಲ್ಯಾಂಡ್ ರೋವರ್‌ನಲ್ಲಿ ಚಲಿಸುತ್ತಿದ್ದಾಗ ಸುಮಾರು ಹನ್ನೆರಡು ಕಾಡು ನಾಯಿಗಳು ಮ್ಲೋವತಿ ಅಣೆಕಟ್ಟೆಯ ಕಡೆಗೆ ವೇಗವಾಗಿ ಹೋಗುತ್ತಿದ್ದುದನ್ನು ನೋಡಿದೆವು. ಅವು ಬಯಲಿನಂತಹ ಸ್ಥಳಕ್ಕೆ ಬಂದ ಕೂಡಲೆ ವೇಗ ತಗ್ಗಿಸಿ ಯಾವುದೋ ಪ್ರಾಣಿಯ ವಾಸನೆ ಹಿಡಿದು ಅತ್ತ ಕಡೆಗೆ ನುಗ್ಗಿದವು. ನೋಡುವುದಕ್ಕೆ ಅದ್ಭುತವಾದ ದೃಶ್ಯ. ಆಫ್ರಿಕಾದ ಅಪರೂಪದ, ಅತಿಶಕ್ತಿಶಾಲಿಯಾದ ಬೇಟೆನಾಯಿಗಳು ಹುಲ್ಲು ಬೆಳೆದ ಮೈದಾನದೊಳಗೆ ತಲೆ ಚಾಚಿ, ಬಾಯಿತೆರೆದು, ತುದಿಯಲ್ಲಿ ಬಿಳಿಯ ಬಣ್ಣದ

ಬಾಲವನ್ನು ಮೇಲೆತ್ತಿ ಓಡುತ್ತಿದ್ದ ದೃಶ್ಯ ರೋಮಾಂಚನ.

ಓಡುತ್ತಾ ಧೂಳಿನಲ್ಲಿ ಮರೆಯಾದ ನಾಯಿಗಳು ಕಾಡೆಮ್ಮೆಗಳ ಮಂದೆಯ ಮೇಲೆರಗಿ ಗುಂಪಿನಿಂದ ಒಂದು ಕರುವನ್ನು ಬೇರ್ಪಡಿಸಿದವು. ಅನಂತರ ನಾಯಿಗಳ ಮುಂದಾಳು ಅದರ ಮೇಲೆ ಹಾರಿ ತನ್ನ ಭಯಂಕರವಾದ ಕೋರೆಹಲ್ಲಿನಿಂದ ಆ ಎಳೆಗರುವಿನ ಹಿಂಗಾಲನ್ನು ಕಚ್ಚಿ ಎಳೆಯುತ್ತಾ ಅದನ್ನು ಒಂದು ಸಣ್ಣ ನೀರಿನ ಹೊಂಡಕ್ಕೆ ಬೀಳಿಸಿತು.

ಸಾಮಾನ್ಯವಾಗಿ ಇದೇ ಬೇಟೆಯ ಕೊನೆಯ ದೃಶ್ಯ. ಆದರೆ ನಾಯಿಗಳು ತಮ್ಮ ಬೇಟೆಯ ತಾಯಿಯ ಮೊಂಡು ಧೈರ್ಯದ ಆಕ್ರಮಣವನ್ನು ನಿರೀಕ್ಷಿಸಿರಲಿಲ್ಲ. ಅದು ರಭಸವಾಗಿ ಹಿಂದೆ ತಿರುಗಿ ನಾಯಿಗಳ ಹಿಂಡನ್ನು ಬೆದರಿಸಿ ಚೆದುರಿಸಿತು. ಮತ್ತು ತನ್ನ ಕರು ಎದ್ದು ನಿಂತುಕೊಳ್ಳಲು ಕೊಂಚ ಸಮಯ ನೀಡಿತು. ಆದರೆ ನಾಯಿಗಳು ತಕ್ಷಣ ಮರುಗುಂಪುಗಳಾಗಿ ಬೇಟೆಯ ಸುತ್ತ ವೃತ್ತಾಕಾರದಲ್ಲಿ ನಿಂತು ದಿಗಿಲುಗೊಳಿಸಿ ಮತ್ತೆ ಕರುವನ್ನು ಕೆಳಗೆ ಎಳೆಯ ತೊಡಗಿದವು.

ನಮ್ಮ ಲ್ಯಾಂಡ್ ರೋವರ್‌ನಲ್ಲಿ ಕುಳಿತು ನಾಟಕ ಮುಗಿಯಿತೆಂದುಕೊಂಡೆವು. ಆದರೆ ಆ ಘಟನೆಗಿಂತಲೂ ಮಿಗಿಲಾಗಿ ನಮ್ಮನ್ನು ಬೆರಗುಗೊಳಿಸುವಂತೆ ಆ ಗದ್ದಲದಿಂದ ಸ್ವಲ್ಪ ದೂರದಲ್ಲಿ ನಿಂತಿದ್ದ ಜೀಬ್ರಾಗಳ ಒಂದು ಗುಂಪು ನಾಗಾಲೋಟದಿಂದ ಮುನ್ನುಗ್ಗಿ ಸರಿಯಾಗಿ ಗುರಿಯಿಟ್ಟು ನಾಯಿಗಳಿಗೆ ಒದೆಯುತ್ತಾ, ಕಿರುಚುತ್ತಾ ಭಯಂಕರವಾಗಿ ಕಚ್ಚತೊಡಗಿದವು—ನಾಯಿಗಳು ಮತ್ತೆ ಚೆದರಿದವು—ಆ ಹೋರಾಟದ ಸಮಯ[...]ದಲ್ಲಿ ತಾಯಿ ಮತ್ತು ಕರು ಪಾರಾಗಿ ಕ್ಷೇಮ[...]ವಾಗಿ ತಮ್ಮ ಮಂದೆಯನ್ನು ಸೇರಿ[...]ಕೊಂಡವು.

ಗೆರಾಲ್ಡ್ ಮತ್ತು ನಾನು ಅಚ್ಚರಿ[...]ಗೊಂಡೆವು. ಪ್ರಕೃತಿಯಲ್ಲಿ ಸಾಮಾನ್ಯವಾಗಿ ಬೇರೆ ಬೇರೆ ಪ್ರಭೇಧಗಳು ಮತ್ತೊಂದನ್ನು ಕಾಪಾಡಲು ಮುನ್ನುಗ್ಗುವುದಿಲ್ಲ ಮತ್ತು ಅವುಗಳಿಗೆ ಪರಹಿತದ ವರ್ತನೆ ಸಂಪೂರ್ಣ[...]ವಾಗಿ ಪರಕೀಯ, ಅಲ್ಲದೆ ಅವನ್ನು ರಕ್ಷಿಸಲು ಜೀಬ್ರಾಗಳಿಗೆ ತಮ್ಮದೇ ಆದ ಸ್ವಂತ ಮ[...]ಗಳೂ ಸಹಾ ಇರಲಿಲ್ಲ ಹಾಗೂ ಕಾಡುನಾಯಿ[...]ಗಳಿಗೆ ಸಾಮಾನ್ಯವಾಗಿ ಅವು ಹೆದರುವುದು ಇಲ್ಲ.

ಬೇಟೆಯ ಪಾಠ :— ಮಾಲವಾ[...] ಅರಣ್ಯದ ಅತ್ಯಂತ ಭಯಂಕರ ಲೂಟಿಕೋ[...]ನೆಂದರೆ ಚಿರತೆ. ಬಳುಕುವ, ಶಕ್ತಿಯು[...]ವಾದ ಈ ಬೆಕ್ಕು ಆಫ್ರಿಕಾದ ಉಪ ಸಹಾರ[...] ಕಾಡಿನಲ್ಲೆಲ್ಲಾ ವಾಸಿಸುತ್ತದೆ. ಅದ[...] ಅಸಾಧಾರಣ ವೇಗ ಹಾಗೂ ಸಿಂಹದ ಗಾ[...] ಚಿರತೆಯ ನಮನೀಯತೆಯ ರಹಸ್ಯ.

ತಾನು ಬದುಕುಳಿಯುವುದಕ್ಕಾಗಿ ಚಿ[...] ದಟ್ಟ ಕಾಡಿನಿಂದ ಮರುಭೂಮಿಯವರೆ[...] ನಿರ್ಜನ ಪ್ರದೇಶದಿಂದ ಜನದಟ್ಟಣೆ[...] ನಗರದವರೆಗೆ ತನ್ನ ಬೇಟೆಯ ವಿಧಾನವನ್ನು ಬದಲಾಯಿಸುತ್ತದೆ. ಅಲ್ಲದೆ ಅದು ಬೇ[...] ಬೇರೆ ಪ್ರಾಣಿಗಳನ್ನು ಕೊಲ್ಲಲು ಬೇರೆ ಬೇ[...] ವ್ಯೂಹವನ್ನು ರಚಿಸುತ್ತದೆ. ಮನುಷ್ಯ ಮತ್ತು ಇತರ ಲೂಟಿಕೋರರಿಂದ ತನ್ನ ಬೇಟೆ[...] ಸಂಪತ್ತನ್ನು ಸಂರಕ್ಷಿಸಲು ಮರಗಳಲ್ಲಿ[...]ತ್ತದೆ.

೧೯೬೦ ರ ಜೂನ್ ತಿಂಗಳ ಒಂದು ಬೆಳಿಗ್ಗೆ ತನ್ನ ಹೊಚ್ಚ ಹೊಸ ಕ್ಯಾಮರಾದೊಂದಿಗೆ ಗೆರಾಲ್ಡ್ ಮತ್ತು ನಾನು ಮ್ಲೊವತಿ ಎಂಬ ೧೯ ತಿಂಗಳು ಗಂಡು ಚಿರತೆ ಸ್ಯಾಂಡ್ ನದಿಯು ದಟ್ಟ ಪೊದೆಯೊಳಗೆ ಚಲಿಸುತ್ತಿದ್ದಂತೆ ಅದನ್ನು ನಾವು ಹಿಂಬಾಲಿಸ ತೊಡಗಿದೆವು. ಕೇವಲ ಐದು ತಿಂಗಳ ಹಿಂದಷ್ಟೇ ಅದು ತನ್ನ ತಾಯಿಯಿಂದ ಬೇರ್ಪಟ್ಟಿತ್ತು ಹಾಗೂ ತನ್ನ ಬೇಟೆಯನ್ನು ತಾನೇ ಸ್ವತಂತ್ರವಾಗಿ ಬೇಟೆಯಾಡುವಷ್ಟು ಶಕ್ತಿಯುತವಾಗಿತ್ತು.

'ಕಿರ್-ಕಿರ್-ಕಿರ್-ಕಿರ್' ನದಿಯು ಪಕ್ಕದ ಮರಗಳಿಂದ ವೆರ್ವೆಟ್ ಜಾತಿಯು ಕೋತಿಗಳ ಆರ್ತನಾದ ಕೇಳಿಸಿತು. ಕೋತಿಗಳ ಹಿಂಡು ರೆಂಬೆಯಿಂದ ರೆಂಬೆಗೆ ಜಿಗಿಯುತ್ತಾ ಚಿರತೆಯಿಂದ ತಪ್ಪಿಸಿಕೊಳ್ಳಲು ದಟ್ಟವಾದ ಪೊದೆಯು ಕಡೆಗೆ ಆತುರಾತುರವಾಗಿ ಜಿಗಿದವು.

ಆ ಚಿರತೆ ಕ್ರಮವಾಗಿ ಬರುವ ಸಾಕಷ್ಟು ವಾಹನಗಳನ್ನು ನೋಡಿದ್ದುದರಿಂದ ಅದು ನಮ್ಮತ್ತ ಅಷ್ಟು ಗಮನ ಹರಿಸಲಿಲ್ಲ. ನಾವು ಬಹಳ ಕೌತುಕದಿಂದ ಚಿರತೆ ಹೇಗೆ ಬೇಟೆಯಾಡುತ್ತದೆಂದು ಕಣ್ಣಾರೆ ಕಾಣಲು ಬಹಳ ಉತ್ಸುಕರಾಗಿ ಸಾಧ್ಯವಾದಷ್ಟು ಅದರ ಹತ್ತಿರದಲ್ಲಿಯೇ ಇದ್ದೆವು.

ಒಂದು ಜಿಂಕೆ ದೃಷ್ಟಿಗೆ ಗೋಚರಿಸಿತು. ಮ್ಲೋವತಿ ಗಂಡು ಚಿರತೆ ಸರ್ರನೆ ಮರದಿಂದ ಕೆಳಗಿಳಿಯಿತು. ಆದರೆ ತಕ್ಷಣ ಅದರ ಬೇಟೆ ಅರಣ್ಯದ ಕಮರಿಯಲ್ಲಿ ಕರಗಿ ಹೋಯಿತು. ಕತ್ತಲಾಯಿತು. ದಟ್ಟ ಪೊದೆಗಳಿಂದ ಆಚೆ ಬರುತ್ತಲೇ ಚಿರತೆ ಕ್ಷಣಕಾಲ ...ಂತು ಸಿಂಹಗಳು ಅಥವಾ ಕತ್ತೆ ಕಿರುಬಗಳು ಆ ಸ್ಥಳದಲ್ಲಿ ಇಲ್ಲವೆಂದು ಖಚಿತಪಡಿಸಿಕೊಂಡು ಬಯಲನ್ನು ದಾಟಿ ಮತ್ತೆ ದಟ್ಟವಾದ ಅರಣ್ಯಕ್ಕೆ ಪ್ರವೇಶಿಸಿತು. ನಾವು ಸಹಾ ಅದನ್ನು ಹಿಂಬಾಲಿಸಿದೆವು. ಒಂದು ದೊಡ್ಡ ಕಾಡುಹಂದಿ ಎದುರಾಯಿತು. ಕೂಡಲೇ ಚಿರತೆ ಅದನ್ನು ಬೆನ್ನಟ್ಟಿ ಬೆನ್ನ ಮೇಲೆ ಹಾರಿತು. ಹಂದಿಯು ತಲೆ ಲೂಟಿಕೋರನ ಕೋರೆಗಳ ನಡುವೆ ಸಿಲುಕಿತು. ಎರಡೂ ಭಯಂಕರವಾಗಿ ೨೫ ನಿಮಿಷಗಳ ಕಾಲ ಸತತವಾಗಿ ಹೋರಾಡಿದವು. ನಂತರ ಚಿರತೆ ಚಾಕಚಕ್ಯತೆಯಿಂದ ಅದರ ತಲೆಯನ್ನು ಬಿಟ್ಟು ಅದರ ಗಂಟಲನ್ನು ಹಿಡಿದು ರಕ್ತ ಹೀರಿ ಸಂಪೂರ್ಣವಾಗಿ ಅದರ ಬೇಟೆಯು ಹೋರಾಟವನ್ನು ನಿಶ್ಯಕ್ತಗೊಳಿಸಿತು.

ಅದರ ಸತ್ವವನ್ನೆಲ್ಲಾ ಹೀರಿದ ಮೇಲೆ ಅದರ ಮಾಂಸವನ್ನು ತಿನ್ನಲು ಸ್ವಲ್ಪಕಾಲ ವಿರಮಿಸಿತು. ಸಾಕಷ್ಟು ಅನುಭವವಿಲ್ಲದೇ ಮ್ಲೋವತಿ ಗಂಡು ಚಿರತೆ ಶಕ್ತಿಮೀರಿ ದೊಡ್ಡ ಬೇಟೆಯಾಡಿ ಹಂದಿಯನ್ನು ಚೂರು ಚೂರಾಗಿ ಹರಿದುಹಾಕಿತು. ಅವೆರಡರ ನಡುವಿನ ಹೋರಾಟ ದೀರ್ಘ ಹಾಗೂ ಭಯಂಕರವಾಗಿತ್ತು. ತನ್ನ ಮಹತ್ವಾಕಾಂಕ್ಷೆಯ ಬೇಟೆಯ ನಂತರ ಚಿರತೆ ಬಹಳ ಖುಷಿಪಟ್ಟಿರಬಹುದೆಂದು ಲೆಕ್ಕ ಹಾಕಿದ್ದೆವು.

ಆದರೆ ಹಾಗಾಗಲಿಲ್ಲ. ಅದು ಕೆಲವೇ ಕೆಲವು ನಿಮಿಷ ಮಾತ್ರ ವಿಶ್ರಾಂತಿ ಪಡೆದ ನಂತರ ಇದ್ದಕ್ಕಿದ್ದ ಹಾಗೆ ಎದ್ದು ನಿಂತು ಕತ್ತಲೆಡೆಗೆ ದಿಟ್ಟಿಸಿ ನೋಡುತ್ತಾ ಓಡಿ ಹೋಯಿತು. ಹಂದಿ ಹಾಗು ಚಿರತೆಯ ಹೋರಾಟದ ಗದ್ದಲ ಕೇಳಿ ಜಾಗೃತಗೊಂಡ ಒಂಭತ್ತು ಸಿಂಹಗಳು ಹಂದಿಯ ಮೇಲಿನ ತಮ್ಮ ಹಕ್ಕು ಸ್ಥಾಪಿಸಲು ಧಾವಿಸಿ ಬಂದು

ನಮ್ಮ ವಾಹನದ ಲೈಟಿನ ಹತ್ತಿರ ಬಂದು ನಿಂತಿದ್ದನ್ನು ಕಂಡು ಮೈ ಜುಮ್ಮೆಂದಿತು. ಪಾಪ, ಮ್ಲೋವತಿ ಆ ರಾತ್ರಿ ಊಟದಿಂದ ವಂಚಿತವಾಯಿತು. ಆದರೆ ಅದು ಆ ದಿನ ಮರೆಯಲಾಗದ ಪಾಠ ಕಲಿಯಿತು.

ಮಧ್ಯ ಪ್ರವೇಶ :—೧೯೯೦ರ ಪ್ರಾರಂಭದಲ್ಲಿ ನಾವು ಮತ್ಸಪಿರಿ ನದಿಯ ಹತ್ತಿರ ತನ್ನ ಮೂರು ಮರಿಗಳೊಂದಿಗಿದ್ದ ಭವ್ಯವಾದ ಒಂದು ಹೆಣ್ಣು ಚಿರತೆಯನ್ನು ನೋಡಿ ಅದು ರಾಜನೆಂದು ದೃಢಪಡಿಸಿಕೊಂಡೆವು. ಭವ್ಯವಾದ ಚಿರತೆ—ರಾಜ ಇತರ ಸಾಧಾರಾಣ ಚಿರತೆಗಳಿಗಿಂತ ಭಿನ್ನವಾಗಿರುತ್ತದೆ ಹೇಗೆಂದರೆ ಇವು ಬಹಳ ಉದ್ದವಾಗಿದ್ದು ಹೃದಯಾಕಾರದ ಚಾಕೋಲೆಟ್ ಬಣ್ಣದ ಮಚ್ಚೆಗಳು ಹಾಗು ಅದರ ದೇಹದಿಂದ ಬಾಲದವರೆಗೂ ಅಗಲವಾದ ಕಪ್ಪು ಪಟ್ಟಿಗಳು ಇರುತ್ತವೆ. ಜತೆಗೆ ಒಳಗಣ್ಣಿನಿಂದ ಕಪ್ಪು ತುಟಿಯ ತುದಿಯವರೆಗೂ ಹರಿದ ಕಣ್ಣೀರಿನ ಗುರುತು ಇರುತ್ತದೆ. ಅದರ ಬಗ್ಗೆ ಇನ್ನೂ ಹೆಚ್ಚು ತಿಳಿಯುವುದಕ್ಕಾಗಿ ಅದಕ್ಕೆ ಸುಮಾರು ೧೫ ಮೀಟರುಗಳಷ್ಟು ಹತ್ತಿರದವರೆಗೂ ನಮ್ಮ ವಾಹನವನ್ನು ನಡೆಸಿದೆವು.

ಮರಿಗಳಿಗೆ ಸುಮಾರು ೧೬ ತಿಂಗಳುಗಳಾಗುವವರೆವಿಗೂ ಅವುಗಳಿಗೆ ಧಕ್ಕೆಯಾಗದಂತೆ ತಾಯಿ ಕಾಪಾಡುತ್ತದೆ. ನಂತರ ಇದ್ದಕ್ಕಿದ್ದ ಹಾಗೆ ತಮ್ಮನ್ನು ತಾವೇ ರಕ್ಷಿಸಿಕೊಳ್ಳುವಂತೆ ಮರಿಗಳನ್ನು ತಾಯಿ ಬಿಟ್ಟು ದೂರ ಹೊರಟು ಹೋಗುತ್ತದೆ.


ಒಂದು ಸಣ್ಣ ಹೆಣ್ಣು ಮರಿಗೆ ಕತ್ತೆಕಿರುಬ ಕಚ್ಚಿದುದರಿಂದ ಕಾಲಿಗೆ ಗಾಯವಾಗಿ ಅದು ಕುಂಟಲಾರಂಭಿಸಿತು. ಕೆಲವು ವೇಳೆ ಈ ಗಾಯಗಳಿಂದ ಸಾವೂ ಸಹಾ ಸಂಭವಿಸುತ್ತದೆ. ಆದ್ದರಿಂದ ಪ್ರಾಣಿಗಳ ಜೀವನಕ್ಕೆ ಅಡ್ಡಿಪಡಿಸದಿರುವ ನಮ್ಮ ನಿಯಮವನ್ನು ಸ್ವಲ್ಪ ಸಡಿಲಗೊಳಿಸಿದೆವು. ಚಿರತೆ–ರಾಜನ ಅಪರೂಪತೆ ಹಾಗು ಬೇಟೆಯ ಕ್ರಮವನ್ನು ಮರಿಗಳು ಇನ್ನೂ ಕಲಿಯಬೇಕಿತ್ತು. ಆದ್ದರಿಂದ ನಾವು ಅದನ್ನು ಸ್ವಾಸ್ಥ್ಯಗೊಳಿಸಲು ತೀರ್ಮಾನಿಸಿ ಅದನ್ನು ಹಿಡಿದು ಸಮೀಪದ ಕ್ರೂಗರ್ ರಾಷ್ಟ್ರೀಯ ಅರಣ್ಯದ ಸ್ಕುಕೂಜಾ ಕ್ಯಾಂಪಿಗೆ ಕರೆದೊಯ್ದೆವು. ಹತ್ತು ದಿನಗಳ ತರುವಾಯ ಅದು ಮತ್ತೆ ಕಾಡಿಗೆ ಹಿಂತಿರುಗಲು ಶಕ್ತಿಯುತವಾಯಿತು.

ಆ ಮರಿ ತನ್ನ ಕುಟುಂಬದವರ ಜತೆ ಮತ್ತೆ ಸೇರುವುದೆಂಬ ನಂಬಿಕೆಯಿಂದ ನಾವು ಸತತವಾಗಿ ಎಂಟು ದಿನಗಳವರೆಗೆ ಅದರ ಕುಟುಂಬವನ್ನು ಹುಡುಕಿದೆವು. ಅಂತಿಮವಾಗಿ ಸ್ನ್ಯಾಪಿನ್ ನದಿಯ ಹತ್ತಿರ ಒಂದು ದೊಡ್ಡ ಬೇಟೆಯನ್ನು ಕೊಂದಿದ್ದುದರ ಸಮೀಪ ಅವುಗಳು ಇದ್ದುದನ್ನು ನಮ್ಮ ಮಾರ್ಗದರ್ಶಿಗಳು ಗುರುತಿಸಿದರು. ಬಹಳ ಸಮಯದಿಂದ ಅವುಗಳು ಅಲ್ಲಿಯೇ ಇದ್ದಂತಿದ್ದವು. ನಾವು ಕೂಡಲೇ ಹಿಂದಿರುಗಿ ನಮ್ಮ ಮರಿ ರೋಗಿಯನ್ನು ಕ್ರೇಟಿನಲ್ಲಿಟ್ಟು ಮಾಲಮಾಲ ಪ್ರಾಂತ್ಯವನ್ನು ವೇಗವಾಗಿ ೧ ಗಂಟೆಯೊಳಗೆ ತಲುಪಿದೆವು. ವಾಹನದ ಬಾಗಿಲು ತೆರೆಯಿತು. ಚಿರತೆಯ ಮರಿ ಪೊದೆ ತಲುಪುವವರೆವಿಗೂ ಬಹಳ ಪ್ರಯಾಸದಿಂದ ಹೆಜ್ಜೆಗಳನ್ನಿಡುತ್ತಾ ನಡೆಯಿತು. ಅದು ತನ್ನವರನ್ನು ಮತ್ತೆ ಸೇರುವ ತವಕದಿಂದ ಗಟ್ಟಿಯಾಗಿ ಕಿರುಚುತ್ತಿತ್ತು. ನಮಗೆ ಬಹಳ ಯೋಚನೆಯಾಗಿತ್ತು. ಅದರ ಕುಟುಂಬ ಈ ಮರಿಯನ್ನು ತಿರಸ್ಕರಿಸಬಹುದೆಂದು.

ಮೂರನೆಯ ದಿನ ನಮ್ಮ ಭಯ ನಿವಾರಣೆಯಾಯಿತು. ನಾವೆಲ್ಲರೂ ಆಗತಾನೇ ಕೊಂದಿದ್ದ ಜಿಂಕೆಯನ್ನು ತಿನ್ನುತ್ತಿದ್ದ ಮೂರು ಮರಿಗಳನ್ನು ನೋಡಿದೆವು. ಏಕೆಂದರೆ ೧೯೬೨ರ ವಸಂತ ಋತುವಿನಲ್ಲಿ ಮೂಲಮೂಲದ ರೇಂಜರ್‌ಗಳು ಯೌವನದಿಂದ ತುಂಬಿ ತುಳುಕುತ್ತಿದ್ದ ರಾಜ-ಹೆಣ್ಣು ಸಿರತೆ ತನ್ನ ಎರಡು ಪುಟ್ಟ ಮರಿಗಳೊಂದಿಗಿದ್ದುದನ್ನು ಕಂಡಿದ್ದರು.

ಪ್ರಾಣಿಗಳ ಜೀವನದಲ್ಲಿ ಮಧ್ಯಪ್ರವೇಶಿಸುವ ನಮ್ಮ ಮೊಟ್ಟಮೊದಲ ಪ್ರಯತ್ನ ಫಲಿಸಿತು. ಮೂಲ ಮೂಲ ಅಭಯಾರಣ್ಯಕ್ಕೆ ಬರುವ ಪ್ರವಾಸಿಗರು ಪ್ರಾಣಿಗಳನ್ನು ನೋಡಿ ಹೆಚ್ಚು ಸಂತೋಷ ಪಡುವುದಕ್ಕೆ ಬದಲಾಗಿ ಉದ್ರೇಕಗೊಳಿಸುವ, ಮುದಗೊಳಿಸುವ ಮತ್ತು ಪ್ರಶಾಂತತೆಯ ಛಾಯೆಯನ್ನು ಬಿಂಬಿಸುವ ಆಫ್ರಿಕಾದ ಕಾಡನ್ನು ಮಾತ್ರ ನೋಡಿ ಆನಂದಿಸಬಹುದು.

೩೦೦ ವರ್ಷಗಳ ಹಿಂದೆ ಇದ್ದುದಕ್ಕಿಂತ ಈಗ ಕೇವಲ ಶೇಕಡ ಒಂದರಷ್ಟು ಪ್ರಾಣಿಗಳು ಮಾತ್ರ ಆಫ್ರಿಕಾದಲ್ಲಿ ಇಂದು ಬದುಕುಳಿದಿವೆ. ಮೂಲಮೂಲಾದ ಪಾಠವನ್ನು ನಾವು ಕಲಿಯುವುದಾದರೆ— ಪ್ರಪಂಚದ ರಾಷ್ಟ್ರಗಳು ಒಂದು ವೇಳೆ ಈ ಸ್ವಾಭಾವಿಕ ಸಂಪತ್ತನ್ನು ರಕ್ಷಿಸುವುದಾದರೆ —ಅವುಗಳು ತಮ್ಮ ಸಂತಾನವನ್ನು ವೃದ್ಧಿಗೊಳಿಸುತ್ತವೆಂದು ನಾವು ಭರವಸೆ ಇಡಬಹುದು.



ಅನಕ್ಷರಸ್ಥರು ಯಾವ ರಾಜಕೀಯ ಪಕ್ಷಕ್ಕೂ ಸೇರಿದವರಲ್ಲ ;
ಅವರಿಗೆ ಮೊದಲು ಅಕ್ಷರ ಕಲಿಸಬೇಕು.

—ಲೆನಿನ್

ವಿ. ಸೀ—ಒಂದು ಸ್ಮರಣೆ

ಡಾ|| ಕೆ. ಶ್ರೀಕಂಠಯ್ಯ
೪೯೩, ಜಯನಗರ
೧ ನೇ ಬ್ಲಾಕ್
ಬೆಂಗಳೂರು–೧೧

ಮಣಿಯದಿಹ ಮನವೊಂದು |
ಸಾಧಿಸುವ ಹಠವೊಂದು |
ನಿಜದ ನೇರಕೆ ನಡೆವ ನಿಶ್ಚಲತೆಯೊಂದು |
ಅನ್ಯಾಯಕೆಂದೆಂದು ಬಾಗದೆಚ್ಚರವೊಂದು |
ಮರುಕಕ್ಕೆ ಪ್ರೇಮಕ್ಕೆ ಚಿರತರೆದ ಎದೆಯೊಂದು |

ನನ್ನ ಪ್ರಿಯ ಗುರುಗಳಾದ ವಿ. ಸೀ ಅವರ ಅಭೀ: ಗೀತೆಯಲ್ಲಿ ಬರುವ ಈ ಪದ್ಯ ಚರಣಗಳು ಗುರುಗಳಷ್ಟೇ ಪ್ರಿಯವಾಗಿ, ನನ್ನ ಬಾಳಿನುದ್ದಕ್ಕೂ ಬೆಳಕು ಬೀರುತ್ತಾ ಮನುಷ್ಯ ಬಾಳಿದರೆ ಹೀಗೆ ಮೌಲ್ಯಾಧಾರಿತ ಬಾಳನ್ನು ಬಾಳಬೇಕು ಜೀವನವನ್ನು ಸಾರ್ಥಕಗೊಳಿಸಬೇಕು ಎಂಬ ಸಂದೇಶವನ್ನು ಸಾರುತ್ತ ಬಂದಿದೆ ಬದುಕಿಗೆ ಅಗತ್ಯವಾದ ಧೈರ್ಯ ಹಾಗೂ ನಿರ್ಭಯತೆಯನ್ನು ಈ ಪೌರುಷ ಪ್ರಧಾನವಾದ ನಿಲುವು ಎತ್ತಿ ಹಿಡಿಯುತ್ತದೆ.

ಇಂಥ ಒಂದು ಅರ್ಥವತ್ತಾದ ಗೀತೆಯನ್ನು ಇನ್ನೂ ನೂರಾರು ಸುಂದರ ಗೀತಸುಮಗಳನ್ನು ನೀಡಿ ಸಾರ್ಥಕ ಬಾಳನ್ನು ಬಾಳಿದ ವಿ. ಸೀ ಯವರ ಶಿಷ್ಯನಾಗುವ ಭಾಗ್ಯ ನನಗೆ ೪೦–೫೦ ರ ದಶಕದಲ್ಲಿ ದೊರೆತಿತ್ತು. 'ಕರ್ಣಾಟಕ ಕಾದಂಬರಿ' 'ಶಾಕುಂತಲ ನಾಟಕ'ಗಳಂಥ ಕೃತಿರತ್ನಗಳ ಮೇಲಿನ ವಿವರಣೆ ವ್ಯಾಖ್ಯಾನಗಳನ್ನು ನೆನೆವರೆ, ಮೈರೋಮಾಂಚನವಾಗುತ್ತದೆ. ಶಾಕುಂತಲ ನಾಟಕದಲ್ಲಿ ಬರುವ ಶಕುಂತಲೆಯ ದೇಹಸೌಂದರ್ಯ ಮೈಮಾಟದ ವರ್ಣನೆಯನ್ನು ಕುರಿತ ಮುಂಗಡೆಯುಬ್ಬಾಗಿ, ನಿತಂಬಗಳಗೌರವದೆಪಿಂದೆತಗ್ಗಾಗಿ, ಕರಂಗೊಳಿಪುದು ಕುರಂಗಾಕ್ಷಿಯ ಪೊಸಪೆಜ್ಜೆ ಮಳಲೋಳ್! ಎಂಬ ಕವಿ ಕಾಳಿದಾಸನ ವರ್ಣನೆಯನ್ನು ಚಿತ್ರಿಸಲು ನಮ್ಮ ಗುರುಗಳಿಗೆ ಕನ್ನಡ ಸಾಕಾಗದೆ ಅಮೋಘವಾದ ಇಂಗ್ಲಿಷಿನಲ್ಲಿ ರಸ ರೋಮಾಂಚಕ ವರ್ಣನೆಯನ್ನು ನೀಡಿ ನಮ್ಮಂಥ ಜವ್ವನಿಗರನ್ನೆಲ್ಲಾ ಮೂಕ ವಿಸ್ಮಿತರನ್ನಾಗಿಸಿದ್ದರು!

ವಿ. ಸೀ ಯವರ ಪಾಠದಲ್ಲಿ ಮೂಗಿಗಿಂತ ಮೂಗುತಿ ಭಾರ' ಅನ್ನುವಂತೆ, ಪಾಠಕ್ಕಿಂತ ಅನ್ಯ ವಿಷಯಗಳ ವಿಚಾರವೇ ಹೆಚ್ಚಾ ಮೂಡಿಬರುತ್ತೆ ಹಾಗೂ ವಿ. ಸೀ ಯವ ಕನ್ನಡ ಪಾಠ ಅವರು ಇಂಗ್ಲಿಷಿನ ಮಾಡಿದಾಗ ಬಹಳ ಚೆನ್ನಾಗಿರುತ್ತೆ ಎಂ

ಮಾತು ಆಗಿನ ವಿದ್ಯಾರ್ಥಿಗಳಲ್ಲಿ ಬಹಳವಾಗಿ ಕೇಳಿಬರುತ್ತಿತ್ತು, ಹಲವಾರು ಸಂದರ್ಭಗಳಲ್ಲಿ ನಾನು ವಿ. ಸೀ ಯವರ ಮನೆಗೆ ಕಾರ್ಯಾರ್ಥವಾಗಿ ಹೋಗಿಬರುತ್ತಿದ್ದೆ.ಒಮ್ಮೆ ನನ್ನ ಪಿಎಚ್.ಡಿ. ನಿಬಂಧದ ಬಗೆಗೆ ಅವರ ಅನಿಸಿಕೆ ಬರೆದುಕೊಡಲು ಬೇಡಿದೆ. ಅವರು ಪುಸ್ತಕವನ್ನೆಲ್ಲಾ ತಿರುವಿಹಾಕಿ, 'ನನ್ನ ಕೈಯಲ್ಲಿ ಬರೆಯಲಾಗುತ್ತಿಲ್ಲಪ್ಪ. ತಾವು ಬರೆದುಕೊಳ್ಳುವುದಾದರೆ ಹೇಳುತ್ತೇನೆ' ಎಂದರು.ನನಗೆ ಅದು ತೀರ ಸಂಕೋಚವಾಗಿ ಅವರಿಗೆ ಶ್ರಮ ಕೊಡುವುದನ್ನು ತಪ್ಪಿಸಿದೆ. ಆಗಲೆ ಅವರು ನೀವು—ವಿಜಯನಗರಕಾಲದ ಮೇಲೆ ಕೆಲಸ ಮಾಡಿದ್ದೀರಿ, ನಮ್ಮ ಕವಿಕಾವ್ಯ ಪರಂಪರೆಗೆ ಕನಕದಾಸರ ಕೃತಿಗಳ ಮೇಲೆ ಬರೆದುಕೊಟ್ಟರೆ ಉಪಕಾರವಾಗುತ್ತೆ ಎಂದರು. ಅವರ ಅಪೇಕ್ಷೆಯಂತೆ ಬರೆದುಕೊಟ್ಟೆ.

ವಿ. ಸೀ. ಎಂಬ ಕಾವ್ಯನಾಮದಿಂದಲೇ ಕನ್ನಡ ಸಾರಸ್ವತಲೋಕಕ್ಕೆ ಪರಿಚಿತರಾದ ವಿ. ಸೀತಾರಾಮಯ್ಯನವರು ಅಸಂಖ್ಯಾತ ವಿದ್ಯಾರ್ಥಿಗಳಿಗೆ ಕಾಲೇಜಿನಲ್ಲಿ ಕನ್ನಡದಲ್ಲಿ ಹತ್ತಾರು ಚಿರಂತನ ಕೃತಿಗಳನ್ನು ರಚಿಸಿದ್ದರೂ ಅವರ ಮೊದಲಿನ ಕಾರ್ಯಕ್ಷೇತ್ರ ಅರ್ಥಶಾಸ್ತ್ರ! ಅಕ್ಕಿ ಬೇಳೆಗೆ ಪರದಾಟವಾದರೂ ಲಂಡನ್ನಿನಿಂದ 'ಎಕಾನಮಿಸ್ಟ್' ಪತ್ರಿಕೆಯ ಏರ್‌ಮೇಲ್ ಆವೃತ್ತಿಯನ್ನು ತರಿಸುವುದನ್ನು ವಿ. ಸೀ. ನಿಲ್ಲಿಸರು. ಭಾರತೀಯ ಪತ್ರಿಕೆಗಳ ಜೊತೆಗೆ 'ಲಿಸ್ನರ್' ಟೈಂಸ್ ಲಿಟರರಿ ಸಪ್ಲಿಮೆಂಟ್, ನ್ಯೂ ಸ್ಟೇಟ್ಸ್‌ಮನ್' ಇವೆಲ್ಲಾ ವಿ.ಸೀ. ಅವರಿಗೆ ಉಚ್ಛ್ವಾಸ ನಿಶ್ವಾಸಗಳಿದ್ದಂತೆ ಪರಮಾಗತ್ಯಗಳು' ಎಂದು ಅವರನ್ನು ನಿಕಟವಾಗಿ ಬಲ್ಲ ಮಿತ್ರರು ಹೇಳುತ್ತಾರೆ. ವಿ. ಸೀ. ಯವರು ಎಕನಾಮಿಕ್ಸ್ ಅರ್ಥಾತ್ ಅರ್ಥಶಾಸ್ತ್ರದಲ್ಲಿ ಪದಕವಿಜೇತರು. ಅರ್ಥಶಾಸ್ತ್ರದಲ್ಲಿ ಅವರ ಪರಿಣತಿಯ ದ್ಯೋತಕವಾಗಿ ಕನ್ನಡದಲ್ಲಿ ಅವರು ಬರೆದ 'ಹಣ ಪ್ರಪಂಚ' ಎಂಬ ಬೃಹತ್ ವೈಚಾರಿಕ ಗ್ರಂಥವೇ ಸಾಕ್ಷಿ. ಅವರ ಮನೆಗೆ ಹೋಗಿ ಅಧ್ಯಯನ ಮಂದಿರವನ್ನು ನೋಡಿದರೆ ಅಲ್ಲಿ ಅವರು ಅರ್ಥಶಾಸ್ತ್ರದ ಬಗೆಗೆ ಸಂಗ್ರಹಿಸಿದ್ದ ಅಪೂರ್ವ ಗ್ರಂಥಗಳು ಜರ್ನಲ್‌ಗಳನ್ನು ನೋಡಬಹುದಾಗಿತ್ತು.

ಒಮ್ಮೆ ಯಾವುದೋ ಊರಿಗೆ ಹೋಗಿ ವಿ. ಸೀ. ಯವರು ದೇಶದ ಸಂಪದಭಿವೃದ್ಧಿಯನ್ನು ಕುರಿತು ಭರ್ಜರಿಯಾಗಿ ಭಾಷಣ ಮಾಡಿದರು. ಅವರ ತತ್ವ ಪ್ರಣಾಳಿಕೆಯಲ್ಲಿ ಕೋಟಿ ಅರ್ಬುದ ನೈರ್ಬುದಗಳಷ್ಟು ಹಣ ಲೀಲಾಜಾಲವಾಗಿ ಸುಳಿದಾಡಿತು. 'ಒಂದು ದೇಶದ ಆಧುನೀಕರಣಕ್ಕೆ ಒಂದೆರಡು ಬಿಲಿಯನ್ ರೂಪಾಯಿ ಏನುಮಹಾ?' ಎಂದೆಲ್ಲ ವಾದ ಮಾಡಿದರು. ಉಪನ್ಯಾಸವಾದ ಮೇಲೆ ವಿ. ಸೀ. ಯವರನ್ನು ಪಕ್ಕದಲ್ಲಿದ್ದ ಎನ್.ಎಸ್.ಸುಬ್ಬರಾಯರೋ ಬಿ.ಎಂ. ಶ್ರೀಕಂಠಯ್ಯನವರೋ ಕೇಳಿದರು. 'ಉದ್ದುದ್ದ ಮಾತನ್ನೇನೋ ಆಡಿದಿರಿ. ಈಗ ನಿಮ್ಮ ಜೇಬಿನಲ್ಲಿ ಎಷ್ಟು ಹಣ ಇದೆ?' ಆಗ ವಿ. ಸೀ. 'ನೀವು ದಯಮಾಡಿ ಬಸ್ ಛಾರ್ಜು ಕೊಟ್ಟರೆ ವಾಪಸ್ ಮನೆ ಸೇರಿಕೊಳ್ಳುತ್ತೇನೆ' ಎಂದರು. ಇದು ವಿ. ಸೀ. ಯವರ ಹಣ ಪ್ರಪಂಚ ಎಂದು ಈ ಪ್ರಸಂಗವನ್ನು ಅವರ ಆತ್ಮೀಯರು ಸ್ಮರಿಸುತ್ತಾರೆ.

ವಿ. ಸೀ. ಯವರು ರುಮಾಲು ಪಂಚೆಗಳ ವಿಷಯದಲ್ಲಿ ಹೇಗೋ ಉಳಿದ ವಿಷಯ

ಗಳಲ್ಲೂ ಹಾಗೆಯೇ ನಸನಸೆ. ಅವರು ಹೋಟೆಲ್‌ನಲ್ಲಿ ಆರ್ಡರ್ ಮಾಡಬೇಕಾದರೆ ಸಪ್ಲೆಯರ್‌ಗೆ ಕೊಡುವ ನಿರ್ದೇಶನ, 'ನೋಡಪ್ಪಾ ಎರಡು ಮಸಾಲೆ ದೋಸೆ. ಬೆಣ್ಣೆ ಹಾಕಬೇಕು ಅಂತ ಹೇಳು, ಚೆನ್ನಾಗಿ ರೋಸ್ಟ್ ಆಗಿರಲಿ. ದೋಸೆಯ ತುದಿ ಕೆಂಪಗೆ ಆಗಬೇಕು.' ಇದನ್ನು ಹಲವು ಸಲ ನೋಡಿದ ಡಿವಿಜಿ ಒಮ್ಮೆ 'ಅವನು ಎಲ್ಲರಿಗೂ ಮಾಡುವುದನ್ನೇ ನಿಮಗೂ ಮಾಡುತ್ತಾನೆ. ಸೀತಾರಾಮಯ್ಯ ಯಾಕೆ ಯೋಚನೆ ಮಾಡುತ್ತೀರಿ ಎಂದರು.

ಶ್ರೀ ಪಿ. ಶ್ರೀನಿವಾಸರಾಯರೂ ವಿ. ಸೀ. ಅವರೂ ಅನೇಕ ವರ್ಷಕಾಲ ಸಿನಿಮಾ ನಾಟಕ ಹೋಟಲುಗಳಿಗೆ ಒಟ್ಟಿಗೆ ಹೋಗುತಿದ್ದರು. ಒಮ್ಮೆ ಇಬ್ಬರೂ ಪಾಶ್ಚಾತ್ಯ ರೀತಿಯ ಹೋಟೆಲೊಂದಕ್ಕೆ ಹೋದರು. ಮಸಾಲೆ ದೋಸೆ ಬರಲು ವಿ.ಸೀ. ಯವರು ಮೊದಲು ತಿಂದು ಮುಗಿಸಿದರು. ಶ್ರೀನಿವಾಸ ರಾಯರು ತಿನ್ನಲಾರಂಭಿಸುವಾಗ ದೋಸೆಗೆ ಸೆಲೋಪಿನಂಥ ಅತಿಸೂಕ್ಷ್ಮ ತೆಳು ಕಾಗದ ಒಂದು ಇದ್ದು ಅದನ್ನು ಚಾಕುವಿನಿಂದ ಬಿಡಿಸಿ ದೋಸೆಯನ್ನು ತಿನ್ನತೊಡಗಿದರು. ವಿ. ಸೀ. 'ಏನಿದು ಶ್ರೀನಿವಾಸರಾವ್'? ಎನ್ನಲು 'ತೆಳು ಕಾಗದದ ಕವರಿಂಗ್ ಇತ್ತು ಸೀತಾರಾಮಯ್ಯ ಅದನ್ನು ತೆಗೆದಿಟ್ಟೆ ಅಷ್ಟೆ' ಎಂದರು. 'ಅಯ್ಯೋ ನಾನು ನೋಡಲೇ ಇಲ್ಲವಲ್ಲಾ! ಅದರ ಸಮೇತ ದೋಸೆಯನ್ನು ತಿಂದು ಬಿಟ್ಟೆನಲ್ಲಾ 'ಎಂದು ಕಾಗದ ಹೊಟ್ಟೆಗೆ ಸೇರಿತೆಂಬುದಕ್ಕಿಂತ ತಾವು ಕಾಗದದ ಸಮೇತ ತಿಂದುದನ್ನು ನೋಡಿದ ಇತರರು ಏನೆಂದು ಕೊಂಡಿದ್ದಾರು ಎಂಬುದು ಅವರಿಗೆ ಹೆಚ್ಚು ಚಿಂತೆಗೆ ಕಾರಣವಾಯಿತು.

ವಿ. ಸೀ. ಅವರ ಗ್ರಂಥಗಳನ್ನು ಪ್ರಕಟಣೆ ಮಾಡಿದವರು ಅವರಿಗೆ ಒಂದು ಪ್ರತಿಯನ್ನು ಕಳುಹಿಸದಿರುವ ಸಂದರ್ಭಗಳೂ ಉಂಟು. ಸರ್ಕಾರದ ಯಾವುದೋ ಇಲಾಖೆ ವಿ. ಸೀ. ಯವರಿಂದ ಗ್ರಂಥವೊಂದನ್ನು ಬರೆಯಿಸಿತು. ಮೂರು ನಾಲ್ಕು ವರ್ಷಗಳಾದ ಮೇಲೆ ಬಳೇಪೇಟೆಯ ಯಾವುದೋ ಒಂದು ಅಂಗಡಿಯಲ್ಲಿ ಪ್ರತಿಗಳನ್ನು ನೋಡಿದಾಗಲೇ ತಮ್ಮ ಗ್ರಂಥ ಪ್ರಕಟವಾಗಿದ್ದ ಸಂಗತಿ ಅವರಿಗೆ ತಿಳಿದದ್ದು. ಇದು ಬರಹಗಾರನ ಹಣೇಬರಹ!

ಒಮ್ಮೆ ಒಂದು ಸಭೆಯಲ್ಲಿ ವಿ. ಸೀ. ಯವರೂ ಕವಿ ನರಸಿಂಹಸ್ವಾಮಿಯವರೂ ಪುರಂದರದಾಸರ ಮೇಲೆ ರಚಿಸಿದ ಕವನಗಳನ್ನು ವಾಚಿಸಿದರು. ಮಾರನೆಯದಿನ ಅವರಿಬ್ಬರಲ್ಲೂ ಅದರ ಬಗೆಗೆ ವಿಮರ್ಶೆ ವಿ. ಸೀ. ನೀವು ಪುರಂದರದಾಸರ ಸಾಲುಗಳನ್ನೇ ನಿಮ್ಮವೆನ್ನುವಂತೆ ದಾಖಲಿಸಿಬಿಟ್ಟಿದ್ದೀರಿ! ಆಗ ನರಸಿಂಹಸ್ವಾಮಿಯವರು ಅಂದರು 'ಪುರಂದರದಾಸರ ಮೇಲೆ ಪದ್ಯ ಬರೆಯಿರೆಂದರೆ ನೀವು ಅವರಿಗೇ ಪ್ರಶ್ನೆಗಳನ್ನು ಹಾಕಿಬಿಟ್ಟಿದ್ದೀರಲ್ಲಾ? ಏನು? ಏನು? ಎಂದೆಲ್ಲಾ ಝಾಡಿಸಿ ಬಿಟ್ಟಿದ್ದೀರಿ. ಅಲ್ಲಿಂದೀಚೆಗೆ ವಿ. ಸೀ. ಯವರು ಹೊಸದಾಗಿ ಏನು ಬರೆದರೂ ಅದರಲ್ಲಿ 'ಏನು ಬಂದಿದೆ ತಾನೆ?' ಎಂದು ಕೇಳುತ್ತಾರೆ.

(ಆಧಾರ ವಿ. ಸೀ. ೭೫ ಸಂಭಾವನಾ ಗ್ರಂಥ.)

ನಾಗ ಪಂಚಮಿ

ಮುಳಿಯ ಸರಸ್ವತಿ
೨೬/೪, ೧ನೇ ಮುಖ್ಯ ರಸ್ತೆ, ಲಕ್ಷ್ಮೀಪುರಂ,
ಮೈಸೂರು–೫೭೧೦೦೪

"ಪಂಚಮಿ ಹಬ್ಬ ಉಳಿತ ದಿನ ನಾಕ
ಅಣ್ಣ ಬರಲಿಲ್ಲ ಯಾಕs ಕರಿಯಾಕ"

ಈ ಜಾನಪದ ಗೀತೆಯನ್ನು ಕೇಳದವರು ಬಹುಶಃ ನಮ್ಮ ಕರ್ನಾಟಕದಲ್ಲಿ ಯಾರೂ ಇಲ್ಲ ಎಂದೇ ಹೇಳಬಹುದು. ಅಷ್ಟು ಜನಪ್ರಿಯ ಗೀತೆ ಇದು. ಪಂಚಮಿ ಹಬ್ಬ ಅಥವಾ ನಾಗಪಂಚಮಿ ಕೂಡ ನಮಗೆಲ್ಲಾ ಅಷ್ಟೇ ಪರಿಚಿತವಾದ ಹಬ್ಬ. ಶ್ರಾವಣ ಮಾಸದಲ್ಲಿ ಬರುವ ಹಬ್ಬಗಳಲ್ಲಿ ಇದು ಬಹು ಮುಖ್ಯವಾದದ್ದು. ಈ ಹಬ್ಬವನ್ನು ಕರ್ನಾಟಕ, ಮಹಾರಾಷ್ಟ್ರ, ಆಂಧ್ರ, ತಮಿಳುನಾಡು ಮುಂತಾದ ರಾಜ್ಯಗಳಲ್ಲಿ ಆಚರಿಸುತ್ತಾರೆ. ಈ ಹಬ್ಬದಲ್ಲಿ ನಾಗರ ಹಾವಿಗೆ ಪೂಜೆ ಮಾಡುವುದು ವಾಡಿಕೆ. ಹಾಗೆ ನೋಡಿದರೆ, ಹಿಂದೂಗಳೆಲ್ಲರೂ ನಾಗಪೂಜೆ ಮಾಡುತ್ತಾರೆ. ಉತ್ತರದಲ್ಲಿ, ಮುಖ್ಯವಾಗಿ ಮಣಿಪುರ, ಬಂಗಾಳ ಮೊದಲಾದ ಕಡೆ ನಾಗನ ತಂಗಿಯಾದ "ಮನಸಾ" ಎಂಬ ನಾಗಿಣಿಯನ್ನು ಪೂಜಿಸುತ್ತಾರೆ. ಅವಳಿಗೆ "ವಿಷಹರಾ" ಎಂಬ ಹೆಸರೂ ಇದೆ.

ದ್ರಾವಿಡರ ಕಾಲದಿಂದಲೇ ನಮ್ಮಲ್ಲಿ ನಾಗಪೂಜೆ ಪ್ರಚಾರದಲ್ಲಿತ್ತು. ನಾಗರ ಹಾವಿನ ಭಯಂಕರ ವಿಷದ ಭಯ ತಪ್ಪಿಸಿಕೊಳ್ಳಲು ಈ ಆರಾಧನೆ ಪ್ರಾರಂಭವಾಗಿರಬೇಕು. ಆದ್ದರಿಂದಲೇ ನಾವು ಈಗಲೂ ಹೆಚ್ಚಿನ ದೇವಾಲಯಗಳಲ್ಲಿ ನಾಗಪೂಜೆಗೆ, ಪ್ರತಿಷ್ಠಾಪನೆಗೆ ಪ್ರತ್ಯೇಕ ಸ್ಥಳ ಇರುವುದನ್ನು ಕಾಣುತ್ತೇವೆ. ಸಂತಾನ ಭಾಗ್ಯ ಇಲ್ಲದವರು ನಾಗ ಪ್ರತಿಷ್ಠಾಪನೆ ಮಾಡಿದರೆ ಸಂತಾನ ಭಾಗ್ಯ ಲಭ್ಯವಾಗುವುದೆಂದು ನಂಬಿಕೆಯೂ ಇದೆ. ಕರ್ನಾಟಕದಲ್ಲೇ ಘಾಟಿ ಸುಬ್ರಹ್ಮಣ್ಯ, ಕುಕ್ಕೆ ಸುಬ್ರಹ್ಮಣ್ಯ ಮೊದಲಾದ ಕ್ಷೇತ್ರಗಳು ಬರೀ ನಾಗಪೂಜೆಗೇ ಮೀಸಲಾಗಿವೆ. ಕುಕ್ಕೆ ಸುಬ್ರಹ್ಮಣ್ಯದಲ್ಲಂತೂ ನಾಗರ ಹುತ್ತಗಳಿಗೇ ದೇವಸ್ಥಾನ ಕಟ್ಟಲಾಗಿದೆ. ಹುತ್ತದ ಮಣ್ಣೇ ಅಲ್ಲಿ ನಾಗನ ಪ್ರಸಾದ.

ಪುರಾಣದಲ್ಲಿ ಕತೆಯಲ್ಲಿ ಹೇಳುವಂತೆ, ನಾಗರಾಜ ತಕ್ಷಕ, ಪರೀಕ್ಷಿತ ರಾಜನನ್ನು ಕಚ್ಚಿ ಕೊಂದ. ಪರೀಕ್ಷಿತನ ಮಗ

ಜನಮೇಜಯ, ಸೇಡಿನ ಭಾವದಿಂದ, ಇಡೀ ನಾಗವಂಶವನ್ನೇ ಸುಟ್ಟು ಹಾಕಲು ಸರ್ಪಯಾಗವನ್ನು ಆರಂಭಿಸಿದ. ಋತ್ವಿಜರು ಎಷ್ಟೇ ಮಂತ್ರಗಳಿಂದ ಸರ್ಪಗಳನ್ನು ಆಹ್ವಾನಿಸಿದರೂ ಸರ್ಪಗಳು ಬರಲಿಲ್ಲ. ಆಗ ಜನಮೇಜಯನು ಇಂದ್ರನನ್ನು ಮೊರೆ ಹೊಕ್ಕ. ಇಂದ್ರನು ಆಸ್ತಿಕ ಋಷಿಯ ಮಧ್ಯಸ್ತಿಕೆಯಿಂದ ಜನಮೇಜಯ ಹಾಗೂ ತಕ್ಷಕರಲ್ಲಿ ಸಂಧಾನ ಮಾಡಿದ. ಆಸ್ತಿಕ ಋಷಿಯ ತಂದೆ ಆರ್ಯ ಪುರುಷ. ತಾಯಿ, ನಾಗಕನ್ಯೆ. ತಕ್ಷಕ ತನ್ನ ವಿಷವನ್ನು ಹೀರಿಕೊಂಡು ಪರೀಕ್ಷಿತನನ್ನು ಬದುಕಿಸಿದ. ಇದಾದ ಅನಂತರ ಆರ್ಯರೂ ನಾಗರನ್ನು ಕಂಡರೆ ಗೌರವಿಸ ತೊಡಗಿದರು. ಹೀಗೆ ಅವರಲ್ಲೂ ನಾಗಪೂಜೆ ಜಾರಿಗೆ ಬಂದಿರಬೇಕು. ಚಾತುರ್ಮಾಸದ ನಿಮಿತ್ತ ಶ್ರೀವಿಷ್ಣು ಅನಂತನಾಗನ ಮೇಲೆ ವಿಶ್ರಮಿಸುತ್ತಾನೆಂದೂ ಪ್ರತೀತಿ ಇದೆ. ಇದರಿಂದಲೂ ನಾಗಪೂಜೆಗೆ ಮಹತ್ವ ಬಂದಿದೆ. ಹೀಗೆ ಶೈವರೂ, ವೈಷ್ಣವರೂ, ಬೇರೆ ಬೇರೆ ಪಂಗಡದವರೂ, ಪ್ರಾಂತದವರೂ ವೈಭವದಿಂದ ನಾಗಪಂಚಮಿಯನ್ನಾಚರಿಸುತ್ತಾರೆ.

ನಾಗಪಂಚಮಿ ಎಲ್ಲ ಕಡೆ ಪಂಚಮಿ ಹಬ್ಬ ಎಂದು ಪ್ರಸಿದ್ಧವಾದರೂ ಕೆಲವು ಕಡೆ ಶ್ರಾವಣ ಶುದ್ಧ ತದಿಗೆಯಿಂದಲೇ ಈ ಹಬ್ಬದ ಪ್ರಾರಂಭವಾಗುತ್ತದೆ. ತದಿಗೆಯ ದಿವಸ ರೊಟ್ಟಿಯ ಹಬ್ಬ. ಹೆಣ್ಣು ಮಕ್ಕಳೆಲ್ಲಾ ಒಂದಾಗಿ ಹಾಡುತ್ತಾ ಗೋಧಿ, ಜೋಳ, ಸಜ್ಜೆಯ ರೊಟ್ಟಿಗಳನ್ನೂ, ಬಗೆಬಗೆಯ ಕಾಳು, ತರಕಾರಿ, ಪಚ್ಚಡಿಗಳನ್ನೂ ಸಿದ್ಧಪಡಿಸುತ್ತಾರೆ. ದೇವರ ನೈವೇದ್ಯದ ನಂತರ
ಎಲ್ಲರೂ ಸಂತೋಷದಿಂದ ರೊಟ್ಟಿಗಳನ್ನು
ಸವಿಯುತ್ತಾರೆ. ಆ ದಿನ ರೊಟ್ಟಿಯೇ
ಅವರ ಭೋಜನ. ಮರುದಿನದ ನಾಗ
ಚೌತಿಗಾಗಿ ಬಗೆಬಗೆಯ ಉಂಡೆಗಳನ್ನೂ
ತಯಾರಿಸುತ್ತಾರೆ. ಚೌತಿಯ ದಿನ ಮನೆಯ
ವರೆಲ್ಲಾ ಸ್ನಾನ ಮಾಡಿ, ಹೊಸ ಹೊಸ
ಬಟ್ಟೆಗಳನ್ನು ತೊಟ್ಟು ಸಾಲಂಕೃತರಾಗಿ
ಮಣ್ಣಿನ ಅಥವಾ ಕಲ್ಲಿನ ನಾಗನನ್ನು ಕೇದಿಗೆ
ಹೂಗಳಿಂದ ಅಲಂಕರಿಸಿ, ಅರಿಶಿನ
ಕುಂಕುಮಗಳಿಂದ ಪೂಜಿಸುತ್ತಾರೆ
ನೈವೇದ್ಯಕ್ಕೆಂದು ಅರಳಿಟ್ಟು, ತಂಬಿಟ್ಟು
ಉಂಡೆಗಳನ್ನಿಡುತ್ತಾರೆ. ಕೆಲವರು ನಾ
ನನ್ನು ತಯಾರಿಸಲು ನದೀತೀರದಿಂದ ಮೆತ್ತ
ಗಿನ ಮಣ್ಣನ್ನು ತರುವ ರೂಢಿಯೂ ಇದೆ
ನಂತರ ಹಾಡುತ್ತ ಒಬ್ಬೊಬ್ಬರೇ ನಾಗನಿ
"ತನಿ" ಎರೆಯುತ್ತಾರೆ. ಅಂದರೆ ಹಾಲೆರೆಯು
ತ್ತಾರೆ. ಮಹಾರಾಷ್ಟ್ರ, ತಮಿಳುನಾಡುಗಳ
ನಿಜವಾದ ನಾಗರ ಹಾವಿಗೇ ಹಾಲೆರೆಯು
ಪದ್ಧತಿ ಉಂಟು. ಈ ಪೂಜೆಯ ಬಳಿ
ಕೆಲವರು ಉಪಾಹಾರ ಮಾಡಿದರೆ, ಇನ
ಕೆಲವರು ಊಟ ಮಾಡುತ್ತಾರೆ. ಇನ
ಕೆಲವರು ಏನನ್ನೂ ತೆಗೆದುಕೊಳ್ಳ
ಉಪವಾಸ ಮಾಡಿ ಮಾರನೆಯ ದಿವ
ಪೂಜೆ ಮಾಡಿ ಆಹಾರ ಸೇವಿಸುತ್ತಾ
ಉತ್ತರ ಕರ್ನಾಟಕದ ಧಾರವಾ
ಬೆಳಗಾಂವಿ, ಗುಲ್ಬರ್ಗಾ ಮೊದಲಾದ ಕ
ನಾಗಪಂಚಮಿಯ ನಿಮಿತ್ತ ಮರ ಜೋಕಾ
ಆಡುವ ರೂಢಿ ಇದೆ. ಜಿಟಿ ಜಿಟಿ ಸುರಿಯು
ಮಳೆಯಲ್ಲಿ, ಸಣ್ಣವರು ದೊಡ್ಡವರು ಎ
ಭೇದವಿಲ್ಲದೆ ಎಲ್ಲರೂ ಜೋಕಾಲಿ ಆ
ತ್ತಾರೆ. ಹಸಿರು ಗಿಡಮರಗಳ ಹಿನ್ನೆಲೆಯ

ಣ್ಣ ಬಣ್ಣದ ಹೊಸ ಉಡುಗೆ ತೊಟ್ಟು, ಂಪು ಗುಂಪಾಗಿ ಜನ ಜೋಕಾಲಿ ಆಡು ುದನ್ನು ನೋಡುವುದೇ ಕಣ್ಣಿಗೆ ಹಬ್ಬ.

ಮಾರನೆಯ ದಿನವೇ ನಾಗಪಂಚಮಿ. ಲವು ಕಡೆ ಈ ದಿನವೇ ನಾಗಪೂಜೆ ನಡೆ ಯುತ್ತದೆ. ನಮ್ಮ ಮೈಸೂರು, ಮಂಡ್ಯ ಮುಂತಾದ ಕಡೆ ಹೆಣ್ಣುಮಕ್ಕಳು ನಸುಕಿ ನಲ್ಲಿ ಎದ್ದು, ಸ್ನಾನಮಾಡಿ, ದೇವರ ಮುಂದೆ ಮಣೆಗಳ ಮೇಲೆ ನಾಗನ ರಂಗೋಲಿ ಬರೆದು, ಬಗೆ ಬಗೆಯ ಹೂವು ಕೇದಿಗೆಗಳಿಂದ ಅಲಂಕರಿಸಿ, ಕುದಿಸಿದ ಕಡುಬು, ತಂಬಿಟ್ಟು ಮೊದಲಾದ ಖಾದ್ಯ ಪದಾರ್ಥಗಳನ್ನು ನೈವೇದ್ಯ ಮಾಡಿ, ತನಿ ಎರೆದು ನಾಗನನ್ನು ಪೂಜಿಸುತ್ತಾರೆ. ಕೆಲ ವೆಡೆಗಳಲ್ಲಿ ಸುಮಂಗಲೆಯರು ಪೂಜಾ ಸಾಮಗ್ರಿಗಳೊಡನೆ ಜಲಾಶಯಗಳಿಗೆ ಹೋಗಿ ಪೂಜೆ ಸಲ್ಲಿಸಿ ಬರುವ ಕ್ರಮವೂ ಇದೆ. ಜಲದೇವತೆಗೆ ಸೀರೆ ಕುಪ್ಪಸಗಳ ಬಾಗಿನ ತೋರಿಸುತ್ತಾರೆ. ಕೆಲವರು ಹುತ್ತ ಗಳಿರುವಲ್ಲಿ, ಕೆಲವರು ದೇವಸ್ಥಾನಗಳಲ್ಲಿ ನಾಗನನ್ನು ಆರಾಧಿಸುತ್ತಾರೆ. ತನಿ ಎರೆ ಯುತ್ತಾರೆ. ಒಟ್ಟಿನಲ್ಲಿ ಎಲ್ಲೆಡೆ ಸಡಗರ ದಿಂದ ಹಬ್ಬವನ್ನು ಆಚರಿಸಲಾಗುತ್ತದೆ.

ಈ ಹಬ್ಬದ ಇನ್ನೊಂದು ವಿಶಿಷ್ಟತೆ ಏನೆಂದರೆ, ಇದನ್ನು ಒಡಹುಟ್ಟಿದವರ ಹಬ್ಬ ಎಂದು ಕರೆಯುವುದು ಹಾಗೂ ಆಚರಿಸುವುದು. ಉತ್ತರ ಕರ್ನಾಟಕದಲ್ಲಿ ಮದುವೆ ಮಾಡಿಕೊಟ್ಟ ಮಗಳನ್ನು ನಾಲ್ಕು ದಿನ ಮುಂಚಿತವಾಗಿಯೇ ತವರಿಗೆ ಕರೆಸಿಕೊಳ್ಳುವ ಪದ್ಧತಿ ಇದೆ. ಇದರಿಂದಲೇ ಇರಬೇಕು, ಮೇಲೆ ಉದ್ಧರಿಸಿದ ಪಂಚಮಿಯ ಹಾಡಿನಲ್ಲಿ ತಂಗಿ, ತವರಿನಿಂದ ಅಣ್ಣ ಇನ್ನೂ ಬರಲಿಲ್ಲವಲ್ಲಾ ಎಂದು ಪರಿತಪಿಸುವುದು.

ತವರಿಗೆ ಬಂದ ಮಗಳಿಗೆ ಹೊಸ ಸೀರೆ, ಕುಪ್ಪಸ, ಬಳೆಗಳನ್ನು ತೊಡಿಸಿ, ಸಾಕಷ್ಟು ತಿಂಡಿತಿನಿಸಿಗಳೊಡನೆ ಅತ್ತೆಯ ಮನೆಗೆ ಕಳಿಸಿಕೊಡುತ್ತಾರೆ. ಮಗಳು, ತಾನು ಹುಟ್ಟಿ ಬೆಳೆದ ಮನೆಗೆ ಬಂದು, ಒಡಹುಟ್ಟಿದವರೊಡನೆ ನಕ್ಕು ನಲಿದು, ಜೋಕಾಲಿ ಆಡಿ, ಸಂತೋಷದಿಂದ ಹಬ್ಬ ಮುಗಿಸಿ, ಇನ್ನಷ್ಟು ಸವಿನೆನಪುಗಳನ್ನು ಹೊತ್ತುಕೊಂಡು ತನ್ನೂರಿಗೆ ಹೋಗುವುದು ವಾಡಿಕೆ. ಇನ್ನು ಕೆಲವು ಕಡೆ ಒಡಹುಟ್ಟಿದವರ ಹೊಕ್ಕಳು ಹಾಗೂ ಬೆನ್ನಿಗೆ ಹಾಲು ತುಪ್ಪ ಸವರುವ ಪದ್ಧತಿ ಇದೆ. ಅಂದರೆ ಒಡಹುಟ್ಟಿದವರು ಹಾಲು ತುಪ್ಪದಂತೆ ತಂಪಾಗಿ ಬಾಳಲಿ ಎಂದೇ ಅರ್ಥ. ಈ ಹಬ್ಬವನ್ನು ಒಡಹುಟ್ಟಿದವರ ಹಬ್ಬ ಎಂದು ಆಚರಿಸುವ ಹಿನ್ನೆಲೆಯಲ್ಲಿ ಒಂದು ಜಾನಪದ ಕಥೆ ಹೀಗಿದೆ. "ಒಮ್ಮೆ ಅತ್ತೆಮನೆಯಲ್ಲಿದ್ದ ತಂಗಿಯನ್ನು ಕರೆತರಲು ಅಣ್ಣ ಎತ್ತಿನಗಾಡಿ ತೆಗೆದುಕೊಂಡು ಹೋಗುತ್ತಾನೆ. ಅಣ್ಣ ಕಡುಬಡವನಾದರೆ, ತಂಗಿ ಶ್ರೀಮಂತರ ಸೊಸೆ. ಅವಳು ಮೈತುಂಬಾ ಚಿನ್ನದ ಒಡವೆಗಳನ್ನು ಹೇರಿಕೊಂಡು, ಹೊಸ ಬಟ್ಟೆ ಉಟ್ಟುಕೊಂಡು ಗಾಡಿ ಹತ್ತುತ್ತಾಳೆ. ಅಣ್ಣನಿಗೆ ತಂಗಿಯ ಆಭರಣಗಳನ್ನು ಕಂಡು ದುರಾಸೆ ಉಂಟಾಗುತ್ತದೆ. ಅವನು ತಂಗಿಯನ್ನು ಊರದಾರಿ ಬಿಟ್ಟು, ಕಾಡಿಗೆ ಕರೆತಂದು, ಒಡವೆಗಾಗಿ ಪೀಡಿಸಲಾರಂಭಿಸುತ್ತಾನೆ. ತಂಗಿ ಅತ್ತೆ, ಮಾವ, ಗಂಡಂದಿರ ಭಯದಿಂದಾಗಿ ಕೊಡಲಾರೆ ಎನ್ನುತ್ತಾಳೆ. ಆಗ ಅಣ್ಣ ಅವಳನ್ನು ಕೊಲ್ಲಲೆಂದು

ದೊಡ್ಡ ಕಲ್ಲೊಂದನ್ನು ಎತ್ತುತ್ತಾನೆ. ಆಗ ಅದರ ಕೆಳಗಿದ್ದ ನಾಗರ ಹಾವೊಂದು ಅವನನ್ನು ಕಚ್ಚುತ್ತದೆ. ಅವನು ಅಲ್ಲಿಯೇ ಸತ್ತುಬೀಳುತ್ತಾನೆ. ತಂಗಿ ಆಗ ನಾಗನನ್ನು ಪ್ರಾರ್ಥಿಸಿ, ಅಣ್ಣನ ಪ್ರಾಣಗಳನ್ನು ಮರಳಿ ಪಡೆಯುತ್ತಾಳೆ. ಇಬ್ಬರೂ ಸಂತೋಷದಿಂದ ಮನೆಗೆ ಬರುತ್ತಾರೆ.” ಕಥೆಯಲ್ಲಿ ಈ ಘಟನೆ ನಡೆದದ್ದು ಶ್ರಾವಣ ಮಾಸದ ಚೌತಿ, ಪಂಚಮಿಗಳಂದು. ಆದ್ದರಿಂದಲೇ ಶ್ರಾವಣದ ಚೌತಿಪಂಚಮಿಗಳು ನಾಗರ ಪೂಜೆಗೆ ಹಾಗೂ ಒಡಹುಟ್ಟಿದವರ ಪ್ರೀತಿಗೆ ಪ್ರಸಿದ್ಧವಾದವು. ಇದಕ್ಕೆಂದೇ ಕೊಟ್ಟ ಮಗಳನ್ನು ತವರಿಗೆ ಕರೆಸುವ ಪದ್ಧತಿಯೂ ಬಂತಂತೆ.

ವೈಜ್ಞಾನಿಕ ದೃಷ್ಟಿಯಿಂದ ನೋಡಿದರೂ ನಾಗಪಂಚಮಿಯ ಹಬ್ಬಕ್ಕೆ ಮಹತ್ವದ ಸ್ಥಾನ ಇದೆ. ಮನುಷ್ಯ ಯಾವುದೇ ವಸ್ತುವನ್ನು ಪೂಜಿಸಲು ಮೂಲ ಕಾರಣ ಭಯ ಅಥವಾ ಆ ವಸ್ತು ಅವನಿಗೆ ಮಾಡಿದ ಉಪಕಾರಕ್ಕೆ ಕೃತಜ್ಞತೆ ಅರ್ಪಿಸುವುದು ಎಂದು ಹೇಳಬಹುದು. ಹಿಂದೂಗಳು ಮಾತ್ರವಲ್ಲ, ಬೇರೆ ಬೇರೆ ಜನಾಂಗದವರೂ, ಸೂರ್ಯ, ಅಗ್ನಿ, ವಾಯು ಮುಂತಾದ ಪ್ರಾಕೃತಿಕ ತತ್ವಗಳನ್ನು ಪೂಜಿಸುತ್ತಾರೆ. ಇದುಬಹುಶಃ ನಾವು ಅವುಗಳಿಂದ ಪಡೆಯುತ್ತಿರುವ ಉಪಕಾರಕ್ಕೆ ತೋರಿಸುವ ಕೃತಜ್ಞತೆ ಇರಬಹುದು. ಹಾಗೆಯೇ, ವಿಷಜಂತುವಾದ ನಾಗನನ್ನು ಪೂಜಿಸುವುದು ವಿಷದ ಭಯದಿಂದ ಎಂದುಕೊಳ್ಳಬಹುದು. ನಮ್ಮ ದೇವಿಯಾದ ದುರ್ಗೆಯ ವಾಹನ ಹುಲಿ. ಅದು ಕ್ರೂರವಾದ ಪ್ರಾಣಿ. ಇದರ ವಿಷಯದಲ್ಲಾದರೂ

ಅಷ್ಟೇ. ಗಣೇಶನ ವಾಹನ ಇಲಿ. ಇಲಿ
ಕ್ರೂರ ಪ್ರಾಣಿಯಲ್ಲದಿದ್ದರೂ, ನಾವು
ತಿನ್ನುವ ಆಹಾರ, ಗಡ್ಡೆ ಗೆಣಸು, ಇಲಿ
ತಿಂದು ಬಿಟ್ಟದ್ದೇ ತಾನೇ? ಗಣೇಶ-ವಿಘ್ನ
ಹರ, ವಿನಾಯಕ ಎಂದೆಲ್ಲಾ ಅಗ್ರಪೂಜೆ
ಗೊಳ್ಳುವ ದೇವತೆ. ಇವನ ವದನ
ಆನೆಯದು. ನಾಗನಂತೂ, ಶಿವನ ತಲೆಯ
ಮೇಲೆ, ಗಣೇಶನ ಹೊಟ್ಟೆಯ ಸುತ್ತ
ರಾರಾಜಿಸುವಂತಹನು. ಹೀಗೆ ಇನ್ನೂ
ಅನೇಕ ಪ್ರಾಣಿಗಳನ್ನು ನಾವು ಪೂಜಿಸು
ತ್ತೇವೆ. ಹನುಮಂತ, ನಮ್ಮ ಪೂರ್ವಜ
ಪ್ರತಿನಿಧಿ. ಇನ್ನು ಮೀನು, ಹಲ್ಲಿ ಎಂದ
ಉದಹರಿಸುತ್ತಾ ಹೋದರೆ ಇಡೀ ಪ್ರಾ
ಜಗತ್ತನ್ನೇ ನಾವು ಒಂದಲ ಒಂದು ರೀ
ಯಲ್ಲಿ ಪೂಜಿಸುತ್ತೇವೆ ಎನ್ನಬಹುದು
ಪೂಜಿಸದಿದ್ದರೂ, ಅವಕ್ಕೆ ದಯೆಯನ್ನಾ
ದರೂ ತೋರಬೇಕಲ್ಲವೇ? ಬಸವೇಶ್ವರರ
ಹೇಳಿದಂತೆ-ದಯೆಯೇ ಧರ್ಮದ ಮೂ
ವಯ್ಯಾ-ಎಂಬುದು ಎಷ್ಟು ಸತ್ಯ! ನಾ
ನಮ್ಮೊಡನೆ ಜೀವಿಸುವ ಎಲ್ಲಾ ಜೀ
ಜಂತುಗಳನ್ನು ಗೌರವಿಸಬೇಕು. ಈ ಸತ
ವನ್ನು ನಮ್ಮ ಪೂರ್ವಜರು ಸಾವಿರಾ
ವರ್ಷಗಳ ಮೊದಲೇ ಕಂಡುಕೊಂಡಿದ್ದರು
ಗೌರವದ ಇನ್ನೊಂದು ಮುಖವೇ ಪೂಜೆ

ಒಂದು ಪ್ರಾಣಿ ಇನ್ನೊಂದನ್ನು ತಿಂದು
ಬದುಕುವುದು ನಿಸರ್ಗ ನಿಯಮ
ಹಾಗೆಂದು ಪ್ರಾಣಿಗಳು ತಮಗೆ ಮೀಸಲಾ
ಪ್ರಾಣಿಗಳನ್ನಷ್ಟೇ ತಿನ್ನುವುದೂ ನಿ
ಉದಾಹರಣೆಗೆ, ಸಣ್ಣ ಹುಳಹುಪ್ಪ
ಗಳನ್ನು ಕಪ್ಪೆ, ಇಲಿಗಳು ತಿನ್ನುತ್ತ
ಕಪ್ಪೆ, ಇಲಿಗಳನ್ನು ಹಾವು ತಿನ್ನುತ್ತ
ಗಿಡುಗ, ಮುಂಗುಸಿಗಳು ಹಾವನ್ನು ತಿ

ತಿನ್ನುವುದು ರೂಢಿ. ಈ ಪ್ರಾಣಿಗಳನ್ನು ಇನ್ನೂ ಬಲಶಾಲಿಯಾದ ಹುಲಿ, ಚಿರತೆಗಳು ತಿನ್ನಬಹುದು. ಹೀಗೆ ನಿಸರ್ಗದಲ್ಲಿ ಅನೇಕ ಆಹಾರದ ಸರಪಣಿಗಳನ್ನು ಕಾಣಬಹುದು. ಕೆಲವು ಸಸ್ಯಾಹಾರಿ ಪ್ರಾಣಿಗಳು ಬರೀ ಹುಲ್ಲು, ಹಣ್ಣುಹಂಪಲುಗಳು ತಿಂದು ಬದುಕುತ್ತವೆ. ಮೊಲ, ಜಿಂಕೆ ಇತ್ಯಾದಿ. ಇವುಗಳ ಮಲ ಮೂತ್ರಗಳಿಂದ ಗಿಡ ಮರಗಳು ಬೆಳೆಯುತ್ತವೆ. ಹೀಗೆ ಪ್ರತಿಯೊಂದು ಜೀವಿಯೂ ಇನ್ನೊಂದಕ್ಕೆ ಪೂರಕ. ಆದರೆ ಮನುಷ್ಯ ತನ್ನ ಬುದ್ಧಿಶಕ್ತಿಯಿಂದ ವನ್ಯ ಸಂಪತ್ತಾದ ಗಿಡ ಮರಗಳನ್ನು, ಪಶುಪಕ್ಷಿಗಳನ್ನು ತನ್ನ ವಶದಲ್ಲಿರಿಸಿಕೊಂಡಿದ್ದಾನೆ. ಮಾತ್ರವಲ್ಲ, ಎಷ್ಟೋ ಬಾರಿ ಅವುಗಳ ದುರುಪಯೋಗಕ್ಕೂ ಹೇಸುವುದಿಲ್ಲ. ಮಾನವನ ಈ ವಿಪರೀತ ಬುದ್ಧಿಯಿಂದಲೇ, ಈಗ ವನಸಿರಿ ನಾಶವಾಗಿ, ನಾವು ನೀರಿಗಾಗಿ, ಆಹಾರಕ್ಕಾಗಿ ಪರಿತಪಿಸುವಂತಾಗಿದೆ. ಇದೇ ರೀತಿ ನಿಸರ್ಗದ ಆಹಾರದ ಸರಪಣಿಗಳಲ್ಲಿ ಒಂದು ಕೊಂಡಿ, ಎಂದರೆ, ಒಂದು ಜಾತಿಯ ಪ್ರಾಣಿ ನಶಿಸಿದರೆ, ಆದರಿಂದ ನಿಸರ್ಗದತ್ತವಾದ ಆಹಾರದ ಸಮತೋಲನವೇ ತಪ್ಪುತ್ತದೆ. ಇದರಿಂದ ಮಾನವನಿಗೇ ನಷ್ಟ. ಸಾವಿರಾರು ವರ್ಷಗಳ ಹಿಂದೆ ನಳ ನಳಿಸುತ್ತಿದ್ದ ಆಫ್ರಿಕಾ ಭೂಖಂಡದ ಸಹಾರಾ, ನಮ್ಮ ದೇಶದ ರಾಜಸ್ಥಾನದ ಥಾರ್ ಪ್ರದೇಶಗಳು, ಕಾಲಾಂತರದಲ್ಲಿ ಮರುಸ್ಥಳಗಳಾಗಲು ಕಾರಣ ಮಾನವನ ಅತಿ ಆಸೆ ಎಂದರೆ ಅತಿಶಯೋಕ್ತಿಯಾಗಲಾರದು.

ಈಗ ಹಾವನ್ನೇ ತೆಗೆದುಕೊಳ್ಳೋಣ. ವಿಷಜಂತುವಾದ ಹಾವನ್ನು ಮಾನವನು ಕಂಡ ಕಂಡಲ್ಲಿ ಕೊಂದು ಮುಗಿಸಿದರೆ, ಕಾಲಕ್ರಮೇಣ ಅದರ ಸಂತತಿಯೇ ನಾಶವಾದೀತು. ಅದರಿಂದ ನಷ್ಟ ಅವನಿಗೇ ಅಲ್ಲವೇ? ಹಾವಿನ ಸಂತತಿಯೇ ಅಳಿದಲ್ಲಿ ನಮ್ಮ ಹೊಲಗಳಲ್ಲಿ ಇಲಿ, ಹೆಗ್ಗಣ, ಕಪ್ಪೆ ಮುಂತಾದವುಗಳ ಸಂಖ್ಯೆ ಬೆಳೆಯುತ್ತದೆ. ಇದರ ಪರಿಣಾಮ-ನಾವು ಕಷ್ಟಪಟ್ಟು ಬೆಳೆಸಿದ ಧಾನ್ಯಗಳು, ತರಕಾರಿ ಸಾಮಗ್ರಿಗಳು ಈ ಇಲಿ ಹೆಗ್ಗಣಗಳ ಪಾಲಾಗುತ್ತವೆ. ಈ ಸತ್ಯವನ್ನು ಅರಿತೇ ಇರಬೇಕು, ನಮ್ಮ ಪೂರ್ವಜರು ಹಾವನ್ನು ಪೂಜಿಸತೊಡಗಿದ್ದು. ಹಾಗಾಗಿಯೇ ಇಂದಿಗೂ ನಮ್ಮ ಭಾರತ ಸರ್ಪಗಳ ನಾಡು ಎಂದೇ ವಿಶ್ವವಿಖ್ಯಾತವಾಗಿದೆ. ಹಾವಿನ ಮಹಿಮೆಯನ್ನು ಮನಗಂಡು, ಗಾಂಧೀಜಿಯವರು ಹಾವನ್ನು "ಕ್ಷೇತ್ರಪಾಲ" ಎಂದೇ ಕರೆಯುತ್ತಿದ್ದರು.

ಒಟ್ಟಿನಲ್ಲಿ ಹೇಳುವುದಾದರೆ, ನಾಗಪಂಚಮಿ ಒಂದು ವಿಶಿಷ್ಟವಾದ ಹಬ್ಬ. ಹಾಗಾಗಿ ಇನ್ನುಮೇಲಾದರೂ ನಾವು ಬಸವಣ್ಣನವರು ಹೇಳಿದಂತೆ-"ಕಲ್ಲ ನಾಗರ ಕಂಡರೆ ಹಾಲನೆರೆಯೆಂಬರಯ್ಯಾ; ದಿಟ ನಾಗರ ಕಂಡರೆ,ಕೊಲ್ಲುಕೊಲ್ಲೆಂಬರಯ್ಯಾ" ಎಂದು ನಡೆಯದೆ, ದಿಟವಾದ ಹಾವಿಗೆ ದಯೆ ತೋರಿಸೋಣವೇ?

ಆಟೋರಿಕ್ಷಾ—ಡ್ರೈವ್ಹರ—ದತ್ತೂ ಪಾಟೀಲ

ಡಾ|| ಸ. ಜ. ನಾಗಲೋಟಿಮಠ

ವೈದ್ಯಕೀಯ ನಿರ್ದೇಶಕರು
ಬ. ವಿ. ವ. ಸಂಘ
ಬಾಗಲಕೋಟೆ ೫೮೭೧೦೧

ಪ್ರತಿ ವ್ಯಕ್ತಿಗೂ ಜನ್ಮತಃ ಚಿನ್ನದ ಒಂದು ಕೀಲಿ ಕೊಡಲಾಗಿರುತ್ತದೆ. ಇದು ಸ್ವರ್ಗದ ಬೀಗ ತೆರೆಯಬಲ್ಲ ಕೀಲಿ—ನರಕದ ಕೀಲಿ ಕೂಡಾ ಇದೇ! ನಮ್ಮ ರಾಜಕಾರಣಿಗಳು ಎಂದು ಈ ಅರಿವುಗಳಿಸಿ ತನಗೆ ದತ್ತವಾಗಿರುವ ಚಿನ್ನದ ಕೀಲಿಯನ್ನು ಜನಹಿತಸ್ವರ್ಗದ ಬೀಗ ತೆರೆಯಲು ಉಪಯೋಗಿಸಿಯಾರೋ!

ದತ್ತೂ ಪಾಟೀಲ ಮರಾಠಾ ಯುವಕ. ನಂಬಿಗಸ್ತ ವ್ಯಕ್ತಿ. ಅವನಿಗೆ ಯಾವ ನೌಕರಿಯೂ ದೊರೆಯಲಿಲ್ಲ. ಕೊನೆಗೆ ಆಟೋರಿಕ್ಷಾ ನಡೆಸುವುದನ್ನು ರೂಢಿಸಿಕೊಂಡ. ಬೇರೆಯವರ ಆಟೋರಿಕ್ಷಾ ಇವನು ನಡೆಸುವನು. ಮುಂಜಾನೆ ಎಂಟು ಗಂಟೆಗೆ ಮನೆ ಬಿಟ್ಟು ಆಟೋ ಪಡೆದುಕೊಂಡು ಕಾರ್ಯಕ್ಕೆ ತೊಡಗುವನು. ಸಂಜೆಯ ಎಂಟು ಗಂಟೆಯ ತನಕ ದುಡಿದನೆಂದರೆ ದಿನಕ್ಕೆ ರೂ ೪೦ ರಿಂದ ೧೦೦ ರವರೆಗೆ ಅವನಿಗೆ ಉಳಿಯುತ್ತದೆ. ಮಾಲೀಕರಿಗೆ ಆಟೋರಿಕ್ಷಾ ಮರಳಿಸುವಾಗ ರೂ. ೧೦೦ ಕೊಡಬೇಕು. ಬಂದ ಬಾಡಿಗೆಯಲ್ಲಿ ರಿಕ್ಷಾಕ್ಕೆ ಬೇಕಾದ ಪೆಟ್ರೋಲ ಎಣ್ಣೆ ಇತ್ಯಾದಿಗಳ ಬಗ್ಗೆ ಅವನೇ ಖರ್ಚು ಮಾಡುವನು. ಪ್ರತಿದಿನ ಬರುವ ಈ ಆದಾಯದ ಮೇಲೆ ಅವನ ಸಂಸಾರ ನಡೆಯಬೇಕು. ಪ್ರತಿ ತಿಂಗಳು ಇಂತಿಷ್ಟು ಹಣ ಎಂದು ಅವನು ತಮ್ಮ ಸಂಘಕ್ಕೆ ತುಂಬುವನು. ಸಂಘದ ಅಧ್ಯಕ್ಷ ಎಲ್ಲ ಆಟೋ

ಡ್ರೈವ್ಹರಗಳಿಂದ ಮಾಮೂಲು ಪಡೆದ
ಅದರಲ್ಲಿ ದೊಡ್ಡ ಪಾಲನ್ನು ಪೊಲೀಸ ಅ
ಕಾರಿಗಳಿಗೂ ರಸ್ತೆಯ ಅಧಿಕಾರಿಗಳಿಗ
ಕೊಟ್ಟು ಉಳಿದದ್ದರಲ್ಲಿ ತನ್ನ ಜೀವನ ಸಾ
ಸುವನು. ಇಂಥ ವ್ಯವಸ್ಥೆಯಿಂದ ಆಟೋ
ಡ್ರೈವ್ಹರಗಳಿಗೆ ಆಗಬಹುದಿದ್ದ ಪೊಲೀ
ತೊಂದರೆಗಳು ಕಡಿಮೆ ಆಗುತ್ತ
ಎಂಬುದು ಎಲ್ಲರ ಅನುಭವದ ಮಾತು.

ನಾನು ಆಟೋರಿಕ್ಷಾದಲ್ಲಿ ಚಲಿಸುವಾ
ಡ್ರೈವ್ಹರನ ಹೆಸರು, ಅನುಭ
ಕುಟುಂಬದ ಬಗ್ಗೆ ಮಾತನಾಡುತ್ತ ಬರು
ರೂಢಿ ಇಟ್ಟುಕೊಂಡಿರುವೆನು. ನಾ
ಮುಟ್ಟಬೇಕಾದ ಸ್ಥಳವನ್ನು ಮುಟ್ಟುವ
ರಲ್ಲಿ ಡ್ರೈವ್ಹರನು ನನ್ನೊಡನೆ ಸ್ನೇಹ ಹ
ಕೊಳ್ಳುವುದು ಸಾಮಾನ್ಯ. ಡ್ರೈವ
ಮರಳುವಾಗ ನಾವಿಬ್ಬರೂ ವಂದನೆಗಳ
ಹೇಳಿ ಮತ್ತೆ ಭೆಟ್ಟಿಯಾಗೋಣ ಎನ್ನು
ಹೋಗುವೆವು. ನನಗಂತೂ ಇದರ ಲಾ
ಬಹಳ. ಆತ್ಮೀಯರಾದಾಗ ಐ

ರೂಪಾಯಿ ಹೆಚ್ಚು ಕೊಡಲು ಹೋದರೂ ಡ್ರೈವರ ತೆಗೆದುಕೊಳ್ಳುವುದಿಲ್ಲ. ಕಾರಣ ಇಷ್ಟೆ ಈಗ ಅವನು ನನಗೆ ಪರಿಚಯಸ್ಥ. ಇದೇ ತೆರನಾಗಿ ನನಗೂ ದತ್ತೂ ಪಾಟೀಲ ನಿಗೂ ಪರಿಚಯ.

ದತ್ತೂ ಪಾಟೀಲನ ಆಟೋರಿಕ್ಷಾ ಸಹ ಒಳ್ಳೆಯದು. ಜಾಸ್ತಿ ಜಿಗಿಯುವುದಿಲ್ಲ, ಜಾಸ್ತಿ ಕಿರಿಚುವುದಿಲ್ಲ, ರಸ್ತೆಯ ಅಂಕು ಡೊಂಕು, ತಗ್ಗು ದಿನ್ನೆಗಳನ್ನು ಸಹಿಸುತ್ತ, ಕುಳಿತ ಪ್ರಯಾಣಿಕರಿಗೆ ಯಾವ ತೊಂದರೆ ಯನ್ನೂ ಕೊಡದೆ ಓಡುತ್ತದೆ. ಕೆಲವೊಂದು ಆಟೋರಿಕ್ಷಾಗಳಿರುತ್ತವೆ. ನೀವು ಸೀಟಿನ ಮೇಲೆ ಕೂಡ್ರುವಾಗಲೇ ನಿಮಗೂ ಅದಕ್ಕೂ ತಿಕ್ಕಾಟ ಪ್ರಾರಂಭವಾಗುತ್ತದೆ. ಒಂದೊಂದು ರಿಕ್ಷಾದ ಸೀಟುಗಳು ನಿಮ್ಮನ್ನು ಮುಂದೆ ಬೀಳುವಂತೆ ಮಾಡುತ್ತವೆ. ತಗ್ಗು ದಿನ್ನೆಗಳಿದ್ದ ರಸ್ತೆಯಲ್ಲಿ ಚಲಿಸುವಾಗ ನಿಮ್ಮ ನಿತಂಬಗಳು ಕುಣಿಕುಣಿದು ಹಣ್ಣಾಗ ಬಹುದು. ಅದಕ್ಕಿಂತಾ ಹೆಚ್ಚಾಗಿ ನಿಮ್ಮ ತಲೆಯ ಮೇಲೆ ನಾಲ್ಕಾರು ಗುಬಟೆಗಳು ಹುಟ್ಟಬಹುದು. ಅವುಗಳ ರುಚಿ ತಿಳಿಯು ವುದು ಇಂಥ ಆಟೋರಿಕ್ಷಾಗಳಲ್ಲಿ ಪ್ರಯಾ ಣಿಸಿದಾಗಲೇ.

ದತ್ತೂ ಪಾಟೀಲನು ಆಟೋರಿಕ್ಷಾ ನಡೆ ಸುವ ರೀತಿಯೂ ಒಳ್ಳೆಯದೇ. ಒಬ್ಬೊಬ್ಬ ಡ್ರೈವ್ಹರಗಳು ನಡೆಸುವ ರೀತಿ ವಿಚಿತ್ರ ವಾಗಿರುತ್ತದೆ. ನೀವು ಯಾವ ಕಡೆಗೆ ಚಲಿಸು ತ್ತಿರುವಿರಿ ಎಂಬುದೇ ತಿಳಿಯುವುದಿಲ್ಲ. ಆಟೋರಿಕ್ಷಾ ಗಾಲಿಗಳ ಮೂಲಕ ಉರುಳು ವುದೋ ಅಥವಾ ಜಿಗಿಯುತ್ತ ಜಿಗಿಯುತ್ತ ಚಲಿಸುವುದೋ ಎಂಬುದು ತಿಳಿಯುವುದಿಲ್ಲ. ಎಂಥದೇ ಗದ್ದಲವಿರಲಿ, ಎಷ್ಟೇ ವಾಹನ ಗಳು ಚಲಿಸುತ್ತಿರಲಿ ಇವುಗಳ ಪರಿವೆಯೇ ಆ ಡ್ರೈವ್ಹರಗಳಿಗೆ ಇರುವುದಿಲ್ಲ. ಅರ್ಜುನ ನಂತೆ ಇವರಿಗೆ ಕೇವಲ ಗುರಿಯೊಂದೇ ಕಾಣುವದು. ಹಿಂದೆ-ಮುಂದೆ ಎಡ ಬಲ ಗಳಲ್ಲಿ ಚಲಿಸುವ ವ್ಯಕ್ತಿಗಳಾಗಲೀ ವಾಹನ ಗಳಾಗಲೀ ಕಾಣುವದಿಲ್ಲ. ಈ ವಿಧದಿಂದ ನಮ್ಮನ್ನು ಕರೆದೊಯ್ಯುವ ಇಂಥ ರಿಕ್ಷಾ ಡ್ರೈವರ್‌ಗಳು ಅರ್ಜುನನ ವಂಶದವರಿ ದ್ದರೂ ಇರಬೇಕು.

ನನಗೆ ಒಬ್ಬ ಸ್ನೇಹಿತನಿದ್ದಾನೆ. ಅವನು ಚಲಿಸುವದು ಹೆಚ್ಚಾಗಿ ಆಟೋಗಳಲ್ಲಿ. ಅವನ ಕೈಯಲ್ಲಿ ಒಂದು ಹೆಲ್ಮೆಟ್ ಇರು ತ್ತದೆ. ಅಡ್ಡಾಡುವಾಗ ಅದು ಕೈಯಲ್ಲಿರು ತ್ತದೆ. ಆಟೋಗಳಲ್ಲಿ ಕುಳಿತಾಗ ಅವನು ಕ್ರಿಕೆಟ್ ಬ್ಯಾಟ್ಸಮನ್‌ಗಳು ಹಾಕಿದಂತೆ ಹೆಲಮೆಟ್ ಹಾಕಿಕೊಂಡು ತನ್ನ ಎರಡೂ ಕೈಗಳಿಂದ ರಿಕ್ಷಾದಲ್ಲಿಯ ಕಬ್ಬಿಣ ಸಳಿ ಗಳನ್ನು ಗಟ್ಟಿಯಾಗಿ ಹಿಡಿದುಕೊಳ್ಳುವನು. ಸುಮಾರಾಗಿ ಅವನು ಆ ರಿಕ್ಷಾಗಳಲ್ಲಿ ಜೋತಾಡುತ್ತಲೋ ಅಥವಾ ಕುದುರೆ ಸವಾರನಂತೆ ನಿಂತುಕೊಂಡೋ ಪ್ರಯಾಣಿ ಸುತ್ತಾನೆ.

ಇಂಥ ಆಟೋಗಳ ಲಾಭವನ್ನು ಹಲ ವಾರು ವೈದ್ಯರು ಪಡೆಯುತ್ತಾರೆಂದು ಕೇಳಿದ್ದೇನೆ. ವೈದ್ಯರ ಆಸ್ಪತ್ರೆಗೆ ಪ್ರಸವಿಸಲು ಬಂದ ಮಹಿಳೆ ಬೇಗನೆ ಪ್ರಸವಿಸಲಿಲ್ಲ ಎಂದು ತಿಳಿದರೆ ವೈದ್ಯರು ಅಂಥ ಮಹಿಳೆಯನ್ನು ರಿಕ್ಷಾಗಳಲ್ಲಿ ಕೂಡ್ರಿಸಿ ಕೇವಲ ಹತ್ತುನಿಮಿಷ ವಿಶಿಷ್ಟ ರಸ್ತೆಯಲ್ಲಿ ಪ್ರಯಾಣಿಸಲು ವ್ಯವಸ್ಥೆ ಮಾಡುತ್ತಾರಂತೆ. ಗರ್ಭಿಣಿ ಪ್ರಯಾಣಿಸಿ ಮರಳುವಷ್ಟರಲ್ಲಿ ಗರ್ಭದಲ್ಲಿಯ ಕೂಸು ಅರ್ಧಮರ್ಧ ಹೊರ

ಬಂದಿರುತ್ತದೆ ಎಂದು ಹೇಳುವರು. ಯಾವ ಮದ್ದೂ ಉಪಯೋಗಕ್ಕೆ ಬಾರದೇ ಹೋದಾಗ ಈ ಉಪಾಯವನ್ನು ಅವರು ಮಾಡುತ್ತಾರೆಂದು ತಿಳಿದು ಬಂದಿದೆ. ಮೊನ್ನೆ ಒಂದು ಹೊಸ ಬೋರ್ಡ್ ತನ್ನ ಆಟೋರಿಕ್ಷಾಕ್ಕೆ ಹಚ್ಚಿರುವನಂತೆ. ಅದರಲ್ಲಿ ಇದ್ದ ಮಾಹಿತಿ ಎಂದರೆ ಮಲಬದ್ಧತೆಯಿಂದ ಬಳಲುವ ರೋಗಿಗಳು ನಿರಾಶರಾಗುವದು ಬೇಡ. ಒಂದು ಸಲ ನಮ್ಮ ಆಟೋರಿಕ್ಷಾದಲ್ಲಿ ಕುಳಿತರೆ ಸಾಕು. ಮಲಬದ್ಧತೆ ಸಂಪೂರ್ಣ ಗುಣವಾಗುವದಂತೆ ಅದನ್ನು ಪ್ರಯತ್ನಿಸಿದವರು ಬಹಳ ಲಾಭ ಪಡೆದಿರುವರಂತೆ.

ಪಾಶ್ಚಾತ್ಯರು ಭಾರತಕ್ಕೆ ಬರಲು ಹತ್ತಾರು ಕಾರಣಗಳು. ಅವುಗಳಲ್ಲಿ ಮಹತ್ವದ ಕಾರಣವೆಂದರೆ ದೇವರನ್ನು ಕಾಣುವ ಹಂಬಲ. ಇಂಥವರೊಬ್ಬರು ಬಂದು ಮದ್ರಾಸಿನ ಸಮಿಪದ ಸ್ವಾಮಿಗಳ ಶಿಷ್ಯರಾದರು. ದಿನಾಲು ಪ್ರವಚನ ಕೇಳುವದು, ದೇವರ ಬಗ್ಗೆ ವಿಚಾರಿಸುವುದೂ ನಡೆದಿತ್ತು. ದೇವರು ಎಂದು ಗೋಚರಿಸುವನೋ ಎಂದು ನಿತ್ಯ ಚಿಂತಿಸುತ್ತಿದ್ದರು. ಗುರುಗಳನ್ನು ಪೀಡಿಸುತ್ತಿದ್ದರು. ಗುರುಗಳು ಅದಕ್ಕೆ ತಪಸ್ಸುಬೇಕು ಎಂದು ಹೇಳಿ ತಪಸ್ಸುಮಾಡಲು ಉಪದೇಶಿಸುತ್ತಿದ್ದರು. ಒಂದು ದಿನ ಆ ಶಿಷ್ಯ ಬಲು ಸಂತೋಷದಿಂದ ಬಂದ. ಗುರುಗಳು ಅವನ ಮುಖದಲ್ಲಿ ಸಂತೋಷ ಸೂಸುತ್ತಿರುವುದನ್ನು ಕಂಡು ಚಕಿತರಾದರು. "ಏನು ಎಷ್ಟು ಸಂತೋಷದಿಂದ ಇರುವಿರಲ್ಲ?" ಅದಕ್ಕೆ ವಿದೇಶದ ಶಿಷ್ಯ ನಗುತ್ತಲೇ ಹೇಳಿದ "ಗುರೂಜಿ ನನಗೆ ಸ್ವರ್ಗದ ದಾರಿ ಗೊತ್ತಾಗಿದೆ" ಎಂದ. ಗುರುಗಳಿಗೆ ಆಶ್ಚರ್ಯ. ಅವರಿಗೂ ತಿಳಿಯದಂಥ ಈ ಕಲೆ ಇವನಿಗೆ ಹೇಗೆ ಗೊತ್ತಾಯಿತು ಎಂಬುದು ಸಮಸ್ಯೆಯಾಯಿತು. ಗುರುಗಳು ಅವನನ್ನು ಸಮೀಪಕ್ಕೆ ಕರೆದು ಕಿವಿಯಲ್ಲಿ ಕೇಳಿದರು "ನನಗೂ ಸ್ವಲ್ಪ ಹೇಳು."

ಶಿಷ್ಯ ಹೇಳಿದ "ಅದು ಬಹಳ ಸುಲಭ ಮಾರ್ಗ"

ಗುರುಗಳು : "ನಿಜವಾಗಿಯೂ ?"

ಶಿಷ್ಯ ಧೈರ್ಯದಿಂದ "ಹೌದು ಗುರುಗಳೇ ಎಂದ", ಗುರುಗಳು "ಬೇಗನೇ ಹೇಳು ಬೇಗನೇ ಹೇಳು" ಎಂದರು. ಶಿಷ್ಯ ಗುರುಗಳ ಕಿವಿಯಲ್ಲಿ ಉಸುರಿದ "ಗುರುಗಳೇ ಅದರಲ್ಲೇನೂ ದೊಡ್ಡದಿಲ್ಲ. ನಾವು ಒಂದು ಆಟೋರಿಕ್ಷಾ ಹಿಡಿದು ಅದರಲ್ಲಿ ಕುಳಿತು, ರಿಕ್ಷಾಡ್ರೈವರ್‌ನಿಗೆ ಸ್ವರ್ಗಕ್ಕೆ ಹೋಗುವದು ಎಂದು ತಿಳಿಸಿದರೆ ಸಾಕು, ಅವನು ತನ್ನ ಮಹಾತ್ಮೆಯಿಂದ ನೇರವಾಗಿ ಸ್ವರ್ಗಕ್ಕೆ ಕರೆದುಕೊಂಡು ಹೋಗುವನು" ಎಂದ. ಗುರುಗಳು ಕಾರಿನ ಗಾಲಿ ಪಂಕ್ಚರ ಆದಂತೆ ಮೆಲ್ಲಗೆ ಕುಸಿದು ಕುಳಿತರು.

ಮೊನ್ನೆ ಮೊನ್ನೆಯ ಮಾತು. ನಾನು ಪಾಟೀಲನ ರಿಕ್ಷಾದಿಂದ ಪ್ರಯಾಣಿಸುತ್ತಿದ್ದೆ. ರಸ್ತೆ ಬಹಳ ಕೆಟ್ಟು ಹೋಗಿತ್ತು. ತಗ್ಗು ದಿನ್ನೆಗಳು ಎಷ್ಟು ಹುಟ್ಟಿದ್ದವೆಂದರೆ ಯಾರಿಗಾದರೂ ಹಣಕೊಟ್ಟು ರಸ್ತೆಗಳನ್ನು ಕೆಡಿಸಲು ಹೇಳಿದರೂ ಇಷ್ಟು ಚೆನ್ನಾಗಿ ಕೆಡಿಸುವದು ಸಾಧ್ಯವಿಲ್ಲ ಎನಿಸುತ್ತದೆ. ಇರಲಿ ಅಂಥ ರಸ್ತೆಯಲ್ಲಿ ಪ್ರಯಾಣಿಸುತ್ತಿದ್ದಾಗ ನಾನು ಅಂದೆ "ಅಲ್ರಿ ಪಾಟೀಲ ರೋಡ ಇಷ್ಟು ಕೆಟ್ಟರೂ ನಮ್ಮ ಕಾರ್ಪೋರೇಶನ್‌ದವರು ಇದನ್ನು ಸರಿಪಡಿಸುವದಿಲ್ಲವಲ್ಲ?"

ಪಾಟೀಲ ಹೇಳಿದ "ಹೌದ್ರಿ, ಸರ್, ಪ್ರಯಾಣಿಕರ ಗೋಳು ನೋಡಲಾಗದು. ಅದರಲ್ಲಿಯೂ ಮುದುಕರು ಇಂಥ ರಸ್ತೆಗಳಲ್ಲಿ ಚಲಿಸುತ್ತಿದ್ದರೆ, ನಾವು ಅವರನ್ನು ಮನೆಗೆ ಮುಟ್ಟಿಸಿದರೆ ಮುಗಿಯುವದಿಲ್ಲ, ಅವರು ಮನೆಯೊಳಗೆ ಸೇರಿದ ಮೇಲೆ ರಿಕ್ಷಾದಲ್ಲಿಯು ದೀಪ ಬೆಳಗಿಸಿ, ಎಲ್ಲ ಕಡೆಗೂ ಕೈಯಾಡಿಸಿ ಮುದುಕರ ದೇಹದಿಂದ ಕಳಚಿ ಬಿದ್ದ ಎಲುವುಗಳನ್ನೆಲ್ಲ ಆರಿಸಿಕೊಂಡು ಕೊಟ್ಟು ಬರುತ್ತೇವೆ."

ನನಗೋ ಗಾಬರಿ. ಜಗ್ಗಿದರೂ ಹೊರ ಬರದ ಎಲುವುಗಳು ತಮ್ಮಿಂದ ತಾವೇ ಮುರಿದುಬೀಳುವದು ಸಾಮಾನ್ಯವೇ? ಎಲುವು ಮುರಿದರೂ ಮುರಿದು ಬಿದ್ದರೂ ನೋವಾಗದೇ ಇರುವದು ಸೋಜಿಗವಲ್ಲವೆ? ಇದೆಲ್ಲ ನಮ್ಮ ಆಟೋರಿಕ್ಷಾ, ರಸ್ತೆಗಳ ಮಹಾಮಹಿಮೆ. ಒಮ್ಮೆಲೇ ನನ್ನ ಇರವಿನ ಅರುವಾಗಿ, ಮೊದಲು ಕೆಳಗೆ ನನ್ನ ಎಲುವುಗಳು ಬಿದ್ದು ಹೋಗಿರುವವೋ ಎಂದು ಹುಡುಕಾಡಿದೆ ಏನೂ ಇದ್ದಿಲ್ಲ. ಸಮಾಧಾನವಾಯಿತು ಧೈರ್ಯವೂ ಮೂಡಿತು.

ನಾನು: "ಅಲ್ರಿ ಪಾಟೀಲ, ನೀವು ಹಿ[illegible] ಸುಮ್ಮನ ಇದ್ರ ಮುನ್ಸಿಪಾಲಿಟಿ ಮೆಂಬರ್‌ಗೊಳು, ಲಂಚ ತಿನಕೋತ ಅಡ್ಡಾಡತಾರು, ಅದಕ್ಕ ಅವರನ್ನ ನೀವು ನಿಂದರಿಸಿ ಕೇಳಬೇಕು" ಎಂದೆ ಮತ್ತೆ ಮುಂದುವರೆದು, "ಕೇಳುದೇನು ಒಬ್ಬಿಬ್ಬರನ್ನು ಉಳ್ಳಾಡಿಸಿ ಹೊಡದ ಬಿಡಬೇಕು" ಎಂದು ಸೂಚಿದೆ.

ದತ್ತೂ ಪಾಟೀಲ: "ಅವರನ್ನು ಯಾಕೆ ಹೊಡಿಬೇಕ್ರಿ ಸರ್." ನಾನು: "ಮತ್ಯಾರನ್ನು ಹೊಡಿಬೇಕಂತ?" ಅಷ್ಟರಲ್ಲಿ ಪಾಟೀಲ ಆಟೋರಿಕ್ಷಾದ ವೇಗವನ್ನು ಕಡಿಮೆಮಾಡಿದ ಸಾವಕಾಶವಾಗ ರಸ್ತೆಯ ಬದಿಗೆ ಒಯ್ದು ನಿಲ್ಲಿಸಿದ. ನನ್ನ ಮನದಲ್ಲಿ ಗೊಂದಲವೋ ಗೊಂದಲ. ಪೆಟ್ರೋಲ ಮುಗಿದಿದೆಯೋ? ಗಾಡಿ ಬ್ರೆಕ್‌ಡೌನ ಆಯಿತೋ? ಮತ್ತೇನಾದರು ಮುರಿಯಿತೋ? ಇವನೇಕೆ ಗಾಡಿಯನ್ನು ನಿಲ್ಲಿಸಿದ ಎಂದು ಹಣೆಗಂಟು ಹಾಕಿದೆ. ಪಾಟೀಲ ಏನೂ ಮಾತಾಡದೇ ಗಾಡಿಯಿಂದ ಕೆಳಗೆ ಇಳಿದ. ಬಾಗಿಲವನ್ನು ತೆರೆದ, "ಸಾಹೇಬ್ರ, ಕೆಳಗೆ ಇಳಿರಿ ಅಂದ," ನಾನು: "ರೀ ಪಾಟೀಲ ಏನಾತು ಗಾಡೀಗೆ?" ಪಾಟೀಲ: "ಅದಕೇನೂ ಅಗಿಲ್ರಿ ನೀವು ಕೆಳಗ ಇಳಿರಿ". ನನಗೆ ಹೆದರಿಕೆಯೇ ಆಗಿತ್ತು, ಮೆಲ್ಲಗೆ ಕೆಳಗೆ ಇಳಿದೆ. ನಾನು ಇಳಿಯುತ್ತಿದಂತೆ ಪಾಟೀಲ ತನ್ನ ಕಾಲಿನ ಬೂಟು ಜಗ್ಗಿ ತಗೆದ. ಏನೋ ಅಸಾಹುತ ಆಗಿದೆ ಎಂದುಕೊಂಡೆ. ಮಾತನಾಡುವಾಗ ತಪ್ಪಿದೆ, ಪಾಟೀಲ ಬಹಳ ಸಿಟ್ಟಿಗೆದ್ದಿರುವನು ಎನಿಸಿತು. "ಏನು ಪಾಟೀಲರೆ, ಇದೇನು ಇದೇನು?" ಎನ್ನುತ್ತಿರುವಾಗ ಪಾಟೀಲಕೈಯಲ್ಲಿ ಬೂಟು ಹಿಡಿದುಕೊಂಡು ನನ್ನ ಹತ್ತಿರ ಬಂದರು. "ಸಾಹೆಬ್ರ ಈ ಬೂಟು ಹಿಡಿಯಿರಿ" ನನಗೋ ಬಹಳ ಅಸಮಾಧಾನ ಇವನ ಬೂಟು ನಾನೇಕೆ ಹಿಡಿಯಬೇಕು? ಎನಿಸಿತು. "ಸಾಹೆಬ್ರ ಹಿಡಿರಿ ಅಂದ್ರ ಹಿಡಿರಿ." ನಾನು: "ಯಾಕಪಾ ಹಿಂಗ್ಯಾಕ ಮಾಡಕ ಹತ್ತಿರುವಿರಿ?"

ಪಾಟೀಲ: "ಸಾಹೆಬ್ರ ಕಾರ್ಪೊರೇಟರನ್ನ ಹೊಡಿಯಿರಿ ಎಂದಿರೆಲ್ಲ, ಅವರನ್ನ ಹೊಡದರ ಏನಾಗೂದು? ಆ ಬೂಟು ತಗೊಂಡು ನನ್ನ ಹೊಡಿರಿ ನನ್ನ ಹೊಡಿರಿ. ಇಲ್ಲೋಡ್ರಿ, ನಾನು

ಅವನಿಗೆ ಚುನಾವಣೆ ಗೆದಿಯಲಿಕ್ಕೆ ಓಟು ಹಾಕಿರುವೆ. ಅವನನ್ನು ಆರಿಸಿ ತಂದಿರುವೆ. ಅಂಥವನ ಆರಿಸಿದುದಕ್ಕೆ ನನ್ನ ಬೂಟಲೆ ಹೊಡೆಯಿರಿ."

ದತ್ತೂ ಪಾಟೀಲ ನನ್ನೆದುರು ನಿಂತಿದ್ದ ಅವನ ಕೈಯಲ್ಲಿ ಬೂಟು ಇತ್ತು. ನಾನು ನಗುತ್ತ ರಿಕ್ಷಾದಲ್ಲಿ ಕುಳಿತು: "ಪಾಟೀಲ ಜಲ್ದಿ ನಡಿಪ್ಪಾ, ಮನಿಯೊಳಗ ಕೆಲಸ ಅದಾವು" ಎಂದೆ.

ಪಾಟೀಲ: "ತಪ್ಪಾಯ್ತ್ರಿ ಸಾಹೇಬ್ರ, ನನ್ನ ವೈಮಾಲ ರೋಶ್ ಬಂದ ಬಿಟ್ಟಿತು. ನನಗ ಹಿಂಗ ಅನಿಸುತ್ತದೆ ನೋಡ್ರಿ."

ನಮ್ಮ ರಾಜಕಾರಣಿಗಳನ್ನು, ಮಂತ್ರಿಗಳನ್ನು ಚುನಾಯಿತ ಪ್ರತಿನಿಧಿಗಳನ್ನು ನೋಡಿದಾಗ ಎಷ್ಟು ಜನರಿಗೆ ದತ್ತೂ ಪಾಟೀಲನಂತೆ ಅನಿಸುವುದಿಲ್ಲ? ಅಲ್ಲೊಬ್ಬ ಇಲ್ಲೊಬ್ಬ ಒಳ್ಳೆಯ ವ್ಯಕ್ತಿ ಇರಬಹುದು, ಚುನಾವಣೆಯಲ್ಲಿ ಗೆದೆಯುವ ತನಕ ಒಂದು ಮಾತನಾಡುವದು, ಗೆದ್ದ ತಕ್ಷಣ ಮಾತಾಡಿದ್ದನ್ನು ಮರೆತು ಮಾಡಬಾರದ್ದನ್ನು ಮಾಡುವದು ಪ್ರಾರಂಭವಾಗುತ್ತದೆ. ಓಟು ಹಾಕಿದ ಜನ ಚುನಾವಣೆ ಮುಗಿದ ಮೇಲೆ ಕಾಲ ಕಸವಾಗುತ್ತಾರೆ, ನನಗಂತೂ ಪಾಟೀಲನ ವಿಚಾರ ಮೇಲಿಂದ ಮೇಲೆ ಎದುರು ಬರುತ್ತದೆ. ದತ್ತೂ ಪಾಟೀಲನ ಆಟೋರಿಕ್ಷಾದಲ್ಲಿ ನಿಮ್ಮನ್ನು ಕೂಡ್ರಿಸಿಕೊಂಡು ತಗ್ಗು ದಿನ್ನೆಗಳ ರಸ್ತೆಯಲ್ಲಿ ಹಾಯ್ದು ಬಂದೆನು, ಕ್ಷಮಿಸಿರಿ.



'ಶಿಕ್ಷಣದಂತೆ, ಸಾಕ್ಷರತೆ ಐತಿಹಾಸಿಕ ಬದಲಾವಣೆಯ ಒತ್ತಡವನ್ನು ತರುವುದಿಲ್ಲ. ಅದು ಬಿಡುಗಡೆಯ ಸಾಧನೆ ಮಾತ್ರವೇ ಅಲ್ಲ, ಎಲ್ಲಾ ಸಾಮಾಜಿಕ ಬದಲಾವಣೆಗೆ ಅಗತ್ಯವಾದ ಉಪಕರಣ.'

—(ಪರ್ಸೆಪೊಲಿಸ್ ಘೋಷಣೆ, ೧೯೭೫)

ದೇಶದಲ್ಲಿ ರಾಜಕೀಯ ನಿರ್ಧಾರದಿಂದ ಮಾತ್ರ ಅನಕ್ಷರತೆಯ ಮೇಲೆ ಜಯಗಳಿಸಲು ಸಾಧ್ಯ.

—(ಯುನೆಸ್ಕೊ)

ಗುಬ್ಬಿಯ ಗೂಡು

ಸುಮತಿ ಪಾಂಗಾಳ

೩೦೩-ಮಾನಸ ಅಪಾರ್ಟ್‌ಮೆಂಟ್

ಬೆಂದೂರು—ಲೋಬೋ ಲೇನ್ ಮಂಗಳೂರು-೨

ಬಾಗಿಲಿಗೆ ಜಡಿದ 'ಗೋಡ್ರೆಜ್' ಬೀಗವನ್ನು ತೆರೆದು ಒಳಗೆ ಕಾಲಿಟ್ಟ ಕೂಡಲೇ ಬಾಗಿಲಿನ ಸಂದಿನಿಂದ ತುರುಕಿದ ಕಾಗದ ಆನಂದನ ಕಣ್ಣಿಗೆ ಬಿತ್ತು. ಎಡೆಗೈಲಿ ಕೆಲವು ಮೆಡಿಕಲ್ ಜರ್ನಲ್ಸ್ ಹಿಡಿದಿದ್ದಂತೆಯೇ ಬಗ್ಗಿ ಕಾಗದವನ್ನು ಎತ್ತಿಕೊಂಡ.

ಮುತ್ತು ಪೋಣಿಸಿದಂತಿರುವ ಅಪ್ಪನದೇ ಹಸ್ತಾಕ್ಷರವದು. ಅಪ್ಪ ಹೇಳುವುದಿತ್ತು.... ವ್ಯಕ್ತಿಯ ಹಸ್ತಾಕ್ಷರ ನೋಡಿ ಆತನ ಆಂತರಿಕ ಮತ್ತು ಬಾಹ್ಯ ವ್ಯಕ್ತಿತ್ವಗಳನ್ನು ಅಳೆಯಬಹುದೆಂದು. ಆತುರದಿಂದ ಪತ್ರವನ್ನು ಒಡೆದು ಓದಿದ. ಅಮ್ಮನ ವರ್ಷಾಂತಿಕಕ್ಕೆ ಆಹ್ವಾನವಿತ್ತ ಕಾಗದವದು.

ಹೌದಲ್ಲವೆ?....ಅಮ್ಮ ಸತ್ತು ಈಗಾಗಲೇ ಒಂದು ವರ್ಷಕ್ಕೆ ಸಮೀಪಿಸಿತು. ಅಪ್ಪ ಹ್ಯಾಗಿದ್ದಾರೋ? ಒಂದು ಘಳಿಗೆ ಮನಸ್ಸು ಡೋಲಾಯಮಾನವಾಯಿತು. ಅಪರಾಧಿ ಪ್ರಜ್ಞೆ ಧುತ್ತೆಂದು ಕಾಡಿತು. ಕಾಗದವನ್ನು ಪುನಃ ಓದಿದ ಆನಂದ. ಕಾಗದ ಮಡಿಚಿದವನೇ ಕಣ್ಣುಗಳನ್ನು ಮುಚ್ಚಿದ. ಒಳಗಣ್ಣುಗಳ ಮುಂದೆ ಹಳ್ಳಿಯ ನೂರಾರು ದೃಶ್ಯಗಳು ತೇಲಿ ಬಂದವು. ಅಷ್ಟರಲ್ಲಿ ಚಿತ್ರ ಬಂದದ್ದರಿಂದ ಆತನ ಯೋಚನೆಗಳಿಗೆ ಕಡಿವಾಣ ಬಿತ್ತು.

"ಯಾರದೋ ಕಾಗದ ಬಂದಂತಿದೆ. ಬಹುಶಃ ಊರಿನಿಂದ ಮಾವನವರದಿರಬೇಕು. ಏನಂತೆ ಮುದುಕನಿಗೇ ಕಾಲು ನೋವು, ಕೀಲುನೋವು, ತಲೆ ತಿರುಗು?.."

"ಇಕೋ ನೀನೇ ಓದು. ನಾಳೆ ಬೆಳಗ್ಗೆ ನಮ್ಮ ಕಾರಲ್ಲೇ ಊರಿಗೆ ಹೊರಡೋಣ. ಡಾಕ್ಟರ್ ಶ್ಯಾಮಲ ಮತ್ತು ಡಾಕ್ಟರ್ ಶೇಖರ್ ಅವರನ್ನು ಎರಡು ದಿನಗಳ ಮಟ್ಟಿಗೆ ಆಸ್ಪತ್ರೆಯನ್ನು ನೋಡಿಕೊಳ್ಳಲು ಹೇಳೋಣ. ಅಪ್ಪ ಒಬ್ಬರೇ ಅವರಿಗೂ ಹುಷಾರಿಲ್ಲ" ಎಂದು ಆನಂದ ಎನ್ನುತ್ತಿದ್ದಂತೆಯೇ....

"ಹೌದು ಹೌದು....ನಿಮಗೊಬ್ಬರಿಗೇ ಯಾರಿಗೂ ಇಲ್ಲದ ಅಪ್ಪ. ಅಲ್ಲಿಗೆ ಹೋಗಿ ಇನ್ನು ಅಪ್ಪಯ್ಯ ಹ್ಯಾಗಿದ್ದೀರಿ? ಆರೋಗ್ಯವಾ?....ಎಂದು ವಿಚಾರಿಸಬೇಡಿ ರಾಮಾಯಣವನ್ನೇ ಪ್ರಾರಂಭಿಸುತ್ತಾರೆ. ಇಂತಹ ವಿಚಾರಣೆಯಿಂದಲೇ ಮುದುಕರ ಆರೋಗ್ಯ ಇನ್ನಷ್ಟು ಕೆಡೋದು. ಅಲ್ಲಿ ಆದಷ್ಟು ಮಾತು ಕಡಿಮೆ ಮಾಡಿ. ಹೊಗೋಣ....ಕೆಲಸ ಮುಗಿಸಿ ಬಂದು

ಬಿಡೋಣ"....ಎಂದು ಚಿತ್ರ ಖಾರವಾಗಿಯೇ ಹೇಳಿದಳು.

ಆನಂದ ಮತ್ತು ಚಿತ್ರರದು ಪ್ರೇಮ ವಿವಾಹ. ಮೆಡಿಕಲ್ ಕಾಲೇಜಿನಲ್ಲಾದ ಪರಿಚಯ ಪ್ರೇಮಕ್ಕೆ ತಿರುಗಿ, ಪ್ರೇಮ ಪ್ರಣಯವಾಗಿ, ಪರಿಣಯದಲ್ಲಿ ಸಮಾಪ್ತಿಯಾಗಿತ್ತು. ಜಾತಿಯಲ್ಲಿ ಬೇರೆಯಾಗಿದ್ದರೂ ಮಗನ ಹಠದ ಸ್ವಭಾವವನ್ನು ಬಲ್ಲ ಹೆತ್ತವರು ಆತನ ಆಸೆಗೆ ಕಲ್ಲು ಹಾಕಲಿಲ್ಲ. ಮನದಾಳದ ತುಮುಲವನ್ನು ಯಾರಿಗೂ ಕಾಣಿಸದೆ ಹುಡುಗಿಯ ಕಡೆಯವರು ಮಾತ್ರವೇ ನಿಶ್ಚಯಿಸಿದ ದಿನ, ನಿರ್ಧರಿಸಿದ ಕಲ್ಯಾಣ ಮಂಟಪಕ್ಕೆ ಹೋಗಿ ವಧೂವರರ ಮೇಲೆ ಅಕ್ಷತೆಕಾಳು ಹಾಕಿ ಕರ್ತವ್ಯ ನಿರ್ವಹಿಸಿ ಬಂದಿದ್ದರು.

ವಿವಾಹವಾದ ಕೆಲವೇ ದಿನಗಳಲ್ಲಿ ಹುಡುಗಿಯ ಹೆತ್ತವರ ಸಹಾಯದಿಂದ "ಚಿತ್ರ ನರ್ಸಿಂಗ್ ಹೋಂ" ತೆರೆದದ್ದೂ ಆಯಿತು. ಚಿತ್ರ ಪ್ರಸೂತಿ ತಜ್ಞಳಾದರೆ ಆನಂದ ಮಕ್ಕಳ ತಜ್ಞ.

ಊರಿಗೆ ಹಿಂದಿರುಗಿದ ಪತ್ನಿಯಾವಾಗಲೂ ವಿಮನಸ್ಕಳಾಗಿರವುದನ್ನು ಅರಿತರು ಸೀನಪ್ಪ ಮಾಸ್ತರರು. ಮುಸ್ಸಂಜೆಯ ಹೊತ್ತಿನಲ್ಲಿ ದೇವರ ಎದುರು ದೀಪ ಹಚ್ಚಿದವರೇ,

"ದೇವರೇ ಹೀಗ್ಯಾಕಪ್ಪ ನಮ್ಮನ್ನು ಪರೀಕ್ಷಿಸುತ್ತಿ?"....ಎಂದು ಮನದಾಳದಲ್ಲಿ ಪ್ರಶ್ನಿಸಿದವರೇ....ಹೂಂ....ಎಂದು ದೀರ್ಘವಾಗಿ ನಿಟ್ಟುಸಿರು ಬಿಟ್ಟರು—ಹಿರಿಯ ಮುತ್ತೈದೆ ಭಾಗ್ಯಮ್ಮ "ನೋಡು ಭಾಗ್ಯ ನಿನ್ನ ಮನಸ್ಸು ನನಗೂ ಅರ್ಥವಾಗುತ್ತಿದೆ. ಇದೇಕೆ ನಮ್ಮ ಜೀವನದ ಸಂಧ್ಯಾಕಾಲದಲ್ಲಿ ಹೀಗಾಯ್ತು ಅಂತ ನಿನ್ನ ಮನಸ್ಸು ಹೇಳುತ್ತೆ ಅಲ್ಲವೆ? ಗೀತೆಯ ಶ್ಲೋಕ ಏನು ಹೇಳುತ್ತೆ? ..."ಕರ್ಮಣ್ಯೇ ವಾಧಿಕಾರಸ್ತೇ ಮಾ ಫಲೇಷು ಕದಾಚನ ಎಂದು ತಾನೇ?"

ಚಿಕ್ಕಂದಿನಲ್ಲಿ ಮಕ್ಕಳನ್ನು ತಿದ್ದಿ, ಗುದ್ದಿ ಸರಿಯಾದ ದಾರಿಯಲ್ಲಿ ಬೆಳೆಯಿಸುವುದು ನಮ್ಮ ಕರ್ತವ್ಯ. ನಮ್ಮಿಬ್ಬರಿಗೆ ಎಷ್ಟು ಕಷ್ಟವಾದರೂ ಮಕ್ಕಳೆದುರಿನಲ್ಲಿ ಕಿಂಚಿತ್ತೂ ತೋರಿಸದೆ ವಿದ್ಯೆ ಕೊಟ್ಟಾಯಿತು. ಅಲ್ಲಿಗೆ ನಮ್ಮ, ಹೆತ್ತವರ ಕರ್ತವ್ಯ ಮುಗಿಯಿತು" ನಮಗೆ ಅದೃಷ್ಟವಿದ್ದರೆ ಆ ಮೇಲೆಯೂ ಮಕ್ಕಳು ನಮ್ಮನ್ನು ಪ್ರೀತಿಸುತ್ತಾರೆ. ನಾವೇ ದುರದೃಷ್ಟದವರಾದರೆ ಅವರನ್ಯಾಕೆ ಹಳಿಯಬೇಕು?"....ಎಂದು ಸಾಂತ್ವನದ ಮಾತುಗಳನ್ನಾಡಿ ಆಕೆಯ ಕೈಹಿಡಿದು ಪಕ್ಕದಲ್ಲಿ ಕೂರಿಸಿಕೊಂಡರು. ಅವರನ್ನು ನೋಡುತ್ತಿದ್ದಂತೆಯೇ ಭಾಗ್ಯಮ್ಮನ ಕಣ್ಣುಗಳು ತುಂಬಿ ಬಂದವು.

"ಅಲ್ಲಾರೀ....ಒಬ್ಬರಲ್ಲ ಇಬ್ಬರು ಗಂಡು ಮಕ್ಕಳಿದ್ದು ಹೀಗಾಗುವುದೆಂದರೆ ಆಶ್ಚರ್ಯವಲ್ಲವೇನ್ರಿ? ನಮ್ಮ ಶಿವು 'ಇಂಜಿನಿಯರಿಂಗ್' ಪಾಸಾದಾಗಲೇ ನಾನು ಎಷ್ಟೊಂದು ಹೆಮ್ಮೆ ಪಟ್ಟಿದ್ದೆ? ಆವ ಅಮೇರಿಕಕ್ಕೆ ಹೋದಾಗಲಂತೂ ನನ್ನಂತಹ ಅದೃಷ್ಟವಂತ ತಾಯಿ ಯಾರೂ ಇಲ್ಲವೆಂದು ಮನಸ್ಸಿನಲ್ಲೇ ಸ್ವರ್ಗಕ್ಕೆ ಮೂರೇ ಮೂರು ಗೇಣು ಎಂದು ಹಾರಿದ್ದೆ. ಊರಿನಲ್ಲಿರುವಾಗ ಧರ್ಮ, ಗುರುಹಿರಿಯರು, ಸಂಪ್ರದಾಯ, ರೀತಿ ರಿವಾಜುಗಳ ಮೇಲೆ ಅಷ್ಟೊಂದು ನಂಬಿಕೆಯಿದ್ದವ ಹೋಗಿ ಹೋಗಿ ಅಲ್ಲಿನ ಬಿಳಿ ತೊಗಲಿನವಳನ್ನು ಮದುವೆಯಾದನೆಂದರೆ ನಂಬಲಿಕ್ಕೆ ಸಾಧ್ಯವೆ? ಯಾರ

ದೃಷ್ಟಿಯೋ ನಮ್ಮ ಮೇಲೆ, ನಮ್ಮ ಮಕ್ಕಳ ಮೇಲೆ ಬಿದ್ದಿರಬೇಕು. ಒಂದೇ ಒಂದು ಸಾರಿ ನಮ್ಮನ್ನು ನೋಡಲಾದರೂ ಬಂದನೇ ಆಮೇಲೆ?....ಎಂಟು ವರ್ಷಗಳಾದುವು ಅವನನ್ನು ನೋಡಿ."

"ಅಯ್ಯೋ ನಿನ್ನಂತಹ ತಿಳುವಳಿಕೆಯುಳ್ಳ ಹೆಂಗಸು ಹೇಳುವ ಮಾತೆ ಇದು? ಹಕ್ಕಿಗಳನ್ನು ನೀನು ನೋಡಿಲ್ಲವೆ? ಮೊಟ್ಟೆಯೊಡೆದು, ಮರಿಯಾಗಿ, ರೆಕ್ಕೆಗಳು ಬಲಿತು ಅವು ಹಾರಲು ಪ್ರಾರಂಭಿಸಿದ ಕೂಡಲೇ ಜೊತೆಗಾರ ಹಕ್ಕಿಯೊಂದಿಗೆ ಪುರ್ರನೆ ಹಾರಿ ಹೋಗುವುದಿಲ್ಲವೆ? ನನ್ನ ಅಮ್ಮ ಅಪ್ಪ" ನಾನು .ಮರಿಯಿದ್ದಾಗ ಕಷ್ಟಪಟ್ಟು ಎಲ್ಲೆಲ್ಲಿಂದಲೋ ಆಹಾರ ತಂದವರು, ಮಳೆ ಬಿಸಿಲಿನಿಂದ ರಕ್ಷಿಸಲು ಗೂಡು ಕಟ್ಟಿದವರು ಎಂದು ಒಮ್ಮೆಯಾದರೂ ಭಾವಿಸುತ್ತವೆಯೇ? ಅದು ಪ್ರಕೃತಿಯ ಸಹಜ ಪ್ರವೃತ್ತಿ. ಎಂದೆಂದಿಗೂ ಪ್ರತಿಯೊಂದು ಜೀವಿಯೂ ತನ್ನ ಭವಿಷ್ಯದತ್ತವೇ ನೋಡುವುದೇ ಹೊರತು ಹಿಂದಿನದ್ದನ್ನಲ್ಲ. ತುತ್ತು ಕೊಟ್ಟವರಿಗಿಂತಲೂ ಮುತ್ತು ಕೊಡುವವರೇ ಮೇಲು ಕಣೇ. ನನ್ನದು ಪಲಾಯನವಾದವೆಂದು ಭಾವಿಸಬೇಡ. ಇದ್ದುದರಲ್ಲಿ ತೃಪ್ತಿ ಪಟ್ಟುಕೋ. ಈಗ ನಾವೇ ಎರಡು ಮುದಿ ಹಕ್ಕಿಗಳಂತಿರೋಣ. ಅಷ್ಟು ಪುಟ್ಟ ಹಕ್ಕಿಗಳಾದರೂ ಗುಬ್ಬಚ್ಚಿಗಳ ಕಥೆ ಗೊತ್ತಿದೆಯೇ? ಮುದಿಯಾದರೂ ಅವೇ ಜೊತೆ ಹಕ್ಕಿಗಳು ಸಾಯುವವರೆಗೂ ಒಂದೇ ಗೂಡಿನಲ್ಲಿರುವುವಂತೆ. ಒಟ್ಟಿಗೆ ಹಾರುತ್ತವೆಯಂತೆ. ಹಾಗೆಯೇ ನಮ್ಮ ಪುಟ್ಟ ಮನೆಯಲ್ಲಿ ನಾವು ಮುದಿ ಹಕ್ಕಿಗಳು"....ಎಂದು ಇನ್ನೂ ಭಾಗ್ಯಮ್ಮನ ಹತ್ತಿರ ಭುಜಕ್ಕೆ ಭುಜ ತಾಗಿಸಿ ಕುಳಿತರು ಮಾಸ್ತರರು.

ಅವರನ್ನು ನೋಡುತ್ತಾ ಪತ್ನಿಗೆ ಕಣ್ಣುಗಳು ತುಂಬಿ ಬಂದವು. "ಒಂದು ಹೆಣ್ಣು ಮಗಳಾದರೂ ಇದ್ದಿದ್ದರೆ....ಹೀಗಾಗುತ್ತಿರಲಿಲ್ಲವೋ 'ಏನೋ? ಎಷ್ಟೆಂದರೂ ಹೆಂಗರುಳು. ಇನ್ನೊಂದು ಹೆಣ್ಣಿನ ಮನಸ್ಸನ್ನು ಅರಿಯಲು ಪ್ರಯತ್ನಿಸುತ್ತಿತ್ತೋ ಏನೋ ?"

"ಎಲ್ಲವೂ ನಿನ್ನ ಭ್ರಮೆ. ನೋಡು ಭಾಗ್ಯ, ಕಷ್ಟ ಸುಖಗಳನ್ನು ಯುಗಾದಿಯ ಬೇವು ಬೆಲ್ಲದಂತೆ ಜೊತೆಯಾಗಿ ಹಂಚಿಕೊಂಡು ತಿನ್ನಬೇಕು. ಮಕ್ಕಳು ಚಿಕ್ಕವರಿದ್ದಾಗ ನಮ್ಮನ್ನು ಎಷ್ಟೊಂದು ಪ್ರೀತಿಸುತ್ತಿದ್ದರು?....ಬದುಕಿನ ಆ ಸಿಹಿಯನ್ನು ಮಾತ್ರವೇ ನೆನಪಿಸಿಕೊಳ್ಳೋಣ."

"ಈಗ ಸಿಹಿನೆನಪನ್ನೇ ಎಣಿಸಿಕೊಂಡು ಇರುತ್ತೀರೋ ಅಥವಾ ಫಲಾಹಾರಕ್ಕೆ ಏಳುತ್ತೀರೋ" ಎಂದು ಭಾಗ್ಯಮ್ಮ ಕೈಯನ್ನು ನೆಲಕ್ಕೆ ಊರಿ ಪ್ರಯಾಸದಿಂದ ಮೇಲೆದ್ದರು. ಇದಾಗಿ ಒಂದೇ ಒಂದು ವಾರದಲ್ಲಿ ಬಚ್ಚಲಿನಲ್ಲಿ ಬಿದ್ದವರು ಪ್ರಜ್ಞೆ ಕಳಕೊಂಡರು. ಮಗ ಆನಂದನಿಗೆ ತಾಯಿ ಪಾರ್ಶ್ವವಾಯುವಿನಿಂದ ಮಲಗಿದ್ದಾಳೆ ಎಂದು ತಿಳಿಸಿದಾಗ ಆತ ಬರೆದಿದ್ದ ಅಪ್ಪನಿಗೆ...."ಅಮ್ಮನನ್ನು ಕರೆದುಕೊಂಡು ಇಲ್ಲಿಗೆ ಬನ್ನಿರಿ. ನಮ್ಮ 'ನರ್ಸಿಂಗ್ ಹೋಂ'ನಲ್ಲಿಯೇ ಇರಲಿ" ಎಂದು.

ಬಲಗೈ ಬಲಗಾಲಿನ ಸಾಮರ್ಥ್ಯವನ್ನು ಕಳೆದುಕೊಂಡಿದ್ದರೂ ಭಾಗ್ಯಮ್ಮನ ಇತರ ಅಂಗಾಂಗಳು ಸರಿಯಾಗಿಯೇ ಇದ್ದುವು. ಕೆಲವೇ ದಿನಗಳಲ್ಲಿ ಗಂಡನ ಆಸರೆಯಿಂದ

ಕಾಲೆಳೆದುಕೊಂಡು ಕೈಯ್ಯನ್ನು ಮಡಚಿಟ್ಟುಕೊಂಡೇ ಮನೆಯೊಳಗೆ ನಡೆದಾಡುವಂತಾದರು. "ಎಷ್ಟು ಮಾತ್ರಕ್ಕೂ ಅಲ್ಲಿಗೆ ಹೋಗುವುದು ಬೇಡ. ಸಾಯುವುದಾದರೂ ನಾನಿಲ್ಲಿಯೇ ನಿಮ್ಮ ತೊಡೆಯಲ್ಲಿ ತಲೆಯಿರಿಸಿಕೊಂಡೇ ಸಾಯುವೆ" ಎಂದು ಖಡಾಖಂಡಿತವಾಗಿ ನುಡಿದಿದ್ದರು.

ಮಗ ಮದುವೆಯಾಗಿ ಬೇರೆ ಮನೆ ಮಾಡಿದಾಗ ಆತನ ಒತ್ತಾಯಕ್ಕೆ ಅಲ್ಲಿಗೆ ಹೋದಾಗಿನ ನೆನಪು ಇನ್ನೂ ಹಸಿಯಾಗಿತ್ತು ಭಾಗ್ಯಮ್ಮನಿಗೆ. 'ಚಿತ್ರಾ ನರ್ಸಿಂಗ್ ಹೋಂ'ನ ಹತ್ತಿರವೇ ಆಧುನಿಕ ರೀತಿಯಲ್ಲಿ ಕಟ್ಟಿಸಿದ ಎಲ್ಲಾ ಸೌಕರ್ಯಗಳಿರುವ ಮನೆಯದು. ತಮ್ಮ ರೂಮಿಗೆ ತಾಗಿಯೇ ಪಾಶ್ಚಾತ್ಯ ರೀತಿಯಲ್ಲಿ ಅಳವಡಿಸಿರುವ ಬಾತ್‌ರೂಂ....ರೂಮಿನಲ್ಲಿ ಡಬ್ಬಲ್ ಮಂಚ, ಫಂಕ, ಲೈಟು ಒಂದೇ ಎರಡೇ ಎಲ್ಲವೂ ಇದ್ದವು.

ಬೆಳ್ಳಂಬೆಳ್ಳಗ್ಗೆ ಬೆಡ್‌ಕಾಫಿ ಕುಡಿದು ಮಗ ಸೊಸೆ ಆಸ್ಪತ್ರೆ ಸೇರಿದರೆ, ಅಲ್ಲಿಯ ಒಬ್ಬಳು ಆಯಾ ಬಂದು ತಿಂಡಿ, ಅಡುಗೆ ಮಾಡಿರಿಸಿ ಹೋಗುತ್ತಿದ್ದಳು. ಸಮಯವಿದ್ದಾಗ ಒಬ್ಬೊಬ್ಬರೇ ಬಂದು ತಿಂಡಿ ಮುಗಿಸಿ ಹೋಗಿ, ಮಧ್ಯಾಹ್ನ ಪುನಃ ಬಂದು ಒಬ್ಬೊಬ್ಬರಾಗಿ ಅಡುಗೆಯನ್ನು ಪುನಃ ಬಿಸಿ ಮಾಡಿ ಉಣ್ಣುತ್ತಿದ್ದರು. ಹೀಗಾಗಿ ಮಗ, ಸೊಸೆಯರೊಂದಿಗೇ ಕುಳಿತು ಉಣ್ಣುವ ಭಾಗ್ಯವೂ ಇಲ್ಲ. ಇನ್ನು ನೆರೆಕರೆಯವರ ಮುಖದರ್ಶನ ಮೊದಲೇ ಇಲ್ಲ. ಇಷ್ಟು ಹೆಸರಾಂತ ಡಾಕ್ಟರರ ತಂದೆ ತಾಯಿಯರು ಸಾಮಾನ್ಯ ಜನರೊಂದಿಗೆ ಬೆರೆಯಬಹುದೇ?

ಹಲವು ವಾರ್ತಾ ಪತ್ರಿಕೆಗಳನ್ನು ತಮಗೆ ಓದಲು ಪುರುಸೊತ್ತಿಲ್ಲವೆಂದು ಒಂದೇ ಒಂದು ಇಂಗ್ಲೀಷ್ ಪತ್ರಿಕೆಯನ್ನು ಆಸ್ಪತ್ರೆಗೇ ತರಿಸುತ್ತಿದ್ದು, ಅದನ್ನೇ ರಾತ್ರಿ ಮನೆಗೆ ತಂದು ಓದುತ್ತಿದ್ದರು ಆನಂದ ಚಿತ್ರರು. ಕನ್ನಡ ಪುಸ್ತಕಗಳಂತೂ ಮನೆಯ ಸಮೀಪವೇ ಸುಳಿಯುತ್ತಿರಲಿಲ್ಲ. ಹೀಗಾಗಿ ಹೊತ್ತು ಕಳೆಯುವುದೇ ಕಷ್ಟವಾದಾಗ ಮೆಲ್ಲನೆ ಭಾಗ್ಯಮ್ಮ ಸಮಯ ಸಾಧಿಸಿ :

"ಚಿತ್ರಾ, ನಾಳೆಯಿಂದ ನಾನೇ ಅಡುಗೆ ಮಾಡುತ್ತೇನೆ. ನಾವಿರುವ ಕೆಲವು ದಿನ ನನಗೂ ಹೊತ್ತು ಹೋದಂತಾಯಿತು" ಎಂದಾಗ,

"ನಿಮ್ಮ ಹಳೆಕಾಲದ ಉಪ್ಪಿನ ಹಿಟ್ಟು, ಮೆಣಸಿನಕಾಯಿ, ಕಾಯಿಹುಳಿ, ತಂಬಳಿ ನಮಗೆ ಸೇರೋಲ್ಲ. ಅಲ್ಲದೆ ಈಗ ನೀವಿದ್ದೀರೆಂದು ಅಡುಗೆ ಮಾಡಿ ಅಭ್ಯಾಸ ಮಾಡಿಬಿಟ್ಟರೆ ಮುಂದೆನನಗೆ ಸಮಸ್ಯೆಯಾದೀತು. ಮುಂದಕ್ಕೆ ಆಕೆಗೆ ಆಗುವ ಸಮಸ್ಯೆಗಿಂತಲೂ ಭಾಗ್ಯಮ್ಮನ ಇಂದಿನ ಸಮಸ್ಯೆ ದೊಡ್ಡದಾಗಿತ್ತು. ಒಂದು ದಿನ ವಿಪರೀತ ಸೆಕೆಯೆಂದು 'ಫ್ರಿಜ್ಜ'ನ ನೀರನ್ನಾದರೂ ಕುಡಿಯೋಣವೆಂದು ತೆರೆದರೆ ಹೊರಗಿನಿಂದ ಮೊಟ್ಟೆಗಳ ಸಾಲು,ಫ್ರೀಝರನಲ್ಲಿ ಮಾಂಸ ಮೀನು....ಮುಚ್ಚಿರಿಸಿದ್ದ ಪಾತ್ರೆಗಳಲ್ಲಿ 'ಏನೇನಿತ್ತೋ?....ರಾಮಾ....ರಾಮಾ.... ಆನಂದ ನಿನಗೆ ಇದೇ ಮಹಾನಂದವೇ?.... ಅಯ್ಯೋ : ನಿನ್ನ ಹಣೆಬರಹವೇ? ಇವನ್ನೆಲ್ಲ ಮುಟ್ಟಿ ನಾನು ಮೈಲಿಗೆಯಾದೆನಲ್ಲ. ಗಾಂಧೀಜಿಯವರ ಮೂರು ಕೋತಿಗಳಂತೆ ಬಾಯಿ, ಕಣ್ಣು ಕಿವಿಗಳನ್ನು ಮುಚ್ಚಿ

ಕೊಂಡಿರಲು ದೇವರು ಬುದ್ಧಿ ಕೊಡಬಾರ ದಿತ್ತೇ?...." ಎಂದು ಕೂಡಲೇ ತಣ್ಣೀರಿನಲ್ಲಿ ತಲೆಗೆ ಸ್ನಾನ ಮಾಡಿಯೇ ಬಿಟ್ಟಿದ್ದರು.

ಭಾಗ್ಯಮ್ಮ ಅಂದೇ ನಿರ್ಧರಿಸಿದರು. ನಾವು ದೂರದೂರವಿರುವುದೇ ಒಳ್ಳೆಯದು. ದಿನಕ್ಕೊಂದು ಸ್ವಲ್ಪ ಹೊತ್ತಾದರೂ ನೋಡದೆ, ಮಾತನಾಡದೆ ಇರುವ ಬದಲು ಪ್ರತ್ಯೇಕವೇ ಇದ್ದರೆ ಎಲ್ಲರಿಗೂ ಹಿತಕರ. ನಮ್ಮ ಮಕ್ಕಳ ಕೀರ್ತಿ ನೋಡಿ ಕರುಬು ತ್ತಿದ್ದವರು ಬಾಯಿಗೆ ಬಂದಂತೆ ಮಾತನಾಡು ವುದು ನನಗಿಷ್ಟವಿಲ್ಲ. ಒಂದುದಿನ ನಮ್ಮ ಮಕ್ಕಳ ಸಂಬಂಧ ಇಷ್ಟು ಶಿಥಿಲವಾಗ ಬಹುದೆಂದು ಕನಸಿನಲ್ಲೂ ಯೋಚಿಸಿರಲಿಲ್ಲ.

ಬಂದು ನಾಲ್ಕೇ ದಿನಗಳಲ್ಲಿ ಭಾಗ್ಯಮ್ಮ ಪತಿಯೊಡನೆ, "ರೀ ನಾವು ನಾಳೆಯೇ ನಮ್ಮೂರಿಗೆ ಹೋಗೋಣ. ನನ್ನಿಂದ ಇನ್ನು ಇಲ್ಲಿರಲು ಸಾಧ್ಯವಿಲ್ಲ"....ಎಂದಾಗ

"ಸಮಾಧಾನವೇ ಮಾನವನಿಗೆ ಪ್ರಧಾನ ಕಣೇ. ನಾವೂ ಕಾಲಕ್ಕೆ ಸರಿಯಾಗಿ ಹೊಂದಿ ಕೊಳ್ಳಬೇಕು. ಆಕೆಯನ್ನು ಮದುವೆ ಯಾದ ಮೇಲೆ ಆಹಾರ ಪದ್ಧತಿಯೂ ಬದಲಾಗಬೇಕಲ್ಲವೆ? ಇಷ್ಟಕ್ಕೂ ನಮ್ಮನ್ನೇನೂ ಇದೇ ತಿನ್ನಿರೆಂದು ಒತ್ತಾಯಿ ಸುತ್ತಿಲ್ಲವಲ್ಲ? ಹ್ಯಾಗೂ ಅವರು ಉಣ್ಣುವ ಮೊದಲೇ ನಮ್ಮದಾಗುತ್ತೆ. ಬೇಕಾದರೆ ನಮ್ಮಿಬ್ಬರ ಅಡುಗೆಯನ್ನು ನೀನೇ ಮಾಡು ವಿಯಂತೆ" ಎಂದು ಸಮಜಾಯಿಸಿದರು ಪತಿ.

ರಾತ್ರಿ ಮಗ ಮನೆಗೆ ಬರುವುದನ್ನೇ ಕಾದಿದ್ದು "ಮಗೂ ನಾವು ಊರಿಗೆ ಹೋಗುತ್ತೇವಪ್ಪ. ಹಸು ಕರು ಹಾಕುವ ದಿನವಾಯಿತು. ಎಲ್ಲಿಯಾದರೂ ಕಸ ತಿಂದು ಬಿಟ್ಟರೆ ಹಾಲಿಗೂ ಕ್ಷಾಮ." ಎಂಬ ಸಬೂಬು ಹೇಳಿ ಎಂಟು ದಿನಗಳಿಗೆಂದು ಹೋದವರು ನಾಲ್ಕೇ ನಾಲ್ಕು ದಿನಗಳಲ್ಲಿ ಹಿಂತಿರುಗಿದ್ದರು ಇನ್ನು ಮುಂದೆ ಮಗನ ಮನೆಗೆ ಇರಲು ಹೋಗಲೇ ಬಾರದೆಂದು ನಿರ್ಧರಿಸಿ.

ಆನಂದ ಮನೆಯಿಂದ ಬಂದ ಕೆಲವೇ ದಿನಗಳಲ್ಲಿ ಏನೆಲ್ಲ ನಡೆಯಿತು? ಭಾಗಮ್ಮ ದೇಹದ ಒಂದು ಪಾರ್ಶ್ವದ ಶಕ್ತಿಯನ್ನು ಕಳೆದುಕೊಂಡರು. ಆಗಿನ ದಿನಗಳಲ್ಲಿ ಹಳ್ಳಿಯವಾಸ ಈಗಿನಷ್ಟು ಕಷ್ಟಕರವಾಗಿರ ಲಿಲ್ಲಿ. ಕೆಲಸದ ಹುಡುಗ ಅಚ್ಚು ಹಿತ್ತಲಿನ, ಹಟ್ಟಿಯ ದನಕರುಗಳ ಕೆಲಸಗಳನ್ನೆಲ್ಲ ಮಾಡುತ್ತಿದ್ದ, ಅತನ ತಾಯಿ ವೆಂಕಮ್ಮ ಒಳಗಿನ ಕೆಲಸ ಕಾರ್ಯಗಳಲ್ಲಿ ನೆರವಾಗು ತ್ತಿದ್ದಳು. ಭಾಗ್ಯಮ್ಮನ ಕೈಕಾಲುಗಳಿಗೆ ಮದ್ದಿನೆಣ್ಣೆ ಹಾಕಿ, ತೀಡುವುದು, ತಿಕ್ಕು ವುದು, ಬಿಸಿ ಬಿಸಿ ನೀರಿನಿಂದ ಶಾಖ ಕೊಡು ವುದು ಮಾತ್ರವಲ್ಲ ಅಡುಗೆ ಕೆಲಸಗಳಲ್ಲಿಯೂ ನೆರವಾಗುತ್ತಿದಳು. ತಮ್ಮ ಕೈಲಾಗದವೇಲೆ ಭಾಗ್ಯಮ್ಮ ಮಡಿ ಮೈಲಿಗೆಗಳನ್ನು ಬಿಡುತ್ತಾ ಬಂದಿದ್ದರು.

ಒಂದು ದಿನ ಕಾಲು ತಿಕ್ಕುತ್ತಿರುವಾಗ ವೆಂಕಮ್ಮ.

"ಅಮ್ಮಾವ್ರೇ....ನಮ್ಮ ಅಚ್ಯುತನಿಗೆ ಮದುವೆ ಮಾಡೋಣಾಂತ"....

"ಹೆಣ್ಣು ಯಾರೇ? ಮದುವೆ ಮುಂಚೆನೇ ಅಚ್ಚು ಹೋಗಿ ಅಚ್ಯುತ ಆದ".

"ಹುಡುಗೀ ನನ್ನ ಮೊಮ್ಮಗಳು ಚೆನ್ನಿ. ಪಾಪ ತಬ್ಬಿ ಹುಡ್ಗೀ....ನಮ್ಮ ಪಂಗ್ಡದಾಗೇ ಮಾವ....ಸೊಸೇನ ಮದ್ವೆ ಆಗೊದೇ ರೂಢಿ ಕಣ್ರವ. ಹುಡ್ಗೀಗೆ ಕಿವಿಗೆ ಓಲೆ, ಕುತ್ತಿಗೆಗೆ ತಾಳಿ, ನಾವೇ ಮಾಡಿಸೋ ಣಾಂತ...."

ಸರಿ, ಸರಿ. ಅಚ್ಚು ಹೋಗಿ ಅಚ್ಯುತ ಆದ. ಚೆನ್ನಿ ಅಂದರೆ ಚಿನ್ನ ಅದರ ಬದಲು ಸುವರ್ಣ ಅಂತ ಬದಲಾಯಿಸಿ ಬಿಡು"…. ಎಂದು ನೆಗಾಡಿದರು ಭಾಗ್ಯಮ್ಮ.

"ನೀವೂ ಸರಿ. ಹುಡ್ಗೀ ಮೈಮ್ಯಾಗೆ ಒಂದು ಹುಂಡು ಚಿನ್ನ ಇಲ್ಲ. ಹೆಸ್ರನ್ನು ಸುವರ್ಣಾಂತ ಮಡಗಿದ್ರೆ ಜನ ನಗಾಕಿಲ್ವಾ?

"ಇಗೋ ವೆಂಕಮ್ಮ. . ನನಗೆ ನೀ ಬೇರೆಯಲ್ಲ. ನಿನ್ನ ಮೊಮ್ಮಗಳು ಬೇರೆಯಲ್ಲ. ನಾ ಇನ್ನು ಚಿನ್ನ ಹಾಕ್ಕೊಂಡು ಯಾರನ್ನು ಮೆಚ್ಚಿಸಬೇಕು ? ಯಾರಿಗಾಗಿ ಕಾಯ್ದಿಡಬೇಕು ? ನನ್ನೆರಡು ಚಿನ್ನದ ಬಳೆಗಳನ್ನು ಕರಗಿಸಿ "ಏನುಬೇಕೋ ಅದನ್ನು ಮಾಡಿಸು."

"ಅಮ್ಮಾವ್ರೇ….ಏನು ಮಾತವ್ವ ನಿಮ್ದು ? ನಿಮ್ಮ ಕೈಯ್ಯಾಗಿನ ಬಳೆ ನಮ್ಮ ಚೆನ್ನಿಗಾ? ಅದರ ಯೋಗ್ಯತೆಗೆ….ಅಲ್ದೇ…. ರಾಯರು ಏನಂದಾರವ್ವ…." ಎಂದಾಗ

"ನಮ್ಮವರ ಹತ್ತಿರ ಕೇಳಿಯೇ ಹೇಳಿರೋದು ಕಣೇ. ನೀನು ನನಗೆ ಮಗಳಿಗಿಂತ ಹೆಚ್ಚು. ಅಂತಾದ್ದರಲ್ಲಿ ಏನೂ ಎಣಿಸುವ ಆಗತ್ಯವಿಲ್ಲ. ಎಂದು ತನ್ನ ಎಡಗೈಯಲ್ಲಿದ್ದ ನಾಲ್ಕು ಚಿನ್ನದ ಬಳೆಗಳಲ್ಲಿ ಎರಡು ಬಳೆಗಳನ್ನು ಆಕೆಗೆ ಕೊಟ್ಟು,

"ಬೇಗನೆ ಕರಗಿಸಿ ಬೇಕಾದ್ದನ್ನು ಮಾಡಿಸಿಕೋ. ಮದುವೆಗೆ ಬರೇ ಒಂದು ತಿಂಗಳು ಉಳಿದಿರೋದು. ." ಎಂದು, ಮನಸ್ಸಿನಲ್ಲಿ ಕೃತಾರ್ಥನಾದೆನೆಂಬ ಭಾವನೆಯನ್ನು ಪಡೆದರು.

"ಈಗಿನ ಕಾಲವಾಗೆ ನಿಮ್ಮಂತ ದೇವತೆಯಂತಿರುವವರೂ ಅಪ್ರಾ ತಾಯಿ" ಎಂದು ಗದ್ಗದ ಕಂಠದಿಂದ ನುಡಿದು ಭಾಗ್ಯಮ್ಮನವರ ಕಾಲುಗಳಿಗೆ ನಮಿಸಿದಳು.

ಈ ಘಟನೆ ನಡೆದ ಒಂದೇ ವಾರದಲ್ಲಿ ಭಾಗ್ಯಮ್ಮನಿಗೆ ಹೃದಯಾಘಾತ ಉಂಟಾಗಿ ಅವರ ಬಹು ದಿವಸಗಳ ಆಸೆಯಂತೆಯೇ ಮುತ್ತೈದೆತನದಲ್ಲಿಯೇ ತೀರಿಹೋದರು. ಮದುವೆಯನ್ನು ಮುಂದುವರಿಸುವುದಾಗಿ ವೆಂಕಮ್ಮ ನಿಶ್ಚಯಿಸಿದಾಗ ಮಾಸ್ತರರು ಪ್ರತಿಭಟಿಸಿದುದರಿಂದ ನಿಶ್ಚಯಿಸಿದ ದಿನದಲ್ಲಿಯೇ ಸರಳವಾಗಿ ನಡೆಯಿತು. ಮನೆಗೆ ಬಂದ ನವದಂಪತಿಗಳು ಕಾಲಿಗೆರಗಿದಾಗ ಮಾಸ್ತರರ ಮನಸ್ಸಿನಲ್ಲಿ ಹೆಂಡತಿಯ ಔದಾರ್ಯ ಮತ್ತೆ ಮತ್ತೆ ಹಸಿರಾಯಿತು.

ಮಾಸ್ತರರ ವಿದ್ಯಾರ್ಥಿಗಳಲ್ಲಿ ಮೂರು ನಾಲ್ಕು ಮಂದಿ ಹಳ್ಳಿಯಲ್ಲಿಯೇ ಇದ್ದು ಆಸ್ತಿಪಾಸ್ತಿ ನೋಡಿಕೊಂಡಿದ್ದರು. ಅವರಲ್ಲಿ ಆಯುರ್ವೇದ ವೈದ್ಯನಾಗಿದ್ದ ನಾರಾಯಣ ಅವರ ಪಟ್ಟ ಶಿಷ್ಯ ಎನ್ನಬಹುದು. ಆತ ಆಗಾಗ ಮನೆಗೆ ಬರುತ್ತಿದ್ದಾಗ ವೈದ್ಯೋ ನಾರಾಯಣೋಹರಿ ಎಂದು ತಮಾಷೆ ಮಾಡುತ್ತಿದ್ದರು ಅವರು. ಗುರುಪತ್ನಿಯ ಮರಣದ ವಿಚಾರವನ್ನು ಆಕೆಯ ಎರಡು ಮಗಂದಿರಿಗೂ ತಿಳಿಸಿದವನೂ ಅವನೇ.

ತಾಯಿ ಸತ್ತು ಹತ್ತು ದಿನಗಳಲ್ಲೇ ಮಾಸ್ತರರಿಗೆ ಶಿವೂನ ತಂತಿ ಬಂತು— ತಾನು ಬರಲಾಗುವುದಿಲ್ಲವೆಂದು. ಆದರೆ ತಮ್ಮ ಆನಂದನಿಗೆ ಸಾವಿರ ಡಾಲರ್ ಕಳುಹಿಸಿ ಆತನ ಹತ್ತಿರ ತಾಯಿಯ ಎಲ್ಲ ಕರ್ಮಕಾರ್ಯಗಳನ್ನು ವೀಡಿಯೋ ಮಾಡಿ ನನಗೆ ಕಳುಹಿಸಿಕೊಡಬೇಕೆಂದೂ ಕೋರಿದ್ದ ತನಗೆ ಸುದ್ದಿ ಕೇಬಲ್ ಮುಖಾಂತರ ಬಂದಾಗಲೇ.

ವೀಡಿಯೋದ ಜನರೊಂದಿಗೇ ಬಂದ ಆನಂದನನ್ನು ನೋಡಿ ಊರ ಜನರಿಗೆ ಆಶ್ಚರ್ಯವಾಯ್ತು. ತಾಯಿಯ ಮೃತ ಶರೀರವನ್ನು ಚಟ್ಟದಲ್ಲಿ ಕಟ್ಟುವುದರಿಂದ ಹಿಡಿದು ಸುಡುವವರೆಗೂ 'ವೀಡಿಯೋ'ದಲ್ಲಿ ಸೆರೆಹಿಡಿಯಲಾಯಿತು. ಮಗ ಆನಂದ ಯಾವ ಕೆಲಸದಲ್ಲಿಯೂ ಮುಂದುವರಿಯದಿದ್ದು ನಾರಾಯಣ ಹೇಳಿದಂತೆ ಮಾತ್ರ ಮಾಡುತ್ತಿದ್ದ. ತಾಯಿಯ ಮರಣದ ದುಃಖದಿಂದ ಹೀಗೆ ವರ್ತಿಸುತ್ತಿದ್ದಾನೆಂದು ಊರವರು ಭಾವಿಸಿದರು. ಆ ದಿನವೇ 'ನರ್ಸಿಂಗ್ ಹೋಂ'ನಲ್ಲಿ ವಿಪರೀತ ಕೆಲಸವೆಂದು ಹೋದವನು ಪುನಃ ಹದಿಮೂರನೆಯ ದಿನ ಹೆಂಡತಿಯೊಂದಿಗೆ ಬಂದಿದ್ದ. ಬೇರೆ ಜಾತಿಯ ಹುಡುಗಿಯನ್ನು ಮದುವೆಯಾದುದರಿಂದ ಕರ್ಮಾಂಗಗಳಲ್ಲಿ ಹೆಚ್ಚಿನ ಆಸಕ್ತಿ ವಹಿಸಲಿಲ್ಲವೋ 'ಏನೋ?....'

ಅಂದಿನ ಸಂತರ್ಪಣೆ, ಊಟ ಮುಗಿದ ಮೇಲೆ ಮಾಸ್ತರರೊಂದಿಗೆ ಅಪ್ಪ—ಇದು 'ಸೀರಿಯಸ್' ಸಮಯ. ಆಸ್ಪತ್ರೆಯನ್ನು ನಮಗಿಬ್ಬರಿಗೂ ಬಿಡಲು ಅಸಾಧ್ಯ....

"ಹೌದಪ್ಪ ಅರ್ಥವಾಯ್ತು....ನೀವಿಬ್ಬರೂ ಹೋಗಿ....ನಿಮ್ಮ ಕೆಲಸವಾಯ್ತಲ್ಲ?...." ಎಂದು ನಿರ್ವಿಕಾರವಾಗಿ ನುಡಿದರು.

"ನೀವೂ ನಮ್ಮೊಂದಿಗೆ ಬನ್ನಿ ಅಪ್ಪ. ಇಲ್ಲಿ ಒಬ್ಬರೇ ಇದ್ದು....ಏನಾದರೂ ಹೆಚ್ಚು ಕಡಿಮೆಯಾದರೆ?...."

"ನಮ್ಮ ವೆಂಕಮ್ಮ, ಅಚ್ಯುತ, ಸುವರ್ಣ....ಇವರಿದ್ದಾರಲ್ಲ? ಇಷ್ಟು ದಿನವೂ ಇವರೇ ಅಲ್ಲವೇ ನಮ್ಮನ್ನು ನೋಡಿಕೊಳ್ಳುತ್ತಿದ್ದವರು?....ಅಲ್ಲದೆ ನಾನೀಗ ಇವಳಿಗೆ ಅಸೌಖ್ಯವಾದ ಮೇಲೆ ಜಾತಿ, ಗೀತಿ, ಮಡಿ, ಮೈಲಿಗೆ ಎಲ್ಲ ಬಿಟ್ಟಿದ್ದೇನಪ್ಪ. ಅವರಲ್ಲಿ ಯಾರಾದರೂ ಒಂದಿಷ್ಟು ಬೇಯಿಸಿ ಹಾಕುತ್ತಾರೆ....ಇಲ್ಲಾದರೇನು?....ಅಲ್ಲಾದರೇನು?....ಒಂದೇ ಅಲ್ಲವೇ?"

"ಅಲ್ಲಪ್ಪ ನಿಮಗೇನಾದರೂ ಹೆಚ್ಚು ಕಡಿಮೆಯಾದರೆ?...." "ದೇವರಿದ್ದಾನಪ್ಪ. ಅವಳು ಬಾಳಿ ಬದುಕಿದ, ನಿಮ್ಮನ್ನು ಇಷ್ಟು ಮೇಲಕ್ಕೆ ತಂದ ಮನೆ. ಅಲ್ಲದೆ ಮನೆಯವರೂಂತ ಯಾರೂ ಇಲ್ಲವಾದರೆ ಈ ತೋಟ, ಮನೆ ಬೇಲಿ ಇಲ್ಲದ ಹೊಲದಂತಾಗದೆ? ತೆಂಗು, ಮಾವು, ಹಲಸಿನ ಮರಗಳಲ್ಲೆಲ್ಲ ಈ ವರ್ಷ ತುಂಬ ಫಲ ಬಿಟ್ಟಿವೆ. ಹೀಗಿರುವಾಗ...."

'ಅಪ್ಪ ತೋಟವನ್ನೂ, ಮನೆಯನ್ನೂ ಯಾರಿಗಾದರೂ ಮಾರಿಬಿಡಿ' ಹಾಗಾದರೆ ನಿಶ್ಚಿಂತೆಯಿಂದಿರಬಹುದೆಂದು ಮಗ ನುಡಿದಾಗ,

'ಹಾಗೆ ನಿಂತ ಕಾಲಲ್ಲೇ ಮಾರಲು ಹೊರಟರೆ ಸರಿಯಾದ ಬೆಲೆ ಸಿಗುವುದೇ? ನಿನ್ನಮ್ಮ ನಾನು ಎಷ್ಟೊಂದು ಕಷ್ಟಪಟ್ಟು ತೆಗೆದುಕೊಂಡ ಮನೆಯಿದು?....ದನ ಕರುಗಳನ್ನು ಸಾಕಿ ಹಾಲು, ತುಪ್ಪ ಮಾರಿ, ನೆರೆಕೆರೆಯವರಿಗೆ ಚಕ್ಕುಲಿ, ಕೋಡುಬಳೆ, ಖಾರದಪುಡಿ ವಿತರಿಸಿ, ಶಾಲೆಯ 'ಪ್ರಾವಿಡೆಂಟ್ ಫಂಡಿ'ನಿಂದ ಸಾಲ ತೆಗೆದುಕೊಂಡು....ಒಂದೇ....ಎರಡೇ....ನಮ್ಮಿಬ್ಬರ ಬೆವರ ಹನಿ ಹನಿಯೂ ಈ ಮನೆಯಲ್ಲಿದೆ....'

ಮಕ್ಕಳು ಚಿಕ್ಕವರಿರುವಾಗ "ಓದುವ ಮಕ್ಕಳಿಗೆ ಬೇಡದ ವಿಚಾರಗಳನ್ನೇಕೆ ಹೇಳುವುದು" ಎಂದು ಕಷ್ಟಗಳನ್ನು ತಾವೇ ಸಹಿಸಿ

ಕೊಳ್ಳುತ್ತಿದ್ದರು ಹೆತ್ತವರು. ಮಕ್ಕಳ ಮೇಲ್ಮೆಯೇ ಅವರಿಬ್ಬರ ಜೀವನದ ಏಕೈಕ ಗುರಿಯಾಗಿತ್ತು....ಆದುದೇನು?.... ಒಬ್ಬೊಬ್ಬ ಮಗನದು ಒಂದೊಂದು ತೆರ ....ದುಃಖವನ್ನು ಸಹಿಸಿಕೊಂಡು.

"ಸರಿಯಪ್ಪ, ಒಳ್ಳೆಯ ಗಿರಾಕಿ ಬಂದರೆ ಕೊಡೋಣ. ಅದಕ್ಕೇನಂತೆ?"....ಎಂದರು.

"ಸರಿಬಿಡಿ ಅವರನ್ಯಾಕೆ ನಮ್ಮೊಂದಿಗೆ ಬರಲು ಒತ್ತಾಯಿಸುತ್ತೀರಿ? ನಮಗಿಂತ ಕೆಲಸದಾಳುಗಳೇ ಹತ್ತಿರವಾದಾಗ.... ಇಲ್ಲಿಯೇ ಸಂತೋಷವಾಗಿರಲಿ....ಎಂದು ಜೋರಿನಿಂದಲೇ ನುಡಿದಳು ಚಿತ್ರ.

ಹೆಚ್ಚು ಒತ್ತಾಯಮಾಡಿದರೆ ಮಡದಿಗೆ ಸಿಟ್ಟು ಬಂದೀತೆಂದು ಮನಸ್ಸಿಲ್ಲದ ಮನಸ್ಸಿನಿಂದ ಕಾರು ಹತ್ತಿದ ಆನಂದ. ದುಃಖ ಉಮ್ಮಳಿಸಿಬಂದರೂ ಮಡದಿಯ ಭಯದಿಂದ ಅದುಮಿ ಹಿಡಿದು ಕಾರು ಬಿಡುತ್ತಿದ್ದ ನಾಲ್ಕು ತಾಸುಗಳ ಪ್ರಯಾಣದಲ್ಲಿ ಗಂಡ ಹೆಂಡತಿಯರ ಮಾತು ಬರೀಕಡಿಮೆ. ಯೋಚನೆಗಳು ಒಂದರ ಹಿಂದೊಂದರಂತೆ ತಿರುಗುಮುರುಗಾಗಿ ಸುತ್ತುತ್ತಿರುವಾಗಲೇ ಮನೆ ಬಂದಿತು. ಮನೆಯ ಬಾಗಿಲು ತೆರೆಯುತ್ತಿದ್ದಂತೆಯೇ ಊರಿನ ಹೆಸರಾಂತ ವಕೀಲರ ಹೆಂಡತಿಗೆ ಪ್ರಸವವೇದನೆ ಪ್ರಾರಂಭಿಸಿದ ಸುದ್ದಿ ಸಿಕ್ಕಿತು. ಮೊದಲ ಹೆರಿಗೆಯಲ್ಲೂ ಆಕೆ ಚಿತ್ರಾ ನರ್ಸಿಂಗ್ ಹೋಮಿಗೇ ಬಂದಿದ್ದರು. ಒಳಹೋಗಿ ಮುಖಕ್ಕೊಂದಿಷ್ಟು ತಣ್ಣೀರು ಹಾಕಿ ಒದ್ದೆ ಕೈಯ್ಯಲ್ಲಿ ಕೂದಲನ್ನು ಒಪ್ಪಗೊಳಿಸಿ, ಚಿತ್ರಸೀದಾ ಆಸ್ಪತ್ರೆಯ ಲೇಬರ್ ವಾರ್ಡ್‌ಗೇ ನಡೆದಳು. ದಿನದ ಗಡಿಬಿಡಿಯ ಕೆಲಸಗಳಲ್ಲಿ ಆನಂದ, ಚಿತ್ರರಿಗೆ ದಿನಗಳುರುಳಿ, ವಾರಗಳಾಗಿ ತಿಂಗಳುಗಳಾ ದುದೂ ಗಮನಕ್ಕೆ ಬರುತ್ತಿರಲಿಲ್ಲ. ಇಬ್ಬರ ಧ್ಯೇಯವೂ—ಒಂದೇ ನರ್ಸಿಂಗ್ ಹೋಮಿನ ಸುಧಾರಣೆ.

ಪ್ರಾರಂಭದಲ್ಲಿ ಚಿತ್ರ ನರ್ಸಿಂಗ್ ಹೋಮಿಗೆ ಚಿತ್ರಳ ತಂದೆಯೇ ಹದಿನೈದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು.... ಹ್ಯಾಗೂ ಡಾಕ್ಟರು ಹುಡುಗ ಏನೊಂದೂ ತ್ರಾಸವಿಲ್ಲದೆ ಅಳಿಯನಾಗಿ ದೊರೆತನಲ್ಲ ಎಂದು. ಮಗಳು ಸ್ತ್ರೀರೋಗ ತಜ್ಞೆ, ಅಳಿಯ ಮಕ್ಕಳ ತಜ್ಞ. ಇಬ್ಬರ ಶಾಖೆಗಳೂ ಒಬ್ಬರದ್ದಕ್ಕೆ ಇನ್ನೊಬ್ಬರದು ಪೂರಕ. ಇದಕ್ಕಿಂತ ಹೆಚ್ಚಿನ ಹೊಂದಾಣಿಕೆ ಇದೆಯೇ? ಅಪ್ಪ ಕೊಟ್ಟ ಹದಿನೈದು ಲಕ್ಷವೂ ಸಾಲದೆ ಬಂದಾಗ.

"ನಿಮ್ಮ ಅಪ್ಪನ ಹತ್ತಿರ ಕೇಳಬಾರದೇಕೇ? ಅಷ್ಟು ದೊಡ್ಡ ಹಿತ್ತಲನ್ನು ಇಟ್ಟುಕೊಂಡು ಅವರೇನು ಮಾಡಲಿಕ್ಕಿದೆ?" ಒಂದು ಬದಿ ಮಾರಲಿ....ಎಂದು ಹೆಂಡತಿಯ ಸಲಹೆ ಮೇರೆಗೆ ತಂದೆಗೆ ಪತ್ರ ಬರೆದಿದ್ದ.

"ನೋಡಪ್ಪ ಈ ಹಿತ್ತಲಿನ ಚಿಕ್ಕ ಅಂಶವನ್ನು ಮಾರಿದರೂ ನಿನ್ನಮ್ಮ ಹೆಚ್ಚು ದಿನ ಉಳಿಯಲಾರಳು, ದಿನದ ಹೆಚ್ಚಿನ ಪಾಲು ಸಮಯವನ್ನು ಆಕೆ ಅಲ್ಲಿಯೇ ಕಳೆಯುತ್ತಿದ್ದಾಳೆ. ಮನಸ್ಸಿಗಾದ ನೋವನ್ನು ಮರೆಯಲು ಕಂಡುಕೊಂಡ ದಾರಿಯಿದು... ಹೀಗಿರುವಾಗ....ನೀನೇ ಬೇರೆ ಏರ್ಪಾಡು ಮಾಡಿಕೋ" ಎಂದು ತಿಳಿಸಿದ್ದರು. ಹೀಗಾಗಿ ಅಲ್ಲಲ್ಲಿ ಇಷ್ಟಿಷ್ಟು ಸಾಲವನ್ನು ಮಾಡಿದ್ದರು ಡಾಕ್ಟರು ದಂಪತಿಗಳು. ಸಾಲ ತೀರುವ ವರೆಗೆ ತಮ್ಮ ಸಂಸಾರ ಬೆಳೆಯುವುದು ಬೇಡವೆಂದು ನಿರ್ಧರಿಸಿದ್ದರು. ಊ

ಮಹಿಳೆಯರ, ಮಕ್ಕಳ ಯೋಗಕ್ಷೇಮದಲ್ಲಿಯೇ ದಿನದಿಂದ ದಿನಕ್ಕೆ ನರ್ಸಿಂಗ್ ಹೋಮಿನ ಹೆಸರು ಜನಜನಿತವಾಯಿತು.

ಸಾಲ ತೀರಿಸಲು ಚಿತ್ರ ಮತ್ತು ಆನಂದರು ಅತೀ ಪ್ರಯಾಸ ಪಡುತ್ತಿದ್ದರು. ಕೆಲವೊಮ್ಮೆ ಆಸ್ಪತ್ರೆಯಲ್ಲಿ ವಿಪರೀತ ಕೆಲಸವಿರುತ್ತಿತ್ತು. ಅಂತಹ ಸಮಯದಲ್ಲಿ ಅಡುಗೆ ಮಾಡುತ್ತಿದ್ದ ಆಯಾನೂ ಗೈರು ಹಾಜರಿಯಾಗಬೇಕೇ ಬರಗಾಲದಲ್ಲಿ ಅಧಿಕಮಾಸ ಬಂದಂತಾಯಿತು. ಚಿತ್ರಳಿಗೆ ಮದುವೆಯ ಮೊದಲು ಅಡುಗೆಮಾಡಿಯೇ ಅಭ್ಯಾಸವಿರಲಿಲ್ಲ. ಆಮೇಲಂತೂ ತನ್ನ ಅಡುಗೆಯ ಪ್ರಯೋಗ ಗಂಡನಿಗೆ ಹಿತವಾಗಲಾರದೆಂದು ಅಡುಗೆ ತಿಂಡಿಗೆ ಪ್ರತ್ಯೇಕ ವ್ಯಕ್ತಿಯನ್ನೇ ನೇಮಿಸಿದ್ದಳು. ಎರಡು ದಿನಗಳ ಮಟ್ಟಿಗೆ ಕಷ್ಟದಿಂದ ಸಮಯಸಾಧಿಸಿ ಆನಂದನೇ ಅನ್ನಸಾರಿನ ನಳಪಾಕ ಮಾಡಿದ್ದ. ಆಸ್ಪತ್ರೆಯ ಅವಿಶ್ರಾಂತ ದುಡಿತದೊಂದಿಗೆ ಅಡುಗೆಯ ಕೆಲಸವೂ ಬಿದ್ದಾಗ ಕೆಲವೊಮ್ಮೆ ಇಂತಹವಳನ್ನು ಮದುವೆಯಾದೆನಲ್ಲಾ ಎಂದು ಪಶ್ಚಾತ್ತಾಪ ಪಟ್ಟುದೂ ಇದೆ. ಆದರೆ ಚಿತ್ರಳೆದುರು ಕಿಂಚಿತ್ತೂ ತೋರಿಸುವಂತಿಲ್ಲ.

ಒಂದು ದಿನವಂತೂ ಆನಂದನಿಗೆ ಕಿಂಚಿತ್ತೂ ಸಮಯಸಿಗದೆ ಇಬ್ಬರೂ ಹೊಟೇಲಿಗೇ ಶರಣಾಗಬೇಕಾಯಿತು. ಅಲ್ಲಿನ ಸೋಡಾಪುಡಿ ಬೆರಸಿದ ಅನ್ನತಿಂದು ಒಂದುತರದ ಹೊಟ್ಟೆಸಂಕಟ ಪ್ರಾರಂಭವಾದಾಗ—ಚಿತ್ರ "ಅಲ್ಲಾರೀ ನಮಗೆ ಅಡುಗೆಯವರು ಸಿಗುವವರೆಗೆ ನಿಮ್ಮಮ್ಮನನ್ನೇ ಬರಲು ಬರೆಯಿರಿ. ಊರಿನಲ್ಲಿದ್ದೂ ಅವರೇನು ಮಾಡಬೇಕಾಗಿದೆ?"

"ಅಲ್ವೇ ಅವಳು ಬಂದರೆ ಅಪ್ಪನನ್ನು, ದನಕರುಗಳನ್ನು ನೋಡ್ಕೊಳ್ಳುವವರು ಯಾರೆ?"

"ಒಂದು ನಾಲ್ಕು ದಿನ ತಾನೇ, ಮಾವ ರಿಟೈರ್ ಆದಮೇಲೆ ಮೂರು ಹೊತ್ತು ಮನೇಲೇ ಬಿದ್ದಿರ್ತಾರಲ್ಲ? ಅಲ್ಲದೆ ಕೆಲಸದವಳ ಕುಟುಂಬವನ್ನೇ ಸಾಕ್ತಿದ್ದಾರೆ. ಅವರುಗಳೇ ಸುಧಾರಿಸಬಾರದೆ?"

"ನೋಡು ಚಿತ್ರ, ಅಮ್ಮ ಅಪ್ಪನ ಈ ಪ್ರಾಯದಲ್ಲಿ ಅವರನ್ನು ಬೇರೆ ಬೇರೆ ಮಾಡುವ ಸುದ್ದಿ ಎತ್ತಬೇಡ. ಅವರಿಗೆ ಬೇರೇನೂ ಸಂತೋಷವನ್ನು ನನ್ನಿಂದ ಕೊಡಲಿಕ್ಕಾಗದಿದ್ದರೂ ಅವರನ್ನು ಬೇರ್ಪಡಿಸಲಾರೆ. ನೀನೇ ಯಾಕೆ ಇನ್ನಾದರೂ ಅಡುಗೆಮಾಡಲು ಪ್ರಾರಂಭಿಸಬಾರದು?"

"ಏನು! ನಾನೆ!! ನಾನು ಇಷ್ಟರವರೆಗೂ ಮಾಡಿಲ್ಲ. ಇನ್ನು ಮಾಡುವುದೂ ಇಲ್ಲ" ಎಂದು ವಾದಿಸಿದ್ದಳು. ಒಂದೊಂದೇ ಘಟನೆಗಳನ್ನು ಎಣಿಸುತ್ತಿದ್ದಂತೆಯೇ ಕೋಡಿ ಬೀಳುವಷ್ಟು ಉದ್ವಿಗ್ನನಾಗುತ್ತಿದ್ದ. ದಿನಗಳುರುಳಿದಂತೆ ದಂಪತಿಗಳಲ್ಲಿ ಮಾತೇ ಕಡಿಮೆಯಾಗುತ್ತಾ ಬಂದಿತು. ಈ ವಿರಸದ ನಡುವೆ ಏಳೆಂಟು ತಿಂಗಳುಗಳೇ ಉರುಳಿದುವು.

ಹೀಗಿರುವಾಗ ಮಾಸ್ತರರ ವಿದ್ಯಾರ್ಥಿ ನಾರಾಯಣನ ಫೋನು ಬಂತು....ನಿನ್ನ ಅಪ್ಪನಿಗೆ ಹುಷಾರಿಲ್ಲ. ಅನುಕೂಲವಾದಾಗ ಒಂದು ಸಲ ಬಂದು ನೋಡಿಕೊಂಡು ಹೋಗು" ಎಂಬುದಾಗಿ ಆತ ಹೀಗೆ ಹೇಳಬೇಕಾದರೆ ಅಪ್ಪ ಪೂರಾ ಹಾಸಿಗೆ ಹಿಡಿದು ಬಿಟ್ಟಿರುವರೋ ಏನೋ?

ಮಧ್ಯಾಹ್ನ ಚಿತ್ರನೊಂದಿಗೆ ಮೆಲ್ಲನೆ ಊರಿಗೆ ಹೋಗುವ ಮಾತು ತೆಗೆದ.

"ನೀವು ಬೇಕಾದರೆ ಹೋಗಿಬನ್ನಿ. ನನ್ನ ಮೂರ್‍ನಾಕ್ಕು ಪೇಷಂಟುಗಳಿಗೆ ಇದೇ ವಾರ ಆಸ್ಪತ್ರೆಗೆ ಸೇರಲು ಹೇಳಿದ್ದೇನೆ. ನಾನೇ ಇಲ್ಲವಾದರೆ!....ಆಕೆಯ ದೊಡ್ಡ ಗಂಟಲಿಗೆ ಹೆದರಿಯೋ ಏನೋ ಆತ ಮಾತನಾಡುವು ದನ್ನು ನಿಲ್ಲಿಸಿದ.

"ಈ ಮುದುಕರು ಒಂದಿದ್ದರೆ ಹತ್ತು ಮಾಡುತ್ತಾರೆ. ಇಲಿಯನ್ನು ಹುಲಿ ಮಾಡು ವುದರಲ್ಲಿ ನಿಮ್ಮ ತಂದೆಯಂತೂ ನಿಸ್ಸೀಮ...." ಎಂದಳು.

ಹೆಂಡತಿಯ ಉದಾಸೀನತೆಯಿಂದ ಆತನ ಪ್ರಯಾಣವೂ ನಾಲ್ಕು ದಿನ ಮುಂದೆ ಹೋಯಿತು. ಅಷ್ಟರಲ್ಲಿ ಸೀನಪ್ಪ ಮಾಸ್ತರರು ನಿಧನರಾದ ವಾರ್ತೆಯೂ ಬಂತು. ಸುದ್ದಿ ತಿಳಿದ ಆನಂದನ ದುಃಖ ಅಷ್ಟರವರೆಗೆ ತಡೆದುಕೊಂಡಿದ್ದರೂ ತನ್ನಿಂದ ತಾನೇ ಬುಸ್ಸೆಂದು ಹೊರಹೊಮ್ಮಿತು.

"ಚಿತ್ರ, ಅಪ್ಪಯ್ಯನೂ ಇನ್ನಿಲ್ಲ....ನಿನಗೆ ಬರಲಾಗದಿದ್ದರೆ ನಾನಾದರೂ ಹೋಗಿ ಬರುವೆ"....ಎಂದು ಆಕೆಯ ಒಪ್ಪಿಗೆಗಾಗಿ ಮುಖ ನೋಡಿದಾಗ,

ಕಳೆದ ಸಾರಿಯೇ ಇವರ ಅಣ್ಣ ಶಿವರಾವ್ ಸಾವಿರ ಡಾಲರ್ ಕಳಿಸಿದ್ದಾರೆ. ಈ ಸಾರಿ ಇನ್ನೂ ಹೆಚ್ಚಿಗೆ ಕಳುಹಿಸಬಹುದು. ಅಲ್ಲದೆ ಅಪ್ಪನ ಆಸ್ತಿಯಲ್ಲಿ ಅವರಿಗೆ ಲವ ಲೇಶವೂ ಆಸೆಯಿರಲಿಕ್ಕಿಲ್ಲ. ಅವರ ಪಾಲೂ ನಮಗೇ ಸಿಗಬಹುದು. ಆದ್ದರಿಂದ ನಾವಿಬ್ಬರೂ ಒಟ್ಟಿಗೇ ಹೋಗುವುದು ಒಳಿತು ಎಂದು ಭಾವಿಸಿದ ಚಿತ್ರ...."ಇರಲಿ ಬಿಡಿ ಒಟ್ಟಿಗೇ ಹೋಗೋಣ. ನೀವು ಎರಡು ದಿನ ಬೇಕಾದರೆ ಅಲ್ಲಿದ್ದು ಬನ್ನಿ. ನಾನು ಮಾತ್ರ ಈ ಹೊತ್ತೇ ಹಿಂತಿರುಗುತ್ತೇನೆ"....ಎಂದು ಕೊಂಚ ಕನಿಕರದಿಂದಲೋ ಎಂಬಂತೆ ನುಡಿದಳು....ತನ್ನ ಮಡದಿಯ ಮಾತು ಮಾತ್ರ ಸ್ವಲ್ಪ ಕಠೋರ. ಆದರೆ ಮನಸ್ಸು ಅಷ್ಟು ಕಠಿಣವಲ್ಲವೆಂದು ಆನಂದ ಭಾವಿಸಿದ.

ಹಳ್ಳಿಯ ಮನೆ ತಲುಪುವಾಗ ಕತ್ತಲಾಗಿತ್ತು. ಮಾಸ್ತರರ ಪಾರ್ಥಿವ ಶರೀರವನ್ನು ನೆಲದ ಮೇಲೆ ಮಲಗಿಸಿದ್ದು, ಕಾಲಬುಡದಲ್ಲೂ, ತಲೆಬುಡದಲ್ಲೂ ತೆಂಗಿನ ಕಡಿಗಳಲ್ಲಿ ಎಣ್ಣೆ ಬತ್ತಿ ಹಾಕಿ ದೀಪ ಹಚ್ಚಿರಿಸಿದ್ದರು. ಸುವರ್ಣ, ಅಚ್ಯುತ, ವೆಂಕಮ್ಮ ಇವರು ಗೋಳೋ ಎಂದು ಅಳುತ್ತಿದ್ದರೆ ಉಳಿದವರು ಗುಸಗುಸ, ಪಿಸಪಿಸ ಮಾತನಾಡಿಕೊಂಡಿದ್ದು ಆನಂದನಿಗಾಗಿಯೇ ಕಾಯುತ್ತಿರುವಂತಿತ್ತು.

ಆನಂದನ ಕಾರು ಬಂದಕೂಡಲೇ ಪುರೋಹಿತರು ತಮ್ಮ ಕರ್ತವ್ಯಗಳನ್ನು ಪ್ರಾರಂಭಿಸಿದರು. ಅಪ್ಪಯ್ಯನ ಮೃತ ದೇಹದ ಕಡೆ ನೋಡಲು ಧೈರ್ಯ ಸಾಲದೆ ಆನಂದ ಗೋಡೆಯನ್ನು ದಿಟ್ಟಿಸಿದ. ಹಳೆಯ ಮನೆ, ಸುಣ್ಣ ಬಣ್ಣ ಕಾಣದೆ ಕರಿಯ ಬಣ್ಣ ಕ್ಕೆ ತಿರುಗಿದ್ದ ಕೊಳಕಾಗಿದ್ದ ಗೋಡೆಗಳು. ಗೋಡೆಯ ಮೇಲೆ ದೀಪದ ಹಾತೆಯೊಂದು ಶವದ ಇಬ್ಬದಿಗಳಲ್ಲಿರಿಸಿದ ದೀಪಗಳನ್ನು ನೋಡುತ್ತಾ ಕುಳಿತ್ತಿತ್ತು. ಅದರ ಹಿಂಭಾಗದಲ್ಲಿದ್ದ ಹಲ್ಲಿಯೊಂದು ಬಾಲ ಮುದುರಿಕೊಂಡು ತನ್ಮಯತೆಯ ಭಂಗಿಯಲ್ಲಿ ಆಸಕ್ತಿಯಿಂದ ಹಾತೆಯನ್ನೇ ನೋಡುತ್ತಿದೆ.

ಗುಬ್ಬಚ್ಚಿಯ ಗೂಡಿನಿಂದ ಎರಡು ಮರಿ ಗುಬ್ಬಚ್ಚಿಗಳೂ ಹಾರಿ ಹೋಗಿದ್ದು

ಆದರೆ ಬೇರೆ ಬೇರೆಯಾಗಿ. ಹೆಣ್ಣು ಗುಬ್ಬಿ ಮೊದಲೇ ಹಾರಿ ಹೋಗಿದ್ದರೆ, ಗಂಡು, ಅದನ್ನು ಹಿಂಬಾಲಿಸಿ ಹೋಯಿತು. ಕೆಲಸ ಗಳೆಲ್ಲ ಮುಗಿದ ಮೇಲೆ ಮನೆಯಲ್ಲಿ ನಾಲ್ಕಾರು ಜನರು ಮಾತ್ರವೇ ಇದ್ದರು.

ಗೆಳೆಯ ನಾರಾಯಣ ಸೀಲು ಮಾಡಿದ್ದ ಉದ್ದವಾದ ಲಕೋಟೆಯನ್ನು ಆನಂದನ ಕೈಗಿತ್ತ. ಕೈಗಳು ನಡುಗುತ್ತಿದ್ದರೂ ಆನಂದ ಅದನ್ನು ಹರಿದು ಓದಲು ಪ್ರಾರಂಭಿಸಿದಾಗ ಕಣ್ಣೀರು ಹರಿದು ಲಕೋಟೆಯ ಮೇಲೆಯೇ ಬಿತ್ತು. ಕಣ್ಣೀರನ್ನು ತಡೆಯಲು ಅಸಾಧ್ಯ ವಾದಾಗ ಓದಲು ಆಗದೆ ನಾರಾಯಣನ ಹತ್ತಿರವೇ ಕೊಟ್ಟು ಓದಲು ಹೇಳಿದ—

ಪ್ರೀತಿಯ ಮಕ್ಕಳಾದ ಶಿವು ಮತ್ತು ಆನಂದರಿಗೆ,

ನಿಮ್ಮ ಅಮ್ಮನ ಕಡೆಯ ಇಚ್ಛೆಯ ಪ್ರಕಾರ ನನ್ನ ಪೆಟ್ಟಿಗೆಯಲ್ಲಿದ್ದ ಆಕೆಯ ಚಿನ್ನದ ಮಂಗಲಸೂತ್ರ, ಒಂದು ಜೊತೆ ಬೆಂಡೋಲೆಗಳು, ಬಳೆಗಳು ಎಲ್ಲವನ್ನೂ ನನ್ನನ್ನು, ಅಮ್ಮನನ್ನು ಸರಿಯಾಗಿ ನೋಡಿಕೊಳ್ಳುತ್ತಿದ್ದ ಚೆನ್ನಿಗೆ ಅಂದರೆ ಸುವರ್ಣನಿಗೆ ಕೊಡುತ್ತಿದ್ದೇನೆ.

ನನ್ನ ಹೆಸರಿನಲ್ಲಿದ್ದ ಸುಮಾರು ಹತ್ತು ಸಾವಿರ ರೂಪಾಯಿಗಳನ್ನು ವೆಂಕಮ್ಮನ ಹೆಸರಿಗೂ, ಹಿತ್ತಲಿನ ತೆಂಕು ದಿಕ್ಕಿನ ಮೂಲೆಯಲ್ಲಿರುವ ಐದು ಸೆಂಟ್ಸ್ ಸ್ಥಳ ವನ್ನು ಅಚ್ಚುತನ ಹೆಸರಿಗೂ ಬರೆದಿದ್ದೇನೆ. ಉಳಿದ ಇಪ್ಪತ್ತು ಸೆಂಟ್ಸ್ ಸ್ಥಳವನ್ನು ನೀನು ಮತ್ತು ಶಿವು ಬೇಕಾದಂತೆ ಉಪ ಯೋಗಿಸಬಹುದು. ಎಲ್ಲವೂ ಸ್ವಾರ್ಜಿತ ವಾದುದರಿಂದ ಹೀಗೆ ಏರ್ಪಾಡು ಮಾಡಿ ದ್ದೇನೆ. ನೀವಿಬ್ಬರೂ ಕೋಪಿಸಿಕೊಳ್ಳದಿರಿ.

ನಿಮ್ಮ ಅಪ್ಪ
ಶ್ರೀನಿವಾಸರಾವ್

ಮಾಸ್ತರರ ವೀಲುನಾಮೆಯ ಒಕ್ಕಣೆ ಯನ್ನು ಕೇಳಿದ ಚಿತ್ರ, "ಬಂದ ಕೆಲಸ ವಾಯ್ತಲ್ಲ? ಇನ್ನೇನಿದೆ ಇಲ್ಲಿ. ಈಗ ಹೋಗೋಣ. ಆಮೇಲೆ ಬಂದರಾಯಿತು" ಎಂದು ಹೊರಟಾಗ ಆನಂದನೂ ಆಕೆ ಯನ್ನು ಹಿಂಬಾಲಿಸಿದ.

ನಿಮ್ಮ ಅಪ್ಪ ಆ ಚೆನ್ನಿಗೆ, ಅವಳ ಗಂಡ ನಿಗೆ ಮತ್ತು ಅಜ್ಜಿಗೆ ಅಷ್ಟೊ ಬರೆದ್ರಲ್ಲ" ಅವರು ಬೂದಿ ಮುಚ್ಚಿದ ಕೆಂಡ ಕಣ್ರಿ. ಆ ಅಚ್ಚು....ಚೆನ್ನಿಗೆ ಹೆಸರಿಗೆ ಮಾತ್ರ ಗಂಡ! ಮಾವ ಆಕೇನ....ಎಂದು ಚಿತ್ರ ಮುಂದುವರಿಸಿದಳು.

"ಥೂ ನಿನ್ನ ಮುಖಕಿಷ್ಟು. ಸತ್ತ ಅಪ್ಪನ ವಿಚಾರ ಮಾತನಾಡಿದರೆ ಜಾಗ್ರತೆ....ಅವರು ಜೀವದಲ್ಲಿರುವಾಗಲೇ ನೀನು ಮಾಡಿರು ವುದು ಸಾಕು. ಇನ್ನು ಅವರು ಸತ್ತ ಮೇಲೆ ಅವರ ಆತ್ಮಕ್ಕೂ ಅಶಾಂತಿ ತರಿಸದಿರು." ಎಂದು ಜನ್ಮದಲ್ಲಿ ಒಂದೇ ಒಂದು ಸಾರಿ ಹೆಂಡತಿಯ ಮೇಲೆ ಕಿಡಿಕಾರಿದ.

ಗೃಹಿಣಿ ಬದುಕಿನ ಸಾಹಸ ಸ್ವಾರಸ್ಯಗಳು

ಎಸ್. ರಾಘವೇಂದ್ರಭಟ್ಟ

ನಂ. ೨೧೩, 'ಸೌಮ್ಯ', ೧೨ನೇ ಮುಖ್ಯರಸ್ತೆ
ಸರಸ್ವತೀಪುರ, ಮೈಸೂರು-೫೭೦೦೦೯

ಪ್ರೌಢ್ರಿಯು ಮಡದಿಯಾದ ನನಗೆ ಆಗಾಗ್ಗೆ ಚರ್ಚಿನ ಗುಂಪುಗಳಲ್ಲೂ ಮಹಿಳಾ ಸಂಘಗಳಲ್ಲೂ ಮಾತನಾಡಲು ಕರೆ ಬರುತ್ತದೆ. ಇಂಥ ಅನೇಕ ಸಂದರ್ಭಗಳಲ್ಲಿ ಭಾಷಣದ ತರುವಾಯ ಯಾರಾದರೊಬ್ಬಾಕೆ ಬಂದು ತನ್ನ ಬಾಳಿನ ಏಕತಾನತೆಯ ಬಗ್ಗೆ ಗೋಳು ಕರೆಯುವುದುಂಟು. ತಾನು ಬಲೆಗೆ ಬಿದ್ದೆನೆಂದೋ ಆಶಾಭಂಗ ಹೊಂದಿದೆನೆಂದೋ ತನ್ನ ಪ್ರತಿಭೆಯೆಲ್ಲ ವ್ಯರ್ಥವಾಯಿತೆಂದೋ ಭಾವಿಸುವವರುಂಟು. ತಿರಸ್ಕಾರದಿಂದ ಕೈಚೆಲ್ಲಿ ಕೊನೆಗೆ ಹೀಗೆನ್ನುವುದೂ ಉಂಟು: 'ಏನೇ ಹೇಳಿ, ನಾನೊಬ್ಬ ಕೇವಲ ಹೆಂಡತಿ ತಾನೆ?' ಎಂದು.

ಕೇವಲ ಹೆಂಡತಿ! ಒಮ್ಮೊಮ್ಮೆ ಇಂಥವರನ್ನು ತೋಳು ಹಿಡಿದು ಕುಲುಕಿಸಿ ಬಿಡಲೇ ಎಂದೂ ಅನ್ನಿಸಿದೆ. ಹೆಣ್ಣಾದವಳು ಅನುಭವಿಸಬಹುದಾದ ಅತ್ಯದ್ಭುತ ಸಾಹಸದಲ್ಲಿ ನೀವು ತೊಡಗಿದ್ದೀರಿ ಎಂದು ನಿಮಗೆ ತಿಳಿದೇ ಇಲ್ಲವಲ್ಲ ಎಂದು ಅವರಿಗೆ ತಿಳಿಸಿ ಹೇಳಬೇಕು ಎಂದೂ ಅನ್ನಿಸಿದೆ.

ನನಗೆ ಮೂವತ್ತಾರು ವರ್ಷಗಳ ಕಾಲ ಮಡದಿಯಾದ ಅನುಭವವಿದೆ. ಒಬ್ಬಾತನ ಬಾಳಸಂಗಾತಿಯಾಗಿ ಅವನನ್ನು ಪ್ರೀತಿಸುತ್ತಾ ಅವನ ಅನಂತವೂ ಸಂಕೀರ್ಣವೂ ಆದ ವ್ಯಕ್ತಿಕೌಶಲಗಳನ್ನು ಆದಷ್ಟೂ ಚೆನ್ನಾಗಿ ಅರಿತುಕೊಳ್ಳುತ್ತಾ ಅವು ಗುನುಗುನಿಸಿ ಹಾಡಿಕೊಂಡು ಗರಿಗೆದರಿ ಅನಂತಾಕಾಶದಲ್ಲಿ ವಿಹರಿಸಲು ನೆರವಾಗುವುದರ ಮುಂದೆ ಭೂಮಿಯ ಮೇಲಿನ ಬೇರೆ ಯಾವುದೇ ಉದ್ಯೋಗ, ಹವ್ಯಾಸ ಇಲ್ಲವೆ ಚಟುವಟಿಕೆ ಹೋಲಿಕೆಗೇ ಬಾರದೆಂಬ ಸಂಗತಿ ನನಗಂತೂ ಚೆನ್ನಾಗಿ ಮನವರಿಕೆಯಾಗಿದೆ.

ಇದೇನು ಸುಲಭದ ಕೆಲಸವೆ? ಖಂಡಿತ ಅಲ್ಲ. ಅದಕ್ಕೆ ಕೌಶಲ ಮತ್ತು ನಿಸ್ವಾರ್ಥತೆ ಅಗತ್ಯ. ನಿಮ್ಮ ಭಾವ ಮತ್ತು ಬುದ್ಧಿಗಳನ್ನು ಉಚಿತರೀತಿ ಬಳಸಬೇಕು. ಅದನ್ನಂತೂ ಮಾಡಬಹುದು. ಹಾಗಾದಾಗ ಆಯಿತಪ್ಪ, ಇಲ್ಲಿ ಸಾಹಸ ಏನು ಬಂತು? ಅದೇನೆಂದರೆ, ಹೊಸ ಹೊಸ ಶಕ್ತಿ ಮತ್ತು ಆಯಾಮಗಳ ಪ್ರಕಾಶನ, ಆತ್ಮಪರೀಕ್ಷಣದ ಅವಕಾಶ ಮತ್ತು ಮಹತ್ತನ್ನು ಸಾಧಿಸುವುದರಿಂದ ದೊರೆವ ಆನಂದ. ಇದೇ ಪ್ರತಿ ವಿವಾಹದಲ್ಲೂ ಅಡಗಿರುವ ಭರವಸೆ. ಇದನ್ನು

ಮೂಲ: ೧೯೯೪ ರ ರೀಡರ್ಸ್ ಡೈಜೆಸ್ಟ್‌ನ ಅಡ್ವೆಂಚರ್ಸ್ ಇನ್ ಬೀಯಿಂಗ್ ಎ ವೈಫ್ ಎಂಬ [illegible] ಅವರ ಲೇಖನದ ಅನುವಾದ.

ಮಾತ್ರ ಪ್ರತಿಯೊಬ್ಬ ಹೆಣ್ಣು ಪ್ರಯತ್ನಿಸಿ ತನ್ನದಾಗಿಸಿಕೊಳ್ಳಬೇಕು, ಅಷ್ಟೆ.

ಈಚೆಗೆ ತಾನೆ ಮದುವೆಯಾದ ಯಾರಾದರೊಬ್ಬ ಹೆಣ್ಣುಮಗಳು ನನ್ನನ್ನು ತನ್ನ ಅಡುಗೆ ಮನೆಗೆ ಕರೆದು ಒಂದು ಬಟ್ಟಲು ಕಾಫಿ ಕೊಟ್ಟು ತನ್ನ ವಿವಾಹವನ್ನು ಸಮೃದ್ಧಿಗೊಳಿಸುವುದು ಹೇಗೆಂದು ಕೇಳಿದರೆ ಈ ಮುಂದಿನ ಸಲಹೆಗಳನ್ನು ನೀಡಬಲ್ಲೆ.

ನಿಮ್ಮ ಗಂಡನನ್ನು ಸಾದ್ಯಂತವಾಗಿ ಪರಿಶೀಲಿಸಿ, ಪರಿಶೀಲಿಸುವುದು ಹೇಗಪ್ಪಾ ಎಂದರೆ ಆತ ಒಂದು ವಿಚಿತ್ರವೂ ಅಪೂರ್ವವೂ ಆದ ಜೊತೆಯಲ್ಲೇ ಸಮ್ಮೋಹನಗೊಳಿಸುವಂಥ ಪ್ರಾಣಿಯೋ ಎಂಬಂತೆ. ನಿಜಕ್ಕೂ ಆತ ಇರುವುದು ಕೂಡ ಹಾಗೆಯೇ ! ಎಡೆಬಿಡದೆ, ನಿರಂತರವಾಗಿ ಪರಿಶೀಲಿಸಿರಿ. ಏಕೆಂದರೆ, ಆತ ಸದಾ ಪರಿವರ್ತನೆ ಹೊಂದುತ್ತಲೇ ಇರುತ್ತಾನೆ! ಆತನ ಶಕ್ತಿ ಸಾಮರ್ಥ್ಯಗಳನ್ನೂ ಸಾಧನೆಗಳನ್ನೂ ಕಂಡು ಹೆಮ್ಮೆತಾಳಿ. ಜೊತೆಗೇ ಆತನ ದೌರ್ಬಲ್ಯಗಳನ್ನೂ ವಿಶ್ಲೇಷಿಸಿ. ನನ್ನ ಇಬ್ಬರು ಹೆಣ್ಣುಮಕ್ಕಳೂ ಮದುವೆ ಆಗುವ ಮೊದಲು ಅವರಿಗೆ ಹೀಗೆಂದು ಹೇಳಿದ್ದೆ : "ನೀವೇನೋ ಪ್ರೇಮಪಾಶಕ್ಕೆ ಸಿಕ್ಕಿದ್ದೀರಿ. ನಿಮ್ಮೊಡನೆ ಕಾಂತಿ, ಆತ್ಮಸ್ಥೈರ್ಯ ಮತ್ತು ಸೊಬಗಿಗೆ ಕಣ್ಣು ಕೋರೈಸಿ ಬಿಟ್ಟಿದೆ. ಅವನ ಅನಿಶ್ಚಯತೆಗಳಾಗಲಿ ಕೊರತೆಯಾಗಲೀ ನೀವಿನ್ನೂ ಎದುರಿಸಿಲ್ಲ. ಇಂಥಲ್ಲೇ ನೀವು ಅವನನ್ನು ಪ್ರೀತಿಸಿ ಅವನಿಗೆ ನಿಜಕ್ಕೂ ನೆರವಾದಾಗ ನಿಜವಾದ ಅರ್ಥದಲ್ಲಿ ಗೃಹಿಣಿ ಎಂದೆನ್ನಿಸಿಕೊಳ್ಳುವಿರಿ."

ಆತನ ಉದ್ಯೋಗದ ಬಗ್ಗೆ ಗೌರವ ತಾಳಿ. ಯಾವಾಗ ನೀವು ಒಬ್ಬನ ಕೈಹಿಡಿದಿರೋ ಅದರ ಜೊತೆಗೇ ಅವನ ಉದ್ಯೋಗವನ್ನೂ ವರಿಸಿದ್ದೀರಿ. ಕೆಲವೊಮ್ಮೆ ನಿಮಗಿಂತ ಅವನ ಉದ್ಯೋಗವೇ ಅವನಿಗೆ ಮಹತ್ವದ್ದೆಂದು ನಿಮಗೂ ಅನ್ನಿಸಬಹುದು. ನಿಜಕ್ಕೂ ಹಾಗೇನೂ ಅಲ್ಲವಾದರೂ ಹೆಣ್ಣಿಗೆ ತಾಯ್ತನ ಹೇಗೋ ಗಂಡಿಗೂ ಅವೇ ಕಾರಣಗಳಿಗಾಗಿ ಅವನ ಉದ್ಯೋಗ ಅಷ್ಟೇ ಮಹತ್ವದ್ದು.

ಯುಕ್ತ ಪೂರ್ಣವೂ ಸವಾಲೆನಿಸುವಂಥದೂ ಆದ ಮಗ್ನತೆಯ ಕಲೆಯನ್ನು ಕಲಿತುಕೊಳ್ಳಿ. ವಿವಾಹ ಜೀವನದಲ್ಲಿ ವಿಫಲಗೊಂಡ ಅನೇಕ ಹೆಂಗಸರು ತಮ್ಮನ್ನು ಪ್ರೇಮಸ್ವೀಕಾರಕ್ಕೆಂದು ದೈವವೇ ನಿಯೋಜಿಸಿದೆಯೆಂದು ಪರಿಗಣಿಸಿದವರು. ತಮ್ಮ ಗಂಡಸರು ಏನೆಲ್ಲ ಗಮನ ಮತ್ತು ಆದರದಿಂದ ಕಾಣುವರೆಂದು ಸದಾ ಕಾಳಜಿ ಹೊಂದಿದವರು. ಗಂಡನು ಹೆಂಡತಿಯಲ್ಲಿ ಪ್ರೀತಿ ಮತ್ತು ವಿಧೇಯತೆ ತೋರಬೇಕು ಎಂಬುದೇನೋ ನಿಶ್ಚಯ. ಆದರೆ ಆಕೆ ಕೂಡ ಕೆಲವೊಮ್ಮೆ ಗಂಡನಿಂದ ಇರಿಸುಮುರಿಸನ್ನೂ ಅಸ್ಥಾನವೆನಿಸಿದ ಕೋಪವನ್ನೂ ತನ್ನ ಕೆಲಸದಲ್ಲಿ ಅತೃಪ್ತಿಯನ್ನೂ ಹೀರಿಕೊಳ್ಳಲು ಸಿದ್ಧಳಿರಬೇಕು. ಇವನ್ನೆಲ್ಲ ಹೊರದೂಡಲು ಯಾವುದಾದರೊಂದು ಮಾರ್ಗೋಪಾಯ ಬೇಕಾಗುತ್ತದೆ. ಗೃಹಿಣಿಯಾದವಳು ತನ್ನನ್ನು ಭೀತಿ ಮತ್ತು ಹತಾಶೆಗಳು ಭೂಮಿಯೊಳಗೆ ಅನಾಯಾಸವಾಗಿ ಇಂಗುವಂತೆ ಮಾಡುವ ಸಿಡಿಲಿನ ಸರಳೆಂದು ಭಾವಿಸಿದಲ್ಲಿ ತನ್ನ ಗಂಡನಿಗೆ ಅತ್ಯಮೂಲ್ಯಳಾಗುವುದರ ಜೊತೆಗೆ ತನ್ನ ವ್ಯಕ್ತಿತ್ವವನ್ನೂ ಅದ್ಭುತವಾಗಿ ಅರಳಿಸಬಲ್ಲಳು.

ಜೊತೆಗೆ ಇದೂ ನೆನಪಿರಲಿ: ಒಬ್ಬರ ಬದುಕಿನಲ್ಲಿ ಎಷ್ಟೋ ಯಶಸ್ಸು ಎಂದೆನ್ನಿ

ಸಿದರೂ ಅವನ ಅಂತರಾಳದ ಎಲ್ಲೋ ಹುದುಗಿದ ಒಂದು ಸೂಕ್ಷ್ಮ ಭಾಗವು ತನ್ನ ಒಲವಿನ ಮಡದಿಯ ಎದುರಾಡದ ಬೆಂಬಲ ವನ್ನೂ ವಿಧೇಯತೆಯನ್ನೂ ಬಯಸುತ್ತಿರು ತ್ತದೆ.

ಅನೇಕ ಮಂದಿ ಗಂಡಸರು ತಮ್ಮ ಅಂತರಂಗದ ಭಾವನೆಗಳು, ಆಸೆ ಆಕಾಂಕ್ಷೆ ಗಳು, ಕನಸುಗಳು, ಒಳತೋಟಿಗಳು ಮುಂತಾದುವನ್ನು ತಾವೇ ನಿರ್ವಹಿಸಲು ಸಾಧ್ಯವಾಗದೆ ಬೇರಾವುದೋ ಧ್ವನಿಫಲಕ ವನ್ನು ವಿಪರೀತವಾಗಿ ಬಯಸುವರು. ಅವರಿಗೆ ತಮ್ಮ ಅಂತರಾಳದ ವಿಚಾರ ಮತ್ತು ಭಾವನೆಗಳನ್ನೂ ಯಾವುದೇ ಕೊಂಕು ಅಥವಾ ತಿರಸ್ಕಾರದ ಭಯವಿಲ್ಲದೆ ವಿಶ್ವಾಸ ದೊಂದಿಗೆ ನಿವೇದಿಸಿಕೊಳ್ಳಬಲ್ಲ ಒಬ್ಬ ಹೆಣ್ಣಿನ ಅಗತ್ಯವಿರುತ್ತದೆ.

ಸೃಜನಶೀಲ ಆಲಿಸುವಿಕೆಯಲ್ಲಿ ಪ್ರತಿಸ್ಪಂದನ, ಸಂವಹನ ಮತ್ತು ವಿಚಾರ ವಿನಿಮಯಗಳು ಒಳಗೊಂಡಿವೆ. ಆದರೆ ಅನೇಕ ಸಂದರ್ಭಗಳಲ್ಲಿ ಹೆಂಡತಿಯಾದವಳು ಮಾತನಾಡಬಾರದು, ನಾಲಿಗೆ ಬಿಗಿ ಹಿಡಿದಿರ ಬೇಕು. ವಾದ ಹೋಗಿ ಕಾದಾಟಕ್ಕೆ ಕಾರಣ ವಾಗಬಹುದಾದ ಇಲ್ಲವೆ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸುವ ಕಟುನುಡಿಗಳನ್ನು ನಿಗ್ರಹಿಸಿಕೊಂಡಿರಬೇಕು. ಇದರಲ್ಲಿ ಆಕೆಯ ಗಂಡನಿಗೂ ಜವಾಬ್ದಾರಿ ಇದೆ ಎನ್ನುವುದು ನಿಸ್ಸಂದೇಹ. ಆದರೆ ನನಗನ್ನಿಸುವುದೇ ನೆಂದರೆ ಮೂಲತಃ ಗಂಡಸಿನ ಕೆಲಸ ಲೋಕ ವನ್ನು ನಿಯಂತ್ರಿಸುವುದು. ಅದೇ ಹೆಂಡತಿ ಗಾದರೋ ತನ್ನನ್ನು ಆ ಮೂಲಕ ತನ್ನ ಗಂಡನನ್ನು ನಿಯಂತ್ರಿಸುವುದೇ ಆಗಿದೆ.

ನಿಮಗೆ ನಿಮ್ಮ ಪತಿಯ ಅಗತ್ಯವಿದೆ
ಯೆಂದು ಆತನಿಗೆ ತಿಳಿದಿರಲಿ. ಕೆಲಸಮಯದ
ಹಿಂದೆ ಸಿಡಿಮಿಡಿಗೊಂಡ ಒಬ್ಬ ನವವಿವಾ
ಹಿತೆ ನನ್ನಲ್ಲಿ ಬಂದು ತನ್ನ ಗಂಡ ಆಚೀ
ಕಣ್ಣು ಹಾಯಿಸುವುದರ ಬಗ್ಗೆ ಒಂದೇ
ಸಮನೆ ದೂರಿದಳು. "ಅವನಿಗೆ ತಿಳಿಸಿಬಿಡ
ತ್ತೇನೆ: ಹೀಗೆಲ್ಲ ಯಾರ್‍ಯಾರ ಮೇಲೋ
ಕಣ್ಣು ಹಾಕಿದರೆ ಸೋಡಚೀಟಿ ಪಡೆಯು
ತ್ತೇನೆ" ಎಂದೆಲ್ಲ ಒದರಿದಳು. ಅದಕ್ಕೆ
ನಾನೆಂದೆ: "ಇದಕ್ಕೆ ನಿಜವಾಗಿಯೂ ನಿನ
ಪರಿಹಾರಬೇಕೇನು? ಹಾಗಿದ್ದಲ್ಲಿ ಮೊದಲ
ಅವನ ಬಳಿ ಸಾರು. ನಿನ್ನನ್ನು ತಕ್ಕೈ
ಹಿಡಿಯಲು ಹೇಳು. ಆದಮೇಲೆ ಅವನಿ
ಹೀಗೆನ್ನು: 'ಪ್ರಿಯ, ನನಗೆ ನೋವಾಗಿದೆ
ದುಃಖವಾಗಿದೆ. ಯಾಕೆಂದು ನಿನಗ
ಗೊತ್ತು. ನಾನು ನಿನ್ನ ಹೆಂಡತಿ. ನನ್ನನ
ಹೀಗೆಯೇ ಹಿಡಿದಿಕೊ. ನನಗೆ ನೆರವಾಗು
ಇದಿಷ್ಟೇ ನೀವು ಮಾಡಬೇಕಾದ್ದು. ಅವ
ಒಲವು ನಿಮಗೆ ಅಗತ್ಯವೆಂದು ಅಂಗೀಕರಿಸ
ವುದು ಏನೆಲ್ಲ ಕೋಪಕ್ಕಿಂತ ಮಿಗಿಲಾ
ಪವಾಡವನ್ನೇ ಮಾಡಿಬಿಡುತ್ತದೆ.

ನಿಮ್ಮ ಬುದ್ಧಿಶಕ್ತಿಯನ್ನೆಲ್ಲ ಬಳ
ಕೊಳ್ಳಿ. ಮದುವೆಯೇನೂ ನಿಮ್ಮ ಕಾರ
ಕ್ಷೇತ್ರಕ್ಕೆ ಮಿತಿ ಹಾಕಬೇಕಾಗಿಲ್ಲ. ಕಸೂ
ಹಾಕುವುದು, ಛಾಯಾ ಚಿತ್ರಣ, ಗೃಹ
ಲಂಕರಣ, ಕವನರಚನೆ ಇಂಥ ಯಾವುದೆ
ಪ್ರತಿಭೆ ನಿಮ್ಮಲ್ಲಿದ್ದರೆ ಅದಕ್ಕೆ ಧೂಳ
ಕವಿಸಬೇಡಿ. ಬದಲಿಗೆ ನಿಮ್ಮ ವಿವಾ
ವನ್ನು ಬಳಸಿಕೊಳ್ಳಿ.

ನನ್ನ ಪರಿಚಯದ ಒಬ್ಬ ಗೃಹಿಣಿ ಮೊದ
ದರ್ಜೆಯಲ್ಲಿ ತೇರ್ಗಡೆಯಾಗಿ ಪದವಿಗಳ
ದಾಕೆಗೆ ಮೂರು ಮಕ್ಕಳಿದ್ದು ಗೃಹಕೃ

ಗಳನ್ನೆಲ್ಲ ಚೆನ್ನಾಗಿ ನಿಭಾಯಿಸುತ್ತಿದ್ದಾಳೆ. "ನನ್ನ ಗಂಡನ ವ್ಯಾಪಾರ ವಹಿವಾಟುಗಳನ್ನು ಅರ್ಥ ಮಾಡಿಕೊಳ್ಳಲು, ನಮ್ಮ ಕುಟುಂಬ ವನ್ನು ಸಮರ್ಥವಾಗಿ ನಿರ್ವಹಿಸಲು ಮತ್ತು ಜಗತ್ತಿನ ಆಗುಹೋಗುಗಳನ್ನು ಸರಿಯಾಗಿ ಗ್ರಹಿಸಲು ನಾನು ಕಾಲೇಜಿನಲ್ಲಿ ಕಲಿತ ಪ್ರತಿ ಸಂಗತಿಯೂ ನನಗೀಗ ಅಗತ್ಯ" ಎನ್ನು ತ್ತಾಳೆ.

ಗೃಹಿಣಿಯು ತನ್ನ ವಿವಾಹ ಜೀವನ ವನ್ನು ಸಾಹಸವೆಂಬಂತೆ ಸಾಗಿಸಲು ನೆರ ವಾಗುವ ಕೆಲವಾರು ಸಾಮಾನ್ಯ ತಿಳು ವಳಿಕೆಯ ನಿಷಿದ್ಧ ಸಂಗತಿಗಳೂ ಇವೆ. ಉದಾಹರಣೆಗೆ, ಸಣ್ಣಪುಟ್ಟ ವಿಷಯಗಳನ್ನು ಅತಿ ದೊಡ್ಡದಾಗಿ ಬೆಳೆಸಬಾರದು. ಅದನ್ನು ಕಡೆಗಣಿಸಿಬಿಡಿ. ಆಗ ನೀವೇ ನೋಡುವಿರಿ, ದೊಡ್ಡ ವಿಷಯಗಳಲ್ಲೂ ನಿಮ್ಮ ಅಭಿಪ್ರಾ ಯಕ್ಕೆ ಮನ್ನಣೆ ದೊರೆಯುತ್ತದೆ.


ರಾಜಿ ಮಾಡಿಕೊಳ್ಳಲು ಅಳುಕದಿರಿ. ರಾಜಿ ಎಂದರೆ ಸೋಲೊಪ್ಪಿಕೊಳ್ಳುವುದೆಂದೇ ನಲ್ಲ. ನಮ್ಮಿಬ್ಬರಿಗೂ ಸಂಕೀರ್ಣ ಜಗತ್ತಿನಲ್ಲಿ ನಮಗಿಂತ ಭಿನ್ನವಾದ ದೃಷ್ಟಿಕೋನಗಳಿವೆ ಎಂಬುದನ್ನು ಒಪ್ಪುವಂಥ ಸರಳವಾದ ಪ್ರೌಢಿಮೆ. ಅಷ್ಟೇ ಅಲ್ಲದೆ ಆಗೊಮ್ಮೆ ಈಗೊಮ್ಮೆ ಅವು ಸರಿಯಾದವಾಗಬಹುದು ಎಂಬುದನ್ನು ಸಂಗ್ರಹಿಸುವುದು.

ಕೆಲವಾರು ಸಂಗತಿಗಳನ್ನು ಕುರಿತು ನೀವು ದಂಪತಿಗಳು ಭಿನ್ನಾಭಿಪ್ರಾಯ ತಾಳಿದ್ದಲ್ಲಿ ಗಾಬರಿಗೊಳ್ಳದಿರಿ. ವಿವಾಹವೆಂದರೆ ಪಾಲು ಗಾರಿಕೆ ಹೊರತು ವ್ಯಕ್ತಿತ್ವಗಳು ಲೀನವಾಗಿ ಬಿಡುವುದಲ್ಲ. ತಿದ್ದಲಾರದ ತಪ್ಪುಗಳಿಗಾಗಿ ಬುಸುಗುಡುತ್ತಿರಬೇಡಿ. ಎಲ್ಲರೂ ತಪ್ಪು ಮಾಡುವವರೇ. ಉತ್ತಮ ಮಾರ್ಗವೇ ನೆಂದರೆ ಅವುಗಳಿಂದ ಪಾಠ ಕಲಿತು ತರುವಾಯ ಅವನ್ನು ಮರೆತುಬಿಡುವುದು

ಸಾಮಾನ್ಯ ಪರಿಜ್ಞಾನದಿಂದ ಮೂಡಿ ಬರುವ ಕೆಲವಾರು ವಿಧಿನಿಷೇಧಗಳಿವೆ. ಪರಸ್ಪರ ಉಳಿಸಿಕೊಳ್ಳುವ ಕಲೆಯನ್ನು ವಿಸ್ತರಿಸಿ ಬೆಳೆಸಿಕೊಳ್ಳಿ. ಅವೇನೂ ಕೇವಲ ಗಂಭೀರ ವಸ್ತುಗಳೇ ಆಗಿರಬೇಕಾಗಿಲ್ಲ. ಸಣ್ಣಪುಟ್ಟ ಹರ್ಷಭರಿತ ಸಂಗತಿಗಳೂ ಆಗ ಬಹುದು. ನೀವು ಓದುವ ಸದ್ಗ್ರಂಥ ನೀವು ಆಲಿಸಿದ ತಮಾಷೆಯ ಮಾತನ್ನು ನಿಮ್ಮ ಬಾಳ ಸಂಗಾತಿಗೆಂದು ಜೋಪಾನವಾಗಿರಿಸಿದ್ದು, 'ಇಲ್ಲಿ ಬಂದು ನೋಡ್ರಿ'—ಎಂದು ಕೂಗಿಕರೆದು ತೋರಿಸುವ ಅಪೂರ್ವ ಸೂರ್ಯಾಸ್ತಮಾನ,ನಿಮ್ಮ ಮೂರು ವರ್ಷದ ಪೋರ ತೊದಲಿದ ಸಂಮೋಹಕ ನಂಬ ಲಾಗದ ಮಾತು.

ಬಹುಶಃ ಸಂಸಾರದಲ್ಲಿ ಯಶಕಾಣುವ ಗೃಹಿಣಿಗೆ ಅಡಕವಾಗಿ ಹೇಳಬಹುದಾದ ಸರಳ ನಿಯಮ ಇಂತಿದೆ: ನಿಮ್ಮ ಪತಿಯ ಮೆಚ್ಚುಗೆಯನ್ನು ಸಂಪಾದಿಸಿ. ಅವನಿಗೆ ಅಚ್ಚುಕಟ್ಟೆಂದರೆ ಇಷ್ಟವೊ? ನೀವು ಅಚ್ಚುಕಟ್ಟಾಗಿರಲು ಪ್ರಯತ್ನಿಸಿ. ತನ್ನ ಸುತ್ತಲೂ ಗೆಳೆಯರಿರಬೇಕೆಂದು ಅವನಿಗೆ ಅಪೇಕ್ಷೆಯೊ? ಸಂತಸದ ಕೂಟಗಳನ್ನು ಏರ್ಪಡಿಸಲು ಕಲಿತುಕೊಳ್ಳಿ. ಅವನ ಉದ್ಯೋಗ ಅತ್ಯಂತ ಪರಿಶ್ರಮದಿಂದ ತುಂಬಿದೆಯೊ? ಗದ್ದಲದೊಂಬಿಯ ನಮ್ಮ ಜಗತ್ತಿನಲ್ಲಿ ನಿಮ್ಮ ಮನೆಯಂತೂ ತುಂಬ ಪ್ರಶಾಂತತೆಯಿಂದ ತುಂಬಿರುವಂತೆ ಮಾಡಿ. ನಿಮ್ಮನ್ನು ಸದಾ ತನ್ನ ಹತ್ತಿರ ಇರಬೇಕೆಂದು ಬಯಸುವರೇನು? ಓ ದೇವರೆ! ತ್ವರೆ ಮಾಡಿ.

"ಸಾವು ನಮ್ಮನ್ನು ಅಗಲಿಸುವತನಕ ಪ್ರೀತಿಸೋಣ ಮತ್ತು ಆಧರಿಸೋಣ"– ಇದೇ ಗೃಹಿಣಿಯ ಪಾಲಿಗೆ ಮಹತ್ತಾದ ಆತ್ಮತೃಪ್ತಿ ದೊರಕಿಸುವ ಪಾತ್ರ ಎನ್ನಬೇಕು. ಯಾವುದೇ ಕಾರಣಕ್ಕೂ ನಿಮ್ಮ ಪಾತ್ರವನ್ನು ಗೌಣವೆಂದು ಪರಿಗಣಿಸುವ ಅಪಚಾರ ಎಸಗಬೇಡಿ. ದಾಂಪತ್ಯವೆಂಬ ನೌಕೆಗೆ ನಿಮ್ಮ ಪತಿಎಂಜಿನ್ನಾದರೆ ನೀವದರ ಚುಕ್ಕಾಣಿ—ನಾವೆ ಎತ್ತ ಸಾಗಬೇಕೆಂಬುದನ್ನು ನಿಶ್ಚಯಿಸುವುದು ನೌಕೆಯ ಚುಕ್ಕಾಣಿ ತಾನೆ!



ಅಲ್ಪವಿದ್ಯೆ ಅಪಾಯಕಾರಿ
ಆದರೆ ಅಪಾರ ಅಜ್ಞಾನವೂ ಅಷ್ಟೇ ಕೆಡುಕು
ಕಾರ್ಾ್ಯಚರಣೆಯಲ್ಲಿರುವ ಅಜ್ಞಾನಕ್ಕಿಂತ
ಭಯಂಕರವಾದುದು ಬೇರೊಂದಿಲ್ಲ

—ಗಯಟೆ

ನಿರಕ್ಷರತೆ, ಹಿಂದುಳಿದಿರುವಿಕೆ
ಶೋಷಣೆಯ ಗುರುತು

—ಗಾಂಧೀಜಿ

ನಿಮ್ಮ ಯಜಮಾನರನ್ನು ಮನೆಯಲ್ಲಿರುವುದಕ್ಕೆ ಬಿಟ್ಟೀರಿ ಜೋಕೆ!

ಡಿ. ವಿ. ಶಾಮಣ್ಣ
ನಂ. ೧೮೯೧, 'ಆರಭಿ' ೧ನೇ ಮೇನ್
೩ನೇ ಕ್ರಾಸ್, ಶ್ರೀರಾಂಪುರ ೨ನೇ ಹಂತ
ವಿವೇಕಾನಂದನಗರ, ಮೈಸೂರು ೫೭೦ ೦೨೩

ಗಂಡಸು ಹೊರಗೆ ದುಡಿದು ಬರುತ್ತಿದ್ದ ಕಾಲ ಹಿಂದಿತ್ತು, ಆಗ ಹೆಂಗಸಿನ ಜಾಗ ಮನೆಯಾಗಿತ್ತು. ದಿನದ ಸಮಯವನ್ನು ಸಂತಸ, ತೃಪ್ತಿ ಮತ್ತು ಶಾಂತಿಯಿಂದ ಕಳೆದ ಹೆಣ್ಣು, ಹೊರ ಪ್ರಪಂಚದಲ್ಲಿ ದುಡಿದು ದಿನದ ಕೊನೆಗೆ ಹಿಂದಿರುಗುತ್ತಿದ್ದ ಗಂಡಸನ್ನೇ ಎದುರು ನೋಡುತ್ತಿದ್ದಳು. ಮುಂದೊಮ್ಮೆ ಗಂಡಸಿನ ಜಾಗವೂ ಮನೆಯಲ್ಲಿಯೇ ಆಗಬಹುದೆಂದು ಯಾವ ಹೆಂಗಸು ತಾನೆ ಊಹಿಸಿದ್ದಳು?

ನನ್ನ ಪತಿ ಒಬ್ಬ ಚಿತ್ರಗಾರ–ಉದ್ಯಾನ ವಿನ್ಯಾಸ ಹಾಗೂ ಬರವಣಿಗೆಯನ್ನೂ ಮಾಡುತ್ತಾರೆ. ಚಿತ್ರಗಾರರು, ಉದ್ಯಾನ ವಿನ್ಯಾಸಕರು. ಬರಹಗಾರರು ಇಂಥ ಸ್ವಯಂ ಉದ್ಯೋಗಿಗಳ ವಿಷಯದಲ್ಲಿ ಒಂದು ತೊಂದರೆಯೆಂದರೆ ಅವರು ಮನೆಯಿಂದಲೇ ಕೆಲಸ ಮಾಡಬಹುದು. ಇವರುಗಳ ಜೊತೆಗೆ, ಆಧುನಿಕ ತಂತ್ರಜ್ಞಾನದ ಸಹಾಯದಿಂದ ತಮ್ಮ ವ್ಯವಹಾರವನ್ನು ತಮ್ಮ ಮನೆಯಿಂದಲೇ ನಡೆಸುವವರೂ ಸೇರಿ, ಮನೆಯಿಂದಲೇ ಕೆಲಸಮಾಡುವ ಗಂಡಸರ ಸಂಖ್ಯೆಯೂ ಹೆಚ್ಚಿದೆ.

ಅಪರೂಪಕ್ಕೊಮ್ಮೆ ಏನೂ ಕೆಲಸ ಮಾಡದೆ, ಯಾವ ಉಸ್ತುವಾರಿಯಿಲ್ಲದೆ, ಆನಂದವಾಗಿ ದಿನ ಕಳೆಯಲು ಇಚ್ಛಿಸುವ ಹೆಂಗಸರ ಉದ್ದೇಶವನ್ನು ಈ ಗಂಡಸರು ಕಾರ್ಯಭಂಗ ಮಾಡುತ್ತಾರೆ. ನಮ್ಮ ಗೃಹಕೃತ್ಯದ ಆನಂದವು ಸದಾ ಕೊನೆಯಾಗುವುದನ್ನು ನಾವು ಇಚ್ಛಿಸೆವು. ಇತ್ತೀಚೆಗೆ ನಾನೊಂದು ಕತೆ ಕೇಳಿದೆ (ಅದು ಅತ್ಯಂತ ಸಂಭವನೀಯವೆನಿಸುತ್ತದೆ!). ಮೂವತ್ತು ಮೂರು ವರ್ಷಗಳ ಸುದೀರ್ಘ ದೃಢ ದಾಂಪತ್ಯ ಜೀವನದ ನಂತರ ಗೃಹಿಣಿಯೊಬ್ಬಳು ವಿವಾಹ ವಿಚ್ಛೇದನ ಪಡೆಯಲು ತೀರ್ಮಾನಿಸಿದಳಂತೆ. ಕಾರಣ–ಆಕೆಯ ಪತಿಯ ನಿವೃತ್ತಿಯು ಹತ್ತಿರವಾಗುತ್ತಿದ್ದುದು! ತನ್ನ ಗಂಡ ನಿವೃತ್ತಿಯ ಅನಂತರ ಮನೆಯಲ್ಲಿಯೇ ಸುಳಿದಾಡುವುದನ್ನು ಆಕೆಗೆ ಎದುರಿಸಲಾಗಲಿಲ್ಲವಂತೆ. (ದಿನದಲ್ಲಿ ತಾನು ಎಷ್ಟು

ಮೂಲ : ಜನವರಿ ೯೯೮ ರೀಡರ್ಸ್ ಡೈಜೆಸ್ಟ್‌ನ ಮೇರಿ ಕಿಲೆಸ್ ಅವರ 'ಮಸ್ ಎಬೌಟ್ ದಿ ಹೌಸ್' ಲೇಖನ

ಕಡಿಮೆ ಕೆಲಸ ಮಾಡುತ್ತೇನೆಂಬುದು ತನ್ನ ಗಂಡನಿಗೆ ಆಗ ತಿಳಿಯುತ್ತಿತ್ತೆಂಬುದು ಬೇರೆ ವಿಚಾರ.)

ಪ್ರತಿಕೂಲ ಪರಿಸ್ಥಿತಿಯಿಂದಾಗಿ ನನ್ನ ಪತಿ ತನ್ನ ಹೊರಗಿನ ಕೆಲಸವನ್ನು ಮಾಡದಿದ್ದಾಗ, ನಾವಿಬ್ಬರೂ ದಿನವೆಲ್ಲಾ ಮನೆಯಲ್ಲಿ ಒಟ್ಟಿಗೆ ಇರಬೇಕಾದ ಪರಿಸ್ಥಿತಿ ಹಲವೊಮ್ಮೆ ಬರುವುದುಂಟು. ಅಂಥ ದಿನಗಳಲ್ಲಿ ನಾನು ನನ್ನನ್ನು ವಿವಾಹ ವಿಚ್ಛೇದನವನ್ನು ಪಡೆಯಲಿಚ್ಛಿಸಿದ್ದ ಆ ಹೆಂಗಸಿನ ಜೊತೆ ಗುರುತಿಸಿಕೊಂಡು, ಆಕೆ ಏಕೆ ವಿಚ್ಛೇದನಕ್ಕೆ ತೀರ್ಮಾನಿಸಿದಳೆಂಬುದನ್ನು ಅರ್ಥಮಾಡಿಕೊಳ್ಳಬಲ್ಲೆ. ತನ್ನ ಪತಿ, ಅರೆಕಾಲಿಕ ಪೋಲೀಸ್ ಅಧಿಕಾರಿಯಾಗಿ ಮಾರ್ಪಾಡುಗೊಂಡು ಅಪಾದಿತರನ್ನು ಪ್ರಶ್ನಿಸುವಂತೆ ನನ್ನನ್ನು ವಿಚಾರಣೆಗೆ ಗುರಿಪಡಿಸುತ್ತಾರೆ. "ನೀನೀಗೇನು ಮಾಡುತ್ತಾ ಇದ್ದೀಯಾ? ಆ ಕೆಲಸವನ್ನೇಕೆ ಇನ್ನೂ ಮಾಡಿಲ್ಲ? ನನ್ನದೇನಾದರೂ ಸಲಹೆ ಬೇಕೇ?"

ಸ್ಯೂಸಿಯ ಪತಿ ಮಾಲ್ ಕೂಡ ಮನೆಯಲ್ಲೇ ಕೆಲಸ ಮಾಡುತ್ತಾರೆ. ಪಾಪ! ನೊಂದ ಸ್ಯೂಸಿ ನಿಟ್ಟುಸಿರು ಬಿಟ್ಟು ಹೀಗೆ ಹೇಳುತ್ತಾಳೆ: "ಸೇನಾಧಿಪತಿಯಂತೆ ಶಿಸ್ತಿನಿಂದ ನಡೆದು ಬರುವ ನನ್ನ ಪತಿ, ಸೀದಾ ಸೋಪಾದ ಮೇಲೆ ಅಸೀನರಾಗಿ ಟಿ. ವಿ. ಯನ್ನು ಚಾಲೂ ಮಾಡುತ್ತಾರೆ. ಅನಂತರ ನನ್ನ ಕಡೆಗೆ ತಿರುಗಿ (ಮಗುವು ಮಲಗಿರುವುದರಿಂದ ಆಗ ನಾನು ಯಾವುದಾದರೊಂದು ಪುಸ್ತಕವನ್ನು ಓದುತ್ತಿರಬಹುದು) 'ನಿನಗೆ ಇದಕ್ಕಿಂತ ಒಳ್ಳೆಯ ಕೆಲಸವೇನೂ ಇಲ್ಲವೇ?" ಎಂದು ಪ್ರಶ್ನಿಸುತ್ತಾರೆ.

ಎರಡು ಗಂಡು ಮಕ್ಕಳ ತಾಯಿಯಾಗಿರುವ ನನ್ನ ಸ್ನೇಹಿತೆ ಜೋ ಮನೆಯಲ್ಲಿಯೇ ಇರುವ ಹೆಣ್ಣು. ಕಲಾಕೃತಿಗಳ ವ್ಯಾಪಾರಿಯಾದ ಆಕೆಯ ಪತಿ ಜೆರ್ರಿ ಇತ್ತೀಚೆಗೆ ಮನೆಯಲ್ಲೇ ತಮ್ಮ ಕೆಲಸವನ್ನು ಮಾಡುವುದಕ್ಕೆ ತೀರ್ಮಾನಿಸಿದರು. ಇದರಿಂದ ಜೆರ್ರಿ ಕೂಡ ಗೃಹ ಪೋಲಿಸರ ಪಂಕ್ತಿಗೆ ಸೇರಿದಂತಾಗಿ, ನಗೆ–ಪ್ರೀತಿ ತುಂಬಿದ ಆ ದಂಪತಿಗಳ ಹದಿನೈದು-ವರ್ಷದ ದಾಂಪತ್ಯ ಜೀವನಕ್ಕೆ ಧಕ್ಕೆಯುಂಟಾಯಿತು. ಜೋ–ಜೆರ್ರಿಯರ ಈ ಸಂತಸದ ದಾಂಪತ್ಯಕ್ಕೆ ಜೆರ್ರಿ ಹೊರಗೆ ಕೆಲಸ ಮಾಡುತ್ತಿದುದ್ದೇ ಸಂಪೂರ್ಣವಾಗಿ ಕಾರಣವೆಂದು ಮತ್ತೆ ಹೇಳಬೇಕಾಗಿಲ್ಲ.

"ಈಗೇನು ಮಾಡುತ್ತಾ ಇದ್ದೀಯಾ, ಚಿನ್ನ?" ಎಂದು ಜೋಳನ್ನು ಹಿಂಬಾಲಿಸುತ್ತಾ ಜೆರ್ರಿ ಪ್ರಶ್ನಿಸುತ್ತಿದ್ದರಂತೆ.


"ನನ್ನ ಜೀವನವನ್ನು ಸವೆಸುತ್ತಾ ಇದ್ದೀನಿ. ನೀವೇನು ಮಾಡುತ್ತಿದ್ದೀರಿ?" ಎಂದು ಜೋ ಉತ್ತರಿಸಿದಾಗ,

"ಓ, ಏನಿಲ್ಲ ಸುಮ್ಮನೆ ನಿನ್ನ ಜೊತೆ ಇರೋಣಾಂತ. ಅದೂ ಅಲ್ಲದೆ ನೀನು ದಿನಪೂರ್ತಿ ಏನು ಮಾಡುತ್ತೀಯಾ ಎಂದು ತಿಳಿದುಕೊಳ್ಳೋಣಾ ಅಂತ" ಎಂದು ಆಕ್ಷೇಪಣೀಯ ದನಿಯಲ್ಲಿ ಉತ್ತರಿಸುತ್ತಿದ್ದರಂತೆ.

ಹಿಂದೆ, ಜೋ ಮತ್ತು ನನಗೆ ಫೋನಿನಲ್ಲಿ ಮಾತನಾಡುವ ಚಟವಿತ್ತು. ನಮ್ಮ ಮತ್ತು ನಮ್ಮ ಸ್ನೇಹಿತರ ಜೀವನದ ಆಗುಹೋಗುಗಳನ್ನು, ಗಂಟೆ ಗಂಟೆಗೆ, ಸಿನಿಮೀಯ ಶೈಲಿಯಲ್ಲಿ ವಿನಿಮಯ ಶೈ

ಯಲ್ಲಿ ವಿನಿಮಯ ಮಾಡಿಕೊಂಡು, ಅತ್ಯಂತ ಸಂತೋಷದಿಂದಿರುತ್ತಿದ್ದೆವು. ಈ ಸುಖವು ಇದ್ದಕ್ಕಿದ್ದಂತೆ ನಿಂತುಹೋಯಿತು. ಫೋನ್ ಶಬ್ದಮಾಡುವುದೇ ತಡ, ಜೆರ್ರಿ ಅದನ್ನು ತೆಗೆದುಕೊಂಡು, "ಜೋ ಏನೋ ಕೆಲಸಮಾಡುತ್ತಿದ್ದಾಳೆ. ಏನಾದರೂ ಬೇಕಿತ್ತೇ?" ಎನ್ನುತ್ತಿದ್ದರು. ನಾನು, "ಏನೂ ಇಲ್ಲ. ಅವಳಿಗೆ ಕೆಲಸವಿಲ್ಲದಿದ್ದಾಗ ನನಗೆ ಫೋನ್ ಮಾಡುವುದಕ್ಕೆ ಹೇಳಿ" ಎಂದಷ್ಟೆ ಹೇಳುತ್ತಿದೆ.

ಹೀಗಾಗಿ, ನನಗೆ ಪರಿಚಯವಿರುವ ಒಬ್ಬ ಹೆಂಡತಿಯು, ತನ್ನ ಗಂಡ ಮನೆಯಲ್ಲಿಯೇ ಕಛೇರಿ ಸ್ಥಾಪಿಸುವುದನ್ನು ಖಡಾಖಂಡಿತವಾಗಿ ವಿರೋಧಿಸಿದ್ದು ಆಶ್ಚರ್ಯಕರವಾದ ವಿಷಯವೇನಲ್ಲ. "ನಗು, ಸುಖ, ನೆಮ್ಮದಿ–ಇವೆಲ್ಲವನ್ನೂ ದಾಂಪತ್ಯ ಜೀವನದಲ್ಲಿ ಉಳಿಸಿಕೊಳ್ಳಬೇಕಾದರೆ, ನಿಮ್ಮ ಗಂಡನನ್ನ ಮನೆಯಲ್ಲೇ ಕೆಲಸಮಾಡಲು ಏನೇ ಆದರೂ ಬಿಡಬೇಡಿ" ಎಂದು ತನ್ನ ಗೆಳತಿಯರಿಗೆ ಆಕೆ ಬುದ್ಧಿವಾದ ಹೇಳುತ್ತಾಳೆ.



ಪ್ರಾಥಮಿಕ ಪ್ರಜ್ಞೆಯಿಂದ ತಾರ್ಕಿಕ ಪ್ರಜ್ಞೆಯವರೆವಿಗೆ
ಸಾಕ್ಷರತೆ ಕೈಗೊಳ್ಳುವ ಪ್ರವಾಸವೇ ಶಿಕ್ಷಣ.

—ಥಯಲೊ ಫ್ರಯರಿಸ್

ಪುಸ್ತಕ ಪರಿಚಯ

ಬೆಳಕಿನ ಎದೆಹಾಲು (ಆರು ಕಥನಕವನಗಳು)—ಲೇಖಕರು: ಲತಾರಾಜಶೇಖರ್; ಪ್ರಕಾಶಕರು: ಕಾವೇರಿ ಪ್ರಕಾಶನ ರಾಜಶೇಖರ್ ಮೆಡಿಕಲ್ ಫೌಂಡೇಶನ್ ಟಿ. ನರಸೀಪುರ ರಸ್ತೆ, ಮೈಸೂರು ವರ್ಷ ೯೯ ಪುಟಗಳು ೭೨, ಬೆಲೆ: ರೂ. ೩೦–೦೦

ಇತ್ತೀಚಿನ ದಿನಗಳಲ್ಲಿ ತನ್ನ ಭಾವಾತ್ಮಕತೆಯ ಹಿನ್ನೆಲೆಯಿಂದ ಶ್ರೀಮತಿ ಲತಾ ರಾಜಶೇಖರ್ ಸಾಹಿತ್ಯ ಜಗತ್ತಿನ ಗಮನವನ್ನು ಸೆಳೆದಿದ್ದಾರೆ. ವಾರಪತ್ರಿಕೆಗಳಲ್ಲಿ ಧಾರವಾಹಿಯಾಗಿ ಹರಿದ ಇವರ ಕಾದಂಬರಿಗಳು ಓದುಗರ ಮೆಚ್ಚುಗೆಗಳಿಸಿಕೊಂಡಿದ್ದರೆ ಇವರ ಕವನ ಸಂಕಲನದ ಗೀತೆಗಳು ಧ್ವನಿಸುರುಳಿಯಲ್ಲಿ ಮಿಡಿದು ರಸಿಕರ ಹೃದಯಕ್ಕೆ ಮುಟ್ಟಿವೆ. ಈ ಕವಿಯತ್ರಿಯ ಇತ್ತೀಚಿನ ಕೊಡುಗೆ ಬೆಳಕಿನ ಎದೆಹಾಲು.

ತನ್ನ ವಿಶಿಷ್ಟವಾದ ಸೊಬಗಿನಿಂದ ಪುಸ್ತಕದ ಶೀರ್ಷಿಕೆಯೇ ಆಸಕ್ತಿ ಹುಟ್ಟಿಸುತ್ತದೆ. ಆ ಬೆಳಕಿನ ಎದೆಹಾಲು ಕುಡಿದು ನಲಿಯುತ್ತಾ ಅರಳುತ್ತಿರುವ ಕಮಲದ ಭಾವಚಿತ್ರ ಪುಸ್ತಕದ ಹೊರಮೈಗೆ ಆಕರ್ಷಣೆ ಒದಗಿಸಿದರೆ, ಒಳಹೂರಣ ಆರು ವಿಶಿಷ್ಟ ಕಥನಕವನಗಳನ್ನು ತನ್ನದಾಗಿಸಿಕೊಂಡಿವೆ. ಡಾ|| ಪಿ. ಎಸ್. ರಾಮಾನುಜಂ ಅವರ ಮುನ್ನುಡಿಯು ಹರಕೆ, ಡಾ|| ಮುಳಲಿ ವಸಂತಕುಮಾರ್‌ರವರ ಕೃತಿಯನ್ನು ಕುರಿತ ಮೆಚ್ಚುಗೆ ಎರಡೂ ಈ ಕೃತಿಯ ಬೆನ್ನಿಗಿವೆ.

ಘಟನೆಗಳ ಸರಣಿಯನ್ನು ನಾದವಿನ್ಯಾಸದಿಂದ ಶಕ್ತಗೊಳಿಸಿ ಅರ್ಥಪೂರ್ಣತೆಯನ್ನು ಸಾಧಿಸುವುದು, ಗದ್ಯದ ವಿಸ್ತಾರವನ್ನು ಪದ್ಯದ ಸಂಕ್ಷಿಪ್ತತೆಯಲ್ಲಿ ಅಡಕಗೊಳಿಸುವುದು, ಕೇಳುಗರ ಮನಸ್ಸಿನಲ್ಲಿ ಅನುರಣನಗೊಳ್ಳುವ ಛಾಪನ್ನು ಉಳಿಸಿಬಿಡುವುದು ಕಥನಕವನಗಳ ವೈಶಿಷ್ಟ್ಯ ಎಂದು ಪರಿಗಣಿಸುವುದಾದರೆ, ಈ ವೈಶಿಷ್ಟ್ಯವನ್ನು ಲತಾ ಅವರು ದಕ್ಕಿಸಿಕೊಂಡಿದ್ದಾರೆ. ತಮ್ಮ ಕಥನಕವನಗಳಿಗೆ ಪುರಾಣದಿಂದ, ಇತಿಹಾಸದಿಂದ, ಸಮಕಾಲೀನ ಸಾಮಾಜಿಕ ಸಮಸ್ಯೆಗಳಿಂದ ವಸ್ತುಗಳನ್ನು ಆರಿಸಿಕೊಂಡು ಸಮರ್ಥವಾಗಿ ನಿರ್ವಹಿಸಲು ಯತ್ನಿಸಿದ್ದಾರೆ. ಲತಾ ಅವರೊಳಗಿನ ಕಥಾ ಮನಸ್ಸು ಹಾಗೂ ಕವಿತೆಯ ಮನಸ್ಸುಗಳ ಸಮ್ಮಿಲನ ಇವರ ಕಥನಕವನಗಳಿಗೆ ಚೆನ್ನಲ ಬಾಗಿದೆ.

ಸಂಕಲನದ ಮೊದಲ ಕಥನಕವನ 'ಬೆಳಕಿನ ಎದೆಹಾಲು' ಪುಸ್ತಕಕ್ಕೂ ಶೀರ್ಷಿಕೆಯನ್ನಿತ್ತಿದೆ. ಬುದ್ಧಯುಗದ ಸಾಮಾಜಿಕ ಜೀವನವೊಂದರ ತುಣುಕು ಇಲ್ಲಿ ಹೆಪ್ಪುಗಟ್ಟಿದೆ. ವೇಶ್ಯೆಯೊಬ್ಬಳ ವಿಲಾಸ ಹಾಗೂ ಬೌದ್ಧ ಭಿಕ್ಷುವೊಬ್ಬನ ಮನೋನಿಗ್ರಹ ಎರಡೂ ಸಶಕ್ತವಾಗಿ ಚಿತ್ರಿತವಾಗಿವೆ. ಯೌವನದ ಉಕ್ಕಿನಲ್ಲಿ ವೈಭವಭರಿತ ಜೀವನ ನಡೆಸಿದ ವೇಶ್ಯೆ ಮಧುವಂತಿ ತನ್ನ ಬದುಕಿನ ಅಂತಿಮ ಘಟ್ಟದಲ್ಲಿ ಸಮಾಜದ ತಿರಸ್ಕಾರದ ಪರಾಕಾಷ್ಠತೆ ಮುಟ್ಟುವುದು ಕರುಣಾ ಪೂರಿತವಾಗಿ ವರ್ಣಿತವಾಗಿದೆ. ಅಂತೆಯೇ ತುಂಬುಲಾವಣ್ಯದಿಂದ ಅವಳು ಭಿಕ್ಷು ಉಪಗುಪ್ತನನ್ನು ಚಿರಸುಖವನ್ನು ಸವಿಯಲು ಆಹ್ವಾನಿಸಿದಾಗ ಆ ಚಿರಸುಖದ ಬೆಂಕಿ ತೋಳಿನ ತಂಪು ಅಪ್ಪುಗೆಯನ್ನೂ ಅದಕ್ಕಾಗಿ ಜನ್ಮಜನ್ಮಗಳು ತಪಿಸಿ ಕಾಯುವ ಸಾಧಕರಬಗೆಯನ್ನು ಸೂಚ್ಯವಾಗಿ ತಿಳಿಯ ಹೇಳಿ ಮತ್ತೆ ಬರುವ ಆಶ್ವಾಸನೆ ನೀಡಿ ಭಿಕ್ಷೆ ಪಡೆದು ಹೋಗುವ ಆತ ನಕ್ಷತ್ರ ಕರಗಿ ಇದ್ದಿಲಾದಂತೆ ಕೊಳೆತ ದೇಹದಿಂದ ನಾರುವ ಬಳಿಗೆ ಕಾಲ ಪಕ್ವವಾದಾಗಲೇ ಫಸಲಿಗೆ ಬಂದಂತೆ ಬಂದು ಸಾಂತ್ವನ ದನಿಸಿ ಪ್ರೀತಿಯ ನೇವರಿಕೆ ನೀಡುವುದು ಮಧುವಂತಿಯಂತೆ ಓದುಗರಿಗೂ ಧನ್ಯತೆಯ ಭಾವ ಹುಟ್ಟಿಸುತ್ತದೆ.

'ಮೋಸೆಸ್' ಈಜಿಪ್ಟಿನ ರಾಜಮನೆತನದಲ್ಲಿ ಬೆಳೆದು ಸಾಮಾನ್ಯರಿಗಾಗಿ ಮಿಡಿದ ಚೇತನದ ಕಥೆ. ಆದರೆ ಇಲ್ಲಿ ಕಥೆಯ ಎಳೆಗಳು ಹದವಾದ ಪ್ರಮಾಣದಲ್ಲಿ ಹೆಣೆದುಕೊಂಡಿಲ್ಲವಾದುದರಿಂದ ಅಸ್ಪಷ್ಟತೆಯ ಸುಳಿಗಳು ಕಾಡುತ್ತವೆ. ಆದರೂ ಈಜಿಪ್ಟಿನ ರಾಜಮನೆತನದ ದೌರ್ಜನ್ಯ ಹಾಗೂ ಕಠೋರತೆಗಳು ಮನಕಲಕುತ್ತವೆ.

"ಕಾಲದ ನದಿಯಲ್ಲಿ" ಒಂದು ಪುರಾಣ ಕಥೆ. ಅಂಕ ಅಹಂಕಾರ ನಿರಸನ ಇದರ ಮುಖ್ಯ ಆಶಯ. ರಾಜ ಸೌಭರಿಯು ಸೌಭರಿ ಮಹರ್ಷಿಯಾಗಿ ಪರಿವರ್ತನೆಗೊಳ್ಳುವ ಮನೋಭಾವದ ವರ್ಣನೆ ಅಚ್ಚುಕಟ್ಟಾಗಿದೆ. ಕಾಲದ ನದಿಯಲ್ಲಿ ತೇಲುವ ಸುಖದ ನಾವೆಯಂತಿದ್ದ ಸೌಭರಿಯ ಮನಸ್ಸು ಮಾತಿಗೆ ಮೀರಿದ ಚೆಲುವಿನ ಬಣ್ಣದ ಮುದ್ದಿನ ಮೀನೊಂದು ನೋಡ ನೋಡುತ್ತಿದ್ದಂತೆಯೇ ಮೃತ್ಯುವಶವಾದಾಗ ಅನುಭವಿಸುವ ತಳಮಳ ಪಡುವ ಯಾತನೆ ಮಾಡುವ ಚಿಂತನೆಗಳು ಪಂಪರನ್ನರನ್ನು ನೆನಪಿಗೆ ತರುವಂತಿವೆ. ಯಾರು ನೀನು ಎಂಬ ಪ್ರಶ್ನೆಗೆ ಏನೆಂದು ಉತ್ತರ ಹೇಳುವುದು? ರಾಜ್ಯವಿದ್ದಾಗ ಮಾತ್ರ ರಾಜ, ಯುದ್ಧ ವಿದ್ದಾಗ ಮಾತ್ರ ವೀರಯೋಧ, ಕುಟುಂಬ ವಿದ್ದಾಗ ಮಾತ್ರ ಇಂಥವನ ಮಗ, ಇಂಥವಳ ಪತಿ, ಈ ಮಕ್ಕಳ ತಂದೆ. ಅದಬಿಟ್ಟು ಹೇಳಬೇಕೆಂದರೆ!...., ಕೇವಲ ಜ್ಞಾನಾರ್ಥಿಯಾಗುವುದು, ವಿರಕ್ತಿಯನ್ನು ಮಾತ್ರವೇ ತನ್ನ ಉಸಿರಾಗಿಸಿಕೊಳ್ಳುವುದು. ಹಂತ ಹಂತವಾಗಿ ಈ ಸ್ಥಿತಿ ತಲುಪಿದ ಸೌಭರಿ ಬದುಕನ್ನು ಬಯಲಾಗಿಸಿಕೊಳ್ಳುವ ಉಪದೇಶ ಪಡೆಯುವ ಅರ್ಹತೆ ಹೊಂದಿ ನಿಜದ ನೆಲೆಯನ್ನು ಮುಟ್ಟುತ್ತಾನೆ.

'ಅರಿವು' ಕಥನಕವನವು ಶಿಲ್ಪಿಯೊಬ್ಬನ ಸ್ವಾರ್ಥ ಕರಗಿ ಅರಿವು ಅರಳಿದ ಕಥೆಯನ್ನು ವಿವರಿಸುತ್ತದೆ. ಕಥನ ವರ್ಣನೆಗಳೆರಡೂ ಸರಿ ಸಮವಾಗಿ ಹರಿದಿರುವ ಇದು ಆಕರ್ಷಕ

ಶಬ್ದ ಚಿತ್ರಗಳಿಂದ ಕೂಡಿದೆ. ಅವರ್ಣನೀಯ ಸೌಂದರ್ಯದ ದೇವಮೂರ್ತಿ ತನ್ನದೇ ಎಂದುಕೊಂಡು ಅದನ್ನು ದೇಗುಲದೊಳಗೆ ಕೂಡಿ ಬೀಗ ಹಾಕಿದ ಶಿಲ್ಪಿ ಕಡೆಗೆ ಪ್ರಜ್ಞೆ ಮೂಡಿ ಅದನ್ನು ಸಾರ್ವಜನಿಕರಿಗೆ ಒಪ್ಪಿಸಿದ್ದು ಹಾಗೂ ಅದರ ದರ್ಶನಕ್ಕೆ ಬರುವ ಜನಸಮೂಹವನ್ನು ದೇವಪರಿವಾರ ಎಂದು ಭಾವಿಸಿ ಹಿಗ್ಗಿದ್ದು ಸೊಗಸಾಗಿ ವ್ಯಕ್ತವಾಗಿದೆ.

'ಉರಿಮಂಡಲ' ವರದಕ್ಷಿಣೆಯ ಪೆಡಂಭೂತದ ಅಟ್ಟಹಾಸವನ್ನು ಅಭಿವ್ಯಕ್ತಿಸುತ್ತದೆ. ಇದು ದಿನದಿನವೂ ನಮ್ಮೊಳಗೆ ನಡೆಯುವ ಕಥೆ. ಈ ಆಶಯವನ್ನು ಹೊತ್ತ ಅನೇಕ ಕಥೆ, ಕಾದಂಬರಿ, ಕವನಗಳೂ ಬಂದಿವೆ. ಆ ನೋವಿನ ರಾಶಿಗೆ ಮತ್ತೊಂದು ಸೇರ್ಪಡೆ ಗೆಜ್ಜೆದನಿಯ ಪಲ್ಲವಿಯ ವ್ಯಥೆ. ಮೊಗ್ಗಾಗಿ ಅರಳಿ ಮದುವೆಯಲ್ಲಿ ಪರಿಮಳಿಸಿ ವರುಷದೊಳಗೆ ಗಂಡ ಅತ್ತೆಯರ ಕ್ರೂರ ಹಿಂಸೆಗೆ ಸಿಲುಕಿ ಕುಡಿಯೊಡೆಯದೇ, ಬಾಳ ಹಂದರಕೆ ಹಬ್ಬಿ ಹರಡದೇ ಹಿಡಿಬೂದಿಯಾಗಿ ಮಣ್ಣಲ್ಲಿ ಬೆರೆತ ವ್ಯಥೆಯ ಕಥೆ.

'ಹಸಿರು ಚಿತ್ರ' ಪರಿಸರದ ಕಥೆ. ವಾಸ್ತವದ ಘೋರವನ್ನು ಭವಿಷ್ಯತ್ತಿನ ಅಂಧಕಾರವನ್ನು ಚಿತ್ರಕಾರ ಹಾಗೂ ನದಿ, ಕಾಡು, ಕಡಲು, ಗಾಳಿಗಳ ಸಂಭಾಷಣೆಯನ್ನು ಆಕ್ರೋಶದಿಂದಲೇ ಕಥೆ ಚಿತ್ರಿಸಿದೆ. ಮರುಭೂಮಿ 'ಸಮ್ಮನೆ ದಣಿದು ಇಷ್ಟು ದೂರವೇಕೆ ಬಂದೆ? ನೀನಿರುವ ಊರೆ ನನ್ನಂತಾಗುತ್ತಿತ್ತು ಸ್ವಲ್ಪ ಕಾಲ ಕಳೆದಿದ್ದರೆ! ಎಂದು ಹಂಗಿಸುವ ಮಾತಿನಲ್ಲಿ ಭವಿತವ್ಯದ ಕರಾಳತೆ ಅಡಗಿದೆ.

ಇವನ್ನೆಲ್ಲಾ ನೋಡಿ ಅನುಭವಿಸಿದ ಚಿತ್ರಕಾರ ಚಿತ್ರ ಬರೆಯುವ ಆಲೋಚನೆ ಬಿಟ್ಟು ಗುದ್ದಲಿ ಸನಿಕೆಗಳು ಹಿಡಿದು ನೆಲದ ಹಾಳೆಯ ಮೇಲೆ ಹಸಿರಿನ ಚಿತ್ರ ಬರೆಯ ಹೊರಡುವುದು ಮನೋಜ್ಞವಾಗಿದೆ.

ಈ ಎಲ್ಲ ಕಥನಕವನಗಳಲ್ಲಿ ಭಾವಾನುಗುಣವಾಗಿ ಹರಿಯುವ ಶಬ್ದಚಿತ್ರಗಳು, ವರ್ಣನಾಮಯ ಘಟನೆಗಳು, ಸಂಭಾಷಣೆಗಳು ವಿಶಿಷ್ಟ ಸೌಂದರ್ಯವನ್ನು ರಚಿಸಿವೆ.

ಶಬ್ದಚಿತ್ರದ ಒಂದು ಉದಾಹರಣೆ,

ಕಾಡಿನ ಗಿಡಮರಗಳು
ತಲೆಗೆದರಿ ನಿಂತ ರಾಕ್ಷಸರಂತಾದವು !
ಸತ್ತ ಹಾವುಗಳಂತೆ ಜೋತಾಡಿದವು ಬಳ್ಳಿಗಳು
ಗುಳಿಬಿದ್ದ ಕಣ್ಣುಗಳಂತಾದವು ಹೂವುಗಳು

ಶೋಕಮನಸ್ಕನಾಗಿದ್ದ ರಾಜ ಸೌಭರಿಗೆ ಆನಂದದಾಯಕವಾಗಿದ್ದ ವನ ಒಮ್ಮೆಲೆ ಹೇಗೆ ನೀರಸವಾಗಿ ತೋರಿತು ಎಂಬುದನ್ನು ಈ ಶಬ್ದಚಿತ್ರಗಳು ಸಮರ್ಥವಾಗಿ ಕಟ್ಟಿ ಕೊಟ್ಟಿವೆ,

ಅಯ್ಯೋ ಹುಚ್ಚ ಕಲಾವಿದ
ಏಳು, ಎದ್ದೇಳು ಇಲ್ಲಿಂದ ಬೇಗ ಓಡು !
ಇನ್ನೇನು ಅಣುಬಾಂಬೊಂದು ಸಿಡಿಯಲಿದೆ
ನೀ ಕುಳಿತ ಮರದ ಕೆಳಗೆ !
ಅದೆಷ್ಟೋ ಬಾಂಬುಗಳ ನೆಟ್ಟಿದ್ದಾರೆ ಹೀಗೆ
ನಿನ್ನವರು, ನನ್ನ ಎದೆಯೊಳಗೆ !

ಈ ತುಣುಕು ಪ್ರಕೃತಿಯ ಮೇಲಿನ ಮಾನವದೌರ್ಜನ್ಯದ ಪರಮಾವಧಿಯನ್ನು ವರ್ಣಿಸಿದೆ.

‘ದಯಮಾಡಿ ಬಾ ಒಳಗೆ ಭಿಕ್ಷು
ನನ್ನ ಆತಿಥ್ಯ ಸ್ವೀಕರಿಸು’
‘ನಾನು ಸನ್ಯಾಸಿ ಹೊಸಲ ಬೆಂಕಿನದಿ ದಾಟು
ವಂತಿಲ್ಲ...’
‘ನನ್ನ ಕೋರಿಕೆಗೆ ಮನ್ನಣೆ ನೀಡಲಾರೆಯ
ಭಿಕ್ಷು ?
‘ನೀಡಲೇನಿದೆ ನನ್ನಲ್ಲಿ ತರುಣಿ, ಶೂನ್ಯವಲ್ಲದೆ ?

ಹೀಗೆಯೇ ಹರಿಯುತ್ತ ಸಾಗುವ ಸಂವಾದಗಳು ಅತ್ಯುತ್ತಮವಾದ ವ್ಯವಸ್ಥೆಯಲ್ಲಿ ಕಟ್ಟು ಪಡೆಯುತ್ತವೆ.

ಉಪಮೆ, ರೂಪಕಗಳನ್ನು ಸಮರ್ಥ ರೀತಿಯಲ್ಲಿ ಲತಾ ಬಳಸಿಕೊಂಡಿದ್ದಾರೆ.

‘ನೋವು ಹಿಂಸೆಗಳೇ ಗೆಳೆಯರು
ಹಸಿವು ಬಾಯಾರಿಕೆಗಳೇ ಬಂಧುಗಳು’
‘ಹತ್ತಿರದಲ್ಲೇ ಉರಿಯುತ್ತಿತ್ತೊಂದು ಚಿತೆ
ನೆಲದೊಡಲ ಕಿಚ್ಚೇ ಮೇಲೆದ್ದಂತೆ

ಈ ಮುಂತಾದ ಕಡೆಗಳಲ್ಲಿ ಉಪಮಾಲಂಕಾರ ಮನಸೆಳೆದು,

‘ಒಡಲಾಯಿತು ಸಂಜೆಯ ಮುಗಿಲು’, ‘ಓದೆಲು ನಕ್ಷತ್ರಖಚಿತ ಆಕಾಶದ ಹೊತ್ತಿಗೆ, ಬರೆಯಲು ಬೆರಳ ಬಳಪ,ಶೂನ್ಯದ ಹಲಗೆ’, ‘ಬೆಳಕಿನ ಎದೆಹಾಲು ಕುಡಿಯಬಂದ ಕತ್ತಲ ಶಿಶುಗಳು ನಾವು’....ಈ ರೀತಿಯ ಸಶಕ್ತ ರೂಪಕಗಳು ಪೂರಕವಾಗಿ ನಿಲ್ಲುತ್ತವೆ.

ಹೀಗೆ ಹಲವು ಹತ್ತು ಮಿಂಚಿನ ತುಣುಕುಗಳನ್ನು ಹೊಂದಿರುವ ‘ಬೆಳಕಿನ ಎದೆಹಾಲು’ ಕವಿಯರ್ರಾದ ಮಾಸ್ತಿ, ಕಡೆಂಗೊಡ್ಲು, ಎಕ್ಕುಂಡಿಯಂಥವರ ಪ್ರತಿನಿಧಿಯಾಗಿ ಲತಾ ಅವರು ನಿಲ್ಲಬಲ್ಲರು ಎಂಬ ಭರವಸೆಯನ್ನು ಹುಟ್ಟಿಸುತ್ತದೆ. ತನ್ನ ಸರಳತೆಯ ಮೂಲಕ ಮಕ್ಕಳ ಮನಸ್ಸಿಗೂ ಆಪ್ಯಾಯಮಾನವಾಗಬಲ್ಲ ಕಥನ ಕವನಗಳನ್ನು ನೀಡಬಲ್ಲರು ಎಂಬ ನಂಬಿಕೆಯನ್ನು ವ್ಯಕ್ತಪಡಿಸುತ್ತದೆ.

—ಡಾ|| ಮಂಜುಳ ಎಚ್. ಪಿ.
ಕನ್ನಡ ಉಪನ್ಯಾಸಕಿ
ಶ್ರೀ ವಿವೇಕಾನಂದ ಸಂಯುಕ್ತ ಪದವಿಪೂರ್ವ
ಕಾಲೇಜು, ಜಯಲಕ್ಷ್ಮೀಪುರಂ, ಮೈಸೂರು-೧೨

———

ಓದುಗರ ಅನಿಸಿಕೆ

ಪ್ರಧಾನ ಸಂಪಾದಕರು,

ನೀವು ಅಭಿಮಾನಪೂರ್ವಕ ಕಳುಹಿಸಿರುವ ದೇಜಗೌ ವಿಶೇಷ ಸಂಚಿಕೆ "ಪುಸ್ತಕ ಪ್ರಪಂಚ"ದ ಒಂದು ಪ್ರತಿ ತಲುಪಿ ಸಂತೋಷವಾಯಿತು, ಅಭಿನಂದನೆಗಳು.

ಶ್ರೀ ಮಂಜುನಾಥಸ್ವಾಮಿಯ ಅನುಗ್ರಹವಿರಲಿ

ಶ್ರೀ ಧರ್ಮಸ್ಥಳ — ಶ್ರೀ ವೀರೇಂದ್ರ ಹೆಗ್ಗಡೆಯವರು

ದಿನಾಂಕ ೩೦–೮–೯೯

ಮಾನ್ಯರೆ,

ನೀವು ವಿಶ್ವಾಸವಿರಿಸಿ ಕಳುಹಿಸಿದ 'ಪುಸ್ತಕ ಪ್ರಪಂಚ' ಜುಲೈ–ಆಗಸ್ಟ್ ೧೯೯೯ ದೇಜಗೌ ವಿಶೇಷ ಸಂಚಿಕೆ ಕೈಸೇರಿತು; ಕೃತಜ್ಞನು.

ಸಂಚಿಕೆ ಓದಿದೆ; ದೇಜಗೌರವರ ಉನ್ನತವ್ಯಕ್ತಿತ್ವ ಸಾರ್ವಜನಿಕ ಸಾಹಿತ್ಯಿಕ ಸೇವಾದುರಂಧರತೆಯನ್ನು ಹಲವಾರು ಲೇಖಕರು ಚಿತ್ರಿಸಿದ್ದಾರೆ. ಇಂತಹ ಒಂದ ಉತ್ತಮ ಸಂಚಿಕೆ ಪ್ರಕಟಿಸಿದ ಬಗ್ಗೆ ಸಂಬಂಧಪಟ್ಟ ಎಲ್ಲರಿಗೂ ನನ್ನ ಅಭಿನಂದನೆಗಳು.

ಇಂತು ನಿಮ್ಮ

ಪೆರಡಾಲ–೬೭೧೫೫೧ — ಕಯ್ಯಾರ ಕಿಞ್ಞಣ್ಣ ರೈ

ಕನ್ನಡದ ಗಂಡುಗಲಿ ಸಂಮಾನ್ಯ ಶ್ರೀ ದೇಜಗೌ ಅವರಿಗೆ ಸಪ್ರೇಮ ವಂದನೆಗಳು

"ಪುಸ್ತಕಪ್ರಪಂಚ"ದಲ್ಲಿ ನಿಮ್ಮನ್ನು ಕುರಿತಾದ ವಿಶೇಷ ಸಂಚಿಕೆಯನ್ನೋದಿ ಆನಂದತುಂದಿಲನಾದೆ. ನೀವು ಏರಿ ನಿಂತಿರುವ ಔನ್ನತ್ಯಕಂಡು ಮೂಕವಿಸ್ಮಿತನಾದೆ. ನಿಮ್ಮ ಸಾಧನೆಯ ಎತ್ತರಬಿತ್ತರಗಳನ್ನು ಕಂಡು ಬೆರಗಾದೆ. ನಿಮ್ಮನ್ನು ಗದ್ಯ ಸಾಮ್ರಾಟರೆಂದು ಮಾತ್ರ ತಿಳಿದು, ನಿಮ್ಮ ಗೊಮ್ಮಟವ್ಯಕ್ತಿತ್ವಕ್ಕೆ ಗೌರವ ಪೂರ್ವಕ ವಾಗಿ ತಲೆಬಾಗುತ್ತಿದ್ದೆನಾದರೂ ನಿಮ್ಮ ಎಲ್ಲಾ ಪ್ರಕಾರದ ಕೃತಿಗಳ ಪಟ್ಟಿಯನ್ನು ಓದಿ ಬೆಚ್ಚಿದೆ. ಆದರೆ ಅವುಗಳನ್ನೆಲ್ಲಾ ಓದುವ ಭಾಗ್ಯವನ್ನು ನನ್ನ ಪಾಲಿಗೆ ದೊರಕಿಸಿ ಕೊಳ್ಳಲಿಲ್ಲವಲ್ಲಾ ಎಂದು ನೊಂದುಕೊಂಡೆ.

"ಆಡು ಮುಟ್ಟದ ಸೊಪ್ಪಿಲ್ಲ" ಎಂಬುದು ನಮ್ಮ ನಾಡಿನ ಗಾದೆತಾನೇ. ಅದ ರಂತೆಯೇ ನೀವು ಕೈಯಾಡಿಸದ ಪ್ರಕಾರವೇ ಉಳಿದಿಲ್ಲವೇನೋ! ಅವುಗಳಲ್ಲಿಯೂ ಸಹ ಎಷ್ಟೊಂದು ವೈವಿಧ್ಯತೆ! ಏನೆಲ್ಲಾ ವೈಚಾರಿಕತೆ! ಎಂತಹ ಕೆಚ್ಚು! ಮೇರೆ ಗಾಣದ ನಿಮ್ಮ ಕನ್ನಡಾಭಿಮಾನವನ್ನು ಕಂಡು ನಾನು ತೀರಾ ಕುಬ್ಜನಾದೆ. ಬಡತನದ ಬೇಗೆಯಲ್ಲಿ ಬೆಂದು ಬೇಗುಸಿಗೊಳ್ಳುತ್ತಿದ್ದ ಕುಗ್ರಾಮದ ಸಂಸಾರವೊಂದರಲ್ಲಿ ಜನ್ಮ ಪಡೆದು, ಬಾಲ್ಯದಲ್ಲಿ ಕುರಿಕಾಯುವ ಕಾಯಕದಲ್ಲಿ ನೇಮಕಗೊಂಡ ನೀವು ಅದೆಷ್ಟು ಶ್ರಮದಿಂದ, ಛಲದಿಂದ, ಸಾಧನೆಯಿಂದ ವಿದ್ಯಾಕ್ಷೇತ್ರದಲ್ಲಿ ನರನೋರ್ವನೇರಬಹು ದಾದ ಅತ್ಯುನ್ನತವಾದ ಪದವಿಯನ್ನು ಏರಿ ಕುಳಿತು, ಕನ್ನಡಮ್ಮನ ಸೇವೆಯಲ್ಲಿ ನಿಮ್ಮನ್ನೇ ಪರಿಪೂರ್ಣವಾಗಿ ಅರ್ಪಿಸಿಕೊಂಡು, ವಿರೋಧಿಗಳೂ ಸಹ ಮೆಚ್ಚಿ ತಲೆ ದೂಗುವಂತೆ ಹತ್ತಾರು ರೀತಿಯಲ್ಲಿ ಸಮರ್ಪಕವಾಗಿ ಸೇವೆಗೈದಿರೋ ಆ ಭಗವಂತನಿಗೆ ಗೊತ್ತು! ಆ ಅದಮ್ಯಸಾಹಸವನ್ನು ನೆನೆಸಿಕೊಂಡರೆ ಎದೆ ಝಲ್ಲೆನ್ನುತ್ತದೆ. ಶಿರ ತನ್ನಷ್ಟಕ್ಕೆ ತಾನೇ ಬಾಗಿ ಗೌರವವನ್ನರ್ಪಿಸುತ್ತದೆ.

ಬ್ರಾಹ್ಮಣ್ಯವನ್ನು ವಿರೋಧಿಸುವ ನೀವು ನಿಜಬ್ರಾಹ್ಮಣರನ್ನು ಗುರುತಿಸಿ, ತೋರುವ ಗೌರವಾಭಿಮಾನವನ್ನು ಕಂಡು ನಿಮ್ಮ ನಿರ್ಮಾತ್ಸರ್ಯಬುದ್ಧಿಗೆ ಶರಣು ಹೋಗಿದ್ದೇನೆ. ಅರ್ಹತೆಯನ್ನು ಗುರುತಿಸಿ ಬೆನ್ನು ತಟ್ಟುವ ನಿಮ್ಮ ಔದಾರ್ಯವನ್ನು ಸ್ವತಃ ಅನುಭವಿಸಿ, ನಿಮ್ಮ ಬಗ್ಗೆ ಪೂಜ್ಯಬುದ್ಧಿ ಬೆಳೆಸಿಕೊಂಡಿದ್ದೇನೆ. ಇವೆಲ್ಲಕ್ಕೂ ಕಿರೀಟವಿಟ್ಟಂತೆ ತಮ್ಮ ಕವಿತಾಶಕ್ತಿಯನ್ನಿತ್ತು ಆಶೀರ್ವದಿಸಿದ ನನ್ನ ಪರಮಾರಾಧ್ಯರಾದ ರಸಋಷಿ ಕುವೆಂಪು ಅವರ ಬಗ್ಗೆ ನೀವು ತೋರುತ್ತಿರುವ ಭಕ್ತಿಗೌರವಾಭಿಮಾನಗಳಿಗೆ ಮಾರುಹೋಗಿದ್ದೇನೆ. ನಿಮ್ಮಂತಹ ನಿಜಶಿಷ್ಯನನ್ನು ಪಡೆದ ಅವರು ಧನ್ಯರು. ಅಂತೆಯೇ ಅಂತಹ ಮಹಾಗುರುವನ್ನು ಪಡೆದ ನೀವೂ ಸಹ ಭಾಗ್ಯವಂತರೇ! ಪರಮಹಂಸರಿಗೆ

ವಿವೇಕಾನಂದರು ದೊರಕಿದ ಹಾಗೆ ನೀವು ಅವರಿಗೆ ದೊರಕಿದಿರಿ. ಇಂತಹ ಆದರ್ಶ ಗುರುಶಿಷ್ಯರ ಸಮ್ಮಿಳನದಿಂದ ಕನ್ನಡನಾಡು ಧನ್ಯತೆ ಪಡೆಯಿತು. ಕನ್ನಡನಾಡಿನಲ್ಲಿ ಮೊತ್ತಮೊದಲ ಜ್ಞಾನಪೀಠ ಪ್ರಶಸ್ತಿ ಪಡೆದ ಅವರು ತಮ್ಮ ಹಿಂದೆ ಆರುಮಂದಿಯನ್ನು ಎಳೆದರು. ನಿಮ್ಮನ್ನು ಸಹ ಆ ಸಾಲಿಗೆ ಖಂಡಿತ ಸೇರಿಸಿಕೊಳ್ಳುತ್ತಾರೆಂಬ ಭರವಸೆ ನನಗಿದೆ. ಕನ್ನಡನಾಡಿನಲ್ಲಿ ದೊರಕಬಹುದಾದ ಎಲ್ಲಾ ಪ್ರಶಸ್ತಿಗಳನ್ನು ಪಡೆದಿರುವ ನಿಮಗೆ ಭಾರತದ ಆ ಮಹತ್ತರಪ್ರಶಸ್ತಿಯೂ ಸಹ ಆದಷ್ಟು ಬೇಗ ಲಭಿಸಲೆಂದು ನಿರುಪಮಜ್ಞಾನಿ ನಿಜಗುಣಶಿವಯೋಗಿಗಳನ್ನು ಅನನ್ಯಭಕ್ತಿಯಿಂದ ಪ್ರಾರ್ಥಿಸುತ್ತೇನೆ.

ಕೊನೆಯದಾಗಿ ನಿಮ್ಮಲ್ಲಿ ಒಂದು ಬೇಡಿಕೆ. "ಪುಸ್ತಕ ಪ್ರಪಂಚ"ದಲ್ಲಿ ಪ್ರಕಟವಾಗಿರುವ ನಿಮ್ಮೆಲ್ಲಾ ೧೨೩ ಲೇಖನಗಳ ಸಮಗ್ರ ಸಂಪುಟವನ್ನು ಹೊರತರಬೇಕೆಂದು ನಿಮ್ಮ ಮೇಲಣ ಸಲಿಗೆಯಿಂದ ಒತ್ತಾಯಿಸುತ್ತೇನೆ. ಬೇರೆಣಿಸಬೇಡಿ, ಬೇಸರಿಸಬೇಡಿ. ಆ ಲೇಖನಗಳ ಶೀರ್ಷಿಕೆ ನೋಡಿಯೇ ದಿಗ್ಭ್ರಾಂತನಾಗಿದ್ದೇನೆ. ಅವೆಲ್ಲಾ (೪೯ ವರ್ಷಗಳ ಅವಧಿಯಲ್ಲಿ ಬಂದ) ಒಕ್ಕಡೆ ದೊರಕುವಂತಾದರೆ ನಾಡಿನ ಸೌಭಾಗ್ಯಕ್ಕೆ ಎಣೆಯಿಲ್ಲದಂತಾಗುತ್ತದೆ. ದಯವಿಟ್ಟು ತಾತ್ಸಾರಮಾಡದೆ ನೀವೇ ಹೊರತನ್ನಿ, ಅಂತಾಗದಿದ್ದರೆ ಬೇರೆ ಇನ್ನಾವುದಾದರೂ ಸಂಸ್ಥೆಯಿಂದಲಾದರೂ ಹೊರಬರುವಂತೆ ಏರ್ಪಾಡು ಮಾಡಿರಿ. ನೀವು ಮನಸ್ಸು ಮಾಡಿದರೆ ಇದೇನು ಅಗಾಧವಾದುದೇನಲ್ಲ. ಖಂಡಿತ ನಿರಾಶೆಗೊಳಿಸಲಾರಿರೆಂದು ನಂಬಿ ವಿರಮಿಸುತ್ತೇನೆ.

ಇಂತು ಸಪ್ರೇಮ ವಂದನೆಗಳು
ಕುಮಾರ ನಿಜಗುಣಸ್ವಾಮಿಗಳು
ಅಧ್ಯಕ್ಷರು
ನಿಜಗುಣಾನುಭವ ಮಂಟಪ

ಚಿಲುಕವಾಡಿ—೫೭೧೪೦೨
ಕೊಳ್ಳೇಗಾಲ ತಾಲ್ಲೂಕು

ಮಾನ್ಯರೆ,

ದೇಜಗೌ ವಿಶೇಷ ಸಂಚಿಕೆ ಓದಿದೆ. ದೇಜಗೌರ ಬಗ್ಗೆ ವಿಶೇಷ ಸಂಚಿಕೆ ಹೊರ[illegible] ಸಲೇಬೇಕೆಂಬ ಶ್ರೀ ಕೋಣಂದೂರು ಲಿಂಗಪ್ಪನವರ 'ಕ್ರೂರ ಪ್ರೀತಿಯ' ಆಗ್ರಹ[illegible] ತಮ್ಮ ಪ್ರಧಾನ ಸಂಪಾದಕತ್ವದಲ್ಲೇ ತಮ್ಮ ಬಗ್ಗೆಯೇ ವಿಶೇಷ ಸಂಚಿಕೆ ಹೊರಡಬಾ[illegible] ದೆಂಬ ಶ್ರೀ ದೇಜಗೌರವರ ಸೌಜನ್ಯಪೂರ್ವಕ ದಿಟ್ಟ ನಿಲುವು; ಸದಸ್ಯರುಗಳ ಕಾತುರ[illegible] ತಾತ್ಕಾಲಿಕ ಪರಿಹಾರ; ಸಂಚಿಕೆ ಸಿದ್ಧತೆ–ಬಿಡುಗಡೆಯ ಬಗ್ಗೆ ಉಂಟಾದ ಬಹುಸೂಕ್ಷ್[illegible] ಸನ್ನಿವೇಶಗಳನ್ನು ಬಹಳ ಸರಳವಾಗಿ, ಯಾರ ಮನನೋಯದಂತೆ ತಿಳಿಸಿದ್ದಾ[illegible] ಶ್ರೀ ಚಂದ್ರಶೇಖರಾರಾಧ್ಯರು.

ವಿವಿಧ ವಿದ್ವಾಂಸರು, ಪರಿಣತರು ಅನುಭವಿಗಳು ದೇಜಗೌರವರ ಅವಿರತ ಕನ್ನಡದ ಸೇವೆಯನ್ನು, ತಮ್ಮ ಶ್ರದ್ಧಾ ಪೂರ್ವಕ ಅರ್ಪಿಸಿದ ಲೇಖನ ಕುಸುಮಗಳು ಇದರಲ್ಲಿವೆ. ವಿವಿಧ ಬಗೆಯ ಕುಸುಮಗಳನ್ನು ಪಡೆಯುವ ಬಯಕೆಯಾಗಿದ್ದರೂ ಕೆಲವೆಡೆ ಒಂದೇಥರದ ಹೂವಿನ ಕಂಪು ಬಂದು ಮಾಲೆಯ ಸೊಬಗನ್ನು ಹೆಚ್ಚಿಸಿದೆ.

ಆರಂಭದಿಂದ ಈವರೆಗಿನ 'ಪುಸ್ತಕ ಪ್ರಪಂಚ'ದಲ್ಲಿ ಪ್ರಕಟವಾಗಿರುವ ದೇಜಗೌ ಅವರ ಲೇಖನಗಳ ಶೀರ್ಷಿಕೆ, ಅವರ ಜೀವನದ ಪ್ರಮುಖ ಘಟ್ಟಗಳೂ, ಈ ಸಂಚಿಕೆಯಲ್ಲಿ ಸೇರಿ, ಸಾಹಿತ್ಯಾಭ್ಯಾಸಿಗಳಿಗೆ ಮಾರ್ಗದರ್ಶನ ಮಾಡುವ ಮಹತ್ವದ ಅವಕಾಶ ಕಲ್ಪಿತವಾಗಿದೆ.

ವಿಶೇಷ ಸಂಚಿಕೆಯಲ್ಲಿನ ಈ ಉದಾತ್ತವಾಕ್ಯಗಳು ಗಮನಾರ್ಹವಾದುವು:

"ದೇಜಗೌ ಅವರು ಇಡೀ ಕನ್ನಡನಾಡಿನ ಕುಲಪತಿಗಳು. ಮೂರು ವರ್ಷ ಅಥವಾ ಐದು ವರ್ಷದ ಕುಲಪತಿಗಳಲ್ಲ. ಆಜೀವ ಕುಲಪತಿಗಳು."

"ಕನ್ನಡನಾಡಿನ ಚಕ್ರವರ್ತಿ ನೃಪತುಂಗ ಎಂದು ಹೇಳುವಂತೆ, ಕನ್ನಡನಾಡಿನ ಕುಲಪತಿ ದೇಜಗೌರೆಂದು ಹೇಳಬೇಕು."

"ಮಾನಸಗಂಗೋತ್ರಿ ಕುವೆಂಪು ಅವರ ಮಾನಸ ಶಿಶು ದೇಜಗೌ ಅವರ ಕ್ರತುಶಕ್ತಿಯ ಕೂಸು."

"ಭಾಷಾವಿಜ್ಞಾನ, ಜಾನಪದ, ಭಾಷಾಂತರ, ಶಾಸನ, ವಿಶ್ವಕೋಶ, ಹರಿದಾಸ ಸಾಹಿತ್ಯ, ಸಂಪಾದನ ಮೊದಲಾದ ಎಲ್ಲ ಅಧ್ಯಯನ ಕ್ಷೇತ್ರಗಳೂ ಒಂದೇ ಭಾವಣಿಯ ಅಡಿಯಲ್ಲಿ ಬರುವಂತೆ ಮಾಡಿದವರಲ್ಲಿ ದೇಜಗೌ ಮೊದಲಿಗರು."

"ಎತ್ತರದ ವ್ಯಕ್ತಿತ್ವ, ಬೆರಗುಗೊಳಿಸುವ ಸಾಧನೆ, ಹುಟ್ಟು ಹೋರಾಟಗಾರಿಕೆ, ದಣಿವರಿಯದ ನಿರ್ಮಾಪಕತ್ವ, ಸಾಹಿತ್ಯ ಸಂಸ್ಕೃತಿಗಳ ಸಂವರ್ಧನೆ,ಶ್ರೇಷ್ಠ ಸಂಶೋಧನೆ, ಅಧ್ಯಾಪಕತ್ವ, ದೂರದೃಷ್ಟಿಯ ಉತ್ತಮ ಆಡಳಿತಗಾರಿಕೆ, ಮಹಾಕನಸುಗಾರಿಕೆ, ಇವೆಲ್ಲ ಗುಣವೈಶಿಷ್ಟ್ಯಗಳ ಸಮಷ್ಟಿ, ಶ್ರೀ ದೇಜಗೌ."

"ತೆಂಗಿನ ತೋಟವನ್ನು ತೋರಿಸುತ್ತ, 'ವ್ಯಕ್ತಿಗಳನ್ನು ಪೋಷಿಸಿದರೆ ಕೊನೆಗೆ ದೊರಕುವುದು ನಿರಾಶೆ, ವೃಕ್ಷಗಳನ್ನು ಪೋಷಿಸಿದರೆ ದೊರೆಯುವುದು ಸಂತೃಪ್ತಿ' ಎಂದರು. ಇದು ದೇಜಗೌರವರ ಅನುಭವದ ವಾಣಿ."

"ಕರ್ನಾಟಕದ ಅಪ್ರತಿಮ ರಾಜರು ರಾಜ್ಯಗಳನ್ನು ಕಟ್ಟಿದರು. ದೇಜಗೌ ಸಂಸ್ಥೆಗಳನ್ನು ಕಟ್ಟಿದರು. ರಾಜರು ಗಡಿಗಳನ್ನು ವಿಸ್ತರಿಸಿದರು. ಇವರು ಜ್ಞಾನದ ದಿಗಂತಗಳನ್ನು ವಿಸ್ತರಿಸಿದರು. ರಾಜರು ಕಟ್ಟಿದ ಸ್ಥಾವರಗಳು ಭಗ್ನಾವಶೇಷಗಳಾದವು. ಇವರು ಕಟ್ಟಿದ ಜ್ಞಾನದೇಗುಲಗಳು ಚಿರಂತನವಾದವುಗಳು. ಇಲ್ಲಿ ಹೊತ್ತಿಸಿದ ಬೆಳಕಿನ ದೀವಟಿಗೆಗಳು ಎಂದೂ ಆರದವು."

"ದೇಜಗೌ ಅವರ ಅನುವಾದಗಳು, ವಿಶ್ವ ಸಂಸ್ಕೃತಿಯ ಕಿಟಕಿಗಳು."

"ದೇಜಗೌ ಅವರು ಕನ್ನಡದ ಕಳಕಳಿಯಿಂದ ಕನ್ನಡಿಗರಿಗೆ ಸೀಟು ಕೊಡಿಸಿದರು. ಸೀಮಿತವಾಗಿದ್ದ ಉಡುಪಿಯ ರಥ, ಚಾಮುಂಡಿಯ ರಥವಾಯಿತು. ಗೋಪಾಲನಿಂದ ಭೂಪಾಲನವರೆಗೆ ಎಲ್ಲರೂ ಕನ್ನಡದ ರಥವನ್ನು ಎಳೆಯುವಂತಾಯಿತು.

"ಜೇನ್ನೊಣದ ಕುಟುಕು ಅವರಿಗೆ, ಜೇನು ನಮಗೆ."

"ನಿರಂತರ ಭವಿಷ್ಯ ಚಿಂತನೆ ಆದರೆ ವರ್ತಮಾನದಲ್ಲಿ ಅವರದ್ದು ದಿಟ್ಟನಡೆ."

"ಗಂಟುಗಳು ಉಂಟಾಗುವುದು ಜೀವನಧರ್ಮ, ಅದನ್ನು ಆಗಾಗಲೇ ಬಿಡಿ ಬಿಡಿಯಾಗಿ ಬಿಡಿಸಿ ಕಗ್ಗಂಟುಗಳಾಗದಂತೆ. ಎಚ್ಚರವಹಿಸುವುದೇ ಸಮರ್ಥ ಆಡಳಿತೆಯ ರಹಸ್ಯ. ಅಂಥ ಸಮರ್ಥ ಆಡಳಿತಗಾರರು ದೇಜಗೌ."

"ದೇಜಗೌ ಅವರು ಕನ್ನಡಭಾಷೆ–ಸಾಹಿತ್ಯ–ಸಂಸ್ಕೃತಿಗಳ ಮೇಲಾಗಬಹುದಾದ ದಾಳಿಯ ಸೂಕ್ಷ್ಮಗಳನ್ನು ಗ್ರಹಿಸುತ್ತ ಅದರ ಆಯಕಟ್ಟುಗಳ ಭದ್ರತೆಗಾಗಿ ದುಡಿದವರು."

"ದೇಜಗೌ ಅವರ ಜೀವನ ಹೋರಾಟದ ಬದುಕು. ಅವರ ಅಭಿಪ್ರಾಯಕ್ಕೆ ಭಿನ್ನಾಭಿಪ್ರಾಯ ವಿಡೆಯೇ ಹೊರತು ಯಾರ ನಿರಾಕರಣೆ ಇಲ್ಲ. ಭಿನ್ನಾಭಿಪ್ರಾಯ ಮೂಡಿಕೆಯೇ ವೈಚಾರಿಕ ಅಸ್ತಿತ್ವದ ಸಂಕೇತ."

"ಸಾಹಿತ್ಯ, ಸಮಾಜ, ಸ್ತ್ರೀ ವಿದ್ಯಾಭ್ಯಾಸ, ಜಾನಪದ, ಸೀಮಾ ಪುರುಷ ಪರಿಚಯ, ವಿವಿಧ ಮತಗಳ ತೌಲನಿಕ ವಿಚಾರ, ಹೋರಾಟದ ಅಗತ್ಯ, ಭಾಷಾ ಸಮಸ್ಯೆ, ಜನ ಸಾಮಾನ್ಯರ ಬಾಳು ಬದುಕು, ಹೀಗೆ ಅಸಂಖ್ಯಾತ ವಿಷಯಗಳ ಮೇಲೆ ದೇಜಗೌ ಉಪನ್ಯಾಸ ನೀಡಿದ್ದಾರೆ."

"ದೇಜಗೌರವರ ಸರ್ವತೋಮುಖ ಸಾಹಿತ್ಯ ಸೇವೆಯಲ್ಲಿ ಭಾಷಾಂತರ, ಜೀವನ ಚರಿತ್ರೆ, ವಿಮರ್ಶೆ, ಪ್ರವಾಸ ಕಥನ, ಸಂಶೋಧನೆ, ಗ್ರಂಥ ಸಂಪಾದನೆ ಇತ್ಯಾದಿ ಎಲ್ಲವೂ ಸೇರಿವೆ."

"ರಚನಾತ್ಮಕ ಸಾಹಿತ್ಯವನ್ನು ರಚಿಸುವಲ್ಲಿ ದೇಜಗೌ ಹೇಗೆ ಸಿದ್ಧಹಸ್ತರೋ ಹಾಗೆಯೇ ರಚಿಸಿದ ಸೃಜನಾತ್ಮಕ ಸಾಹಿತ್ಯವನ್ನು ವಿಮರ್ಶೆಯ ಒರೆಗಲ್ಲಿಗೆ ಹಚ್ಚಿ ನೋಡುವಲ್ಲಿಯೂ ಅದ್ವಿತೀಯರು."

"ದೇಜಗೌ ಕನ್ನಡ ಸಾಹಿತ್ಯಕ್ಕೆ ಹೊಸ ಹೊಗರು ನೀಡಿದ್ದಾರೆ."

"ದೇಜಗೌ ಅವರ ಬಗ್ಗೆ ಎಷ್ಟೆಲ್ಲಾ ಬರೆದರೂ ಅದು ಕಡಲಲೆಗಳ ಅಂಚಿನ ತುದಿ. ಮರಳರಾಶಿಯ ಒಂದು ಕಣ. ಅವರ ಬಗ್ಗೆ ಬರೆದಿರುವುದು ಅಲ್ಪ. ಬರೆಯ ಬೇಕಾದದ್ದು ಅನಂತ."

"ಕನ್ನಡ ಸಾಹಿತ್ಯ ಕ್ಷೇತ್ರ ಮತ್ತಷ್ಟು ಸಂಪದ್ಭರಿತವಾಗಲಿ. ಶ್ರೀ ದೇಜಗೌ ಅವರನ್ನು ಬಹುಕಾಲ ನಮ್ಮೊಂದಿಗಿಟ್ಟುಕೊಳ್ಳುವ ಸುಯೋಗ ನಮ್ಮದಾಗಲಿ. ಅವರು ನೂರ್ಕಾಲ ಹದುಳವಾಗಿರಲಿ."

"ಈ ಸಂಚಿಕೆಯಿಂದ ಎಲ್ಲ ಕನ್ನಡಿಗರಿಗೆ ಸಂತೋಷವಾಗುವುದೆಂಬ ಬಗ್ಗೆ ಎರಡು ಮಾತಿಲ್ಲ. ದೇಜಗೌ ಅವರ ವೈವಿಧ್ಯಮಯವಾದ ಸಾಹಿತ್ಯ ಶಕ್ತಿ ಮತ್ತು ವ್ಯಕ್ತಿತ್ವಗಳ ಬಗ್ಗೆ ಅರಿತವರು ಇದರಲ್ಲಿ ಬರೆದು ಉಪಕರಿಸಿದ್ದಾರೆ. ಅವರೆಲ್ಲರಿಗೂ ನನ್ನ ನೆನಕೆ ಸಲ್ಲುತ್ತದೆ."

ಶ್ರೀರಾಂಪುರ–೨೩ ಮಾಧವರಾವ್ ಮುಧೋಳ್
೪–೯–೯೯ ಮೈಸೂರು

ಮಾನ್ಯ ಸಂಪಾದಕರೆ,

ಜುಲೈ–ಆಗಸ್ಟ್ ೧೯೯೯ರ ಪುಸ್ತಕ ಪ್ರಪಂಚ ವಿಶೇಷ ಸಂಚಿಕೆ ಸಂಗ್ರಹ ಯೋಗ್ಯವಾಗಿದೆ. ನಾಡೋಜ, ಪಂಪ ಪ್ರಶಸ್ತಿ ವಿಜೇತ ಪ್ರೊ|| ದೇಜಗೌರವರ ನಾಡು–ನುಡಿ ಸೇವೆಯನ್ನು ಪುಸ್ತಕ ಪ್ರಪಂಚ ವಿಶೇಷ ಸಂಚಿಕೆಯ ಲೇಖನಗಳು ಚೆನ್ನಾಗಿ ಪ್ರತಿಬಿಂಬಿಸಿವೆ. ಎಲ್ಲಾ ಲೇಖಕರಿಗೆ ಹಾಗೂ ಪುಸ್ತಕ ಪ್ರಪಂಚ ಸಂಪಾದಕ ಮಂಡಳಿಗೆ ನನ್ನ ವಂದನೆಯನ್ನು ಸಲ್ಲಿಸುತ್ತೇನೆ.

ಶ್ರೀ ಕೆ. ಸಚ್ಚಿದಾನಂದಯ್ಯ ಅವರು ಬರೆದಿರುವ ದೇಜಗೌ ಹಾಗೂ ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ಎಂಬ ಲೇಖನ ದೇಜಗೌ ಕಟ್ಟಿ ಬೆಳೆಸು ತ್ತಿರುವ ಮೈಸೂರಿನ ಕೇಂದ್ರ ಭಾಗದಲ್ಲಿರುವ ಶ್ರೀ ಕುವೆಂಪು ಟ್ರಸ್ಟಿನ ಕಥೆಯಾಗಿದೆ. ಕುವೆಂಪು ಎಂದರೆ ದೇಜಗೌ ಅವರಿಗೆ ಪ್ರಾಣ, ಅವರೆ ಅವರ ಪಾಲಿನ ಗುರು, ತಂದೆ, ದೈವ ಎಲ್ಲ. ಕುವೆಂಪು ಅವರೆ ಒಂದು ಕಡೆ "ರಾಮಕೃಷ್ಣ ಪರಮಹಂಸರು ನನ್ನ ಆಧ್ಯಾತ್ಮಿಕದ ಗುರುಗಳಾದರೆ ದೇಜಗೌ ಅವರು ನನ್ನ ಲೌಖಿಕದ ಮಾರ್ಗದರ್ಶಕರು" ಎಂದಿದ್ದಾರೆ. ಕುವೆಂಪು ಅವರ ಕೊನೆಯ ಕಾಲದಲ್ಲಿ ದೇಜಗೌ ಅವರನ್ನು ಆಗೀಂದಾಗ್ಗೆ

ಭೇಟಿ ಮಾಡುತ್ತಿದ್ದರು. ಅವರ ಜೊತೆ ನಾನೂ ಹೋಗುತ್ತಿದ್ದೆ. ಒಂದು ದಿನ ಕುವೆಂಪು ಅವರು ದೇಜಗೌ ಅವರ ಮುಂಗೈಯನ್ನು ಹಿಡಿದುಕೊಂಡು ಕಣ್ಮುಚ್ಚಿ ತಮ್ಮ ಹಣೆಗೆ ಒತ್ತಿಕೊಳ್ಳತೊಡಗಿದರು. ಮಾತಿಲ್ಲ, ಬರಿ ಮೌನ. ನಾನೂ ಬೆರಗಾಗಿ ನೋಡುತ್ತಿದ್ದೆ. ಇದು ನಾಲ್ಕೈದು ನಿಮಿಷ ನಡೆಯಿತು. ಶ್ರೀ ರಾಮಕೃಷ್ಣರು ಶ್ರೀ ವಿವೇಕಾನಂದರ ತಲೆಯ ಮೇಲೆ ತಮ್ಮ ಕಾಲನ್ನಿಟ್ಟ ಸಂದರ್ಭ ನನ್ನ ನೆನಪಿಗೆ ಬಂತು. ಇದು ದೇಜಗೌ ಕುವೆಂಪು ಸಂಬಂಧ ಯಾವ ಬಗೆಯದು ಎಂಬುದನ್ನು ತೋರುತ್ತದೆ.

ಶ್ರೀ ಕುವೆಂಪು ಟ್ರಸ್ಟ್ ದೇಜಗೌ ಅವರ ಅಪಾರ ಶ್ರಮದ ಫಲ. ಅವರ ಮಡದಿ ಮಕ್ಕಳ ಕಾಣಿಕೆಯೂ ಇದೆ. ದೇಜಗೌ ಕಲ್ಲು ಕೊರಕಲುಗಳ ನಡುವೆ ವನರಾಶಿಯನ್ನು ಅರಳಿಸುತ್ತಿದ್ದಾರೆ. ಬಡವರ ನಿರ್ಗತಿಕರ ಮಕ್ಕಳಿಗಾಗಿ ಶಾಲೆಗಳನ್ನು ತೆರೆದಿದ್ದಾರೆ. ಅನಾಥಾಲಯ ನಿರ್ಮಾಣ ಸಿದ್ಧತೆಯಲ್ಲಿದೆ. ಸರ್ವಮಂದಿರ ನಿರ್ಮಾಣ ಅವರ ಜೀವನದ ಮಹದಾಸೆಯಾಗಿದೆ. ಕುವೆಂಪು ಸ್ಮಾರಕೋದ್ಯಾನ ರೂಪುಗೊಳ್ಳುತ್ತಿದೆ. ದೇಜಗೌ ಈ ಕಾರ್ಯಗಳಿಗಾಗಿ ದಿನದಿನಕ್ಕೆ ಯೌವನಿಗಳಾಗುತ್ತಿದ್ದಾರೆ ಮುಪ್ಪು ದೂರವಾಗುತ್ತಿದೆ. ಕಾಯಕದಲ್ಲಿ ಕೈಲಾಸ ಕಾಣುತ್ತಿದ್ದಾರೆ. ನಿಜವಾದ ಅರ್ಥದಲ್ಲಿ ಬಸವಣ್ಣನವರ ಅನುಯಾಯಿಗಳು ದೇಜಗೌ ಎಂದರೆ ತಪ್ಪಾಗದು.

ದೇಜಗೌ ಕನ್ನಡಕ್ಕಾಗಿ ದುಡಿದ ಕತೆಯನ್ನು ಡಾ|| ಎಂ. ಎಂ. ಕಲಬುರ್ಗಿ ಅವರು, ಪ್ರಾಧ್ಯಾಪಕರಾಗಿ ಮಾಡಿದ ಸಾಧನೆಗಳನ್ನು ಡಾ|| ಪ್ರಧಾನ ಗುರುದತ್ತರು, ಜಾನಪದ ಕ್ಷೇತ್ರಕ್ಕೆ ದೇಜಗೌ ನೀಡಿದ ಕೊಡುಗೆಯನ್ನು ಪ್ರೊ|| ಜೆ. ಕೆ. ರಮೇಶ ಅವರು ತುಂಬಾ ಚೆನ್ನಾಗಿ ವಿವರಿಸಿದ್ದಾರೆ.

ಕುವೆಂಪು ನಿಜಲಿಂಗಪ್ಪನವರ ಮಾತುಗಳು ಕಿರೀಟಪ್ರಾಯವಾಗಿವೆ.

ದೇಜಗೌ ಅವರ ಎಲ್ಲಾ ಸಾಹಿತ್ಯ ಕೃಷಿಯನ್ನು ಸಂಪುಟಗಳ ರೂಪದಲ್ಲಿ ತರಬೇಕಾದ ಕೆಲಸ ಜರೂರಾಗಿ ಆಗಬೇಕಾಗಿದೆ. ಪುಸ್ತಕ ಪ್ರಪಂಚದಲ್ಲಿ ಬಂದಿರುವ ಎಲ್ಲಾ ಲೇಖನಗಳಾದರೂ ಆದಷ್ಟು ಬೇಗ ಒಂದೆಡೆ ದೊರಕುವಂತಾದರೆ ಒಳ್ಳೆಯದು.

ಜ್ಞಾನಪೀಠ ಪ್ರಶಸ್ತಿ ದೇಜಗೌ ಅವರಿಗೆ ಬಹುಬೇಗ ಲಭಿಸಲಿ ಎಂಬುದು ಕನ್ನಡಿಗರ ಮಹದಾಸೆಯಾಗಿದೆ.

ಎಂ. ಎಸ್. ಲಿಂಗಪ್ಪ
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಲೇಖಕರು ಮತ್ತು ಲೇಖನಗಳು

ಶ್ರೀ/ಶ್ರೀಮತಿಯವರಾದ

ಶ್ರೀ/ಶ್ರೀಮತಿಯವರಾದ

Reg. No. KRNM-29 / WPP 6

LICENCE No. 21
LICENCED TO POST WITH PAYMENT

Edited by Chandrashekhararadhya Printed by Papanna
Printed & Published by Karnataka State Adult Education Council
5/1 Vinoba Road, Manasa Gangothri, Mysore-570 006.